ಸಶಕ್ತವಾಗಿದೆ ಎನ್ನತಕ್ಕಂತಾದ್ದನ್ನು ಈ ರಿಪೋರ್ಟ್‌ನಿಂದ ಕಾಣುತ್ತೇವೆ. ಈ ರಿಪೋರ್ಟ್ ಇನ್ನು ಚನ್ನಾಗಿ ಇರಬಹುದಾಗಿತ್ತು. ಅಂತ ಮಾನ್ಯ ಮಂತ್ರಿಗಳಿಗೆ ಸೂಚನೆ ಮಾಡುತ್ತೇನೆ. ಗ್ರಾಮಾಭಿವೃದ್ಧಿ ರಿಪೋರ್ಟ್‌ನಲ್ಲಿ, ಗ್ರಾಮಾಭಿವೃದ್ಧಿಯ ಬಗ್ಗೆ ಏನೆಲ್ಲಾ ಸಾದನೆಯಾಗಿದೆ, ಏನು ಯೋಜನೆಗಳು ಇವೆ, ಯಾವರೀತಿ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ ಎಂಬ ಸ್ಪಷ್ಟ ಚಿತ್ರ ಇತ್ತು. ಅದೇ ರೀತಿಯಲ್ಲಿ ಈ ರಿಪೋರ್ಟ್ ಬಂದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಆದರೂ ಕೂಡ ಇದು ಅನೇಕ ತಪ್ಪುಗಳಿಂದ ಕೂಡಿದೆ. ಕ್ಷಾಮ ನಿವಾರಣೆಯ ಬಗ್ಗೆ ೧೯ ಜಿಲ್ಲೆಗಳಿಗೆ ಡಿ.ಪಿ.ಎ.ಪಿ. ಪ್ರೋಗ್ರಾಂ ಕೊಟ್ಟಿದೆ ಎಂದು ಹೇಳಿದ್ದಾರೆ ಇವೊತ್ತು ೧೯ ಜಿಲ್ಲೆಗಳಲ್ಲೂ ಕ್ಷಾಮ ಇಲ್ಲ. ಇದ ಕೆಲವು ಜಿಲ್ಲೆಗಳಲ್ಲಿ ಮಾತ್ರ ಕ್ಷಾಮ ಇದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಯೋಜನೆಗಳು ಇವೆ. ಈ ರಿಪೋರ್ಟಿನಲ್ಲಿ ೧೯ ಜಿಲ್ಲೆಗಳಲ್ಲಿ ಕ್ಷಾಮ ನಿವಾರಣೆ ಇದೆ ಎಂದು ಹೇಳಿದ್ದಾರೆ. ಈ ತರದ ತಪ್ಪುಗಳಿಂದ ಈ ವರದಿ ಕೂಡಿದೆ. ಇದನ್ನು ಪರಿಷ್ಕರಿಸಬೇಕೆನ್ನುವ ಸೂಚನೆಯನ್ನು ಮಾಡುತ್ತೇನೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ತಂತ್ರಜ್ಞರಿಂದ ಕೂಡಿದ್ದರೂ ಆರ್ಥಿಕ ಸ್ಥಿತಿಗತಿಗಳ ಸಮತೋಲನದ ಬಗ್ಗೆ ಯೋಚಿಸುವಂತಾದ್ದು ಆಗಿಲ್ಲ. ಅದು ಬಹಳ ಸ್ಪಷ್ಟವಾಗಿರಬೇಕಾಗಿತ್ತು, ಇದರಲ್ಲಿ ತಪ್ಪುಗಳಿಂದ ಕೂಡಿರತಕ್ಕಂತಾದ್ದು ಇದೆ. ಮುಂದಿನ ಸಾರಿ ಇದರ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಒಂದು ವಿಷಯದಲ್ಲಿ ಮಾತ್ರ ಇವರಿಗೆ ಶ್ಲಾಘನೆ ಹೇಳಬೇಕಾಗಿದೆ. ಅನೇಕ ಯೋಜನೆಗಳು ಬಹಳ ಚೆನ್ನಾಗಿ ಬಂದಿವೆ, ಮುಖ್ಯವಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಬಗ್ಗೆ ಒಂದು ಕ್ರಮವನ್ನು ತೆಗೆದುಕೊಂಡು ಅಲ್ಲಿ ಅಧ್ಯಯನವನ್ನು ಮಾಡಿ ಕುಟುಂಬಗಳನ್ನು ಗುರುತಿಸಿ ಉದ್ಯೋಗವಕಾಶ ಕಲ್ಪಿಸತಕ್ಕದ್ದು, ಐ.ಆರ್.ಡಿ ಸ್ಕೀಮ್, ಇವೆಲ್ಲಾ ಗ್ರಾಮ ಮಟ್ಟದಿಂದ, ಅಭಿವೃದ್ಧಿಯನ್ನು ಸಾಧನೆ ಮಾಡತಕ್ಕದ್ದು, ಇವುಗಳ ಬಗ್ಗೆ ಎಷ್ಟು ಗಮನ ಕೊಡಲಾಗಿದೆ ಎನ್ನುವುದು ತೋರಿಸಿಕೊಟ್ಟಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಬಗ್ಗೆ ಕೈಗೊಂಡ ಅನೇಕ ಯೋಜನೆಗಳನ್ನು ಮಾಡಿದ್ದಾರೆ ಅದರ ಬಗ್ಗೆ ಶ್ಲಾಘಿಸಬೇಕಾದ್ದು ಇದೆ. ಉದಾಹರಣೆಗೆ ಹೇಳಬೇಕು ಎಂದರೆ ವರ್ಲ್ಡ್ ಬ್ಯಾಂಕ್ ಪ್ರೋಗ್ರಾಂನಿಂದ ಅನೇಕ ಯೋಜನೆಗಳನ್ನು ಅಳವಡಿಸಿಕೊಂಡಿದ್ದಾರೆ. ವಿಶ್ವಬ್ಯಾಂಕಿನಿಂದ ಸಿಕ್ಕಿರತಕ್ಕ ಸಹಾಯಧನ ಮತ್ತು ಕೇಂದ್ರಸರ್ಕಾರದಿಂದ ಸಿಕ್ಕಿರತಕ್ಕ ಸಹಾಯಧನವನ್ನು ಬಹಳ ಬುದ್ಧಿವಂತಿಕೆಯಿಂದ ಉಪಯೋಗಿಸಿಕೊಂಡಿದ್ದಾರೆ ಇದಕ್ಕೆ ಅವರು ಶ್ಲಾಘನೆಗೆ ಅರ್ಹರಾಗಿದ್ದಾರೆ. ಇನ್ನು ಒಂದೇ ಒಂದು ವಿಷಯದ ಬಗ್ಗೆ ಹೆಚ್ಚು ಒತ್ತಾಯ ಪೂರ್ವಕವಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ನನಗೆ ಹಿಂದೆ ಒಂದು ಸಾರಿ ಈ ಸದನದಲ್ಲಿ ಮಲೆನಾಡು ಅಭಿವೃದ್ಧಿಯ ಬಗ್ಗೆ ಪ್ರತ್ಯೇಕನಾಗಿ ಯೋಜನೆ ಮಾಡಲಿಕ್ಕೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹಿಂದಿನ ಯೋಜನಾ ಸಚಿವರು, ಮಾನ್ಯ ಅರ್ಥ ಸಚಿವರು ತಿಳಿಸಿದ್ದರು. ಅದರಲ್ಲೂ ಕೂಡ ಪ್ರಗತಿಯಾಗಿಲ್ಲ. ಆ ರಿಪೋರ್ಟ್ ಬಂದಕೂಡಲೇ ನೋಡಿಸುತ್ತೇನೆಂದು ಹೇಳಿದರು. ಮೂಲತಃ ಇರತಕ್ಕಂತಾದ್ದು ನಮ್ಮ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕೆಂದರೆ ಈ ರಾಜ್ಯದ ಮಲೆನಾಡು ಪ್ರದೇಶದಲ್ಲಿರತಕ್ಕ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ನೈಸರ್ಗಿಕವಾದ ಸಂಪತ್ತು ಅಲ್ಲಿದೆ, ಅದನ್ನು ಬಳಸಿಕೊಳ್ಳತಕ್ಕಂತಾದ್ದರಿಂದ, ಈ ರಾಷ್ಟ್ರದ ಅಭಿವೃದ್ಧಿಗೆ ತೆಗೆದುಕೊಂಡು ಹೋಗಬಹುದಾದಂಥ ಅನೇಕ ಯೋಜನೆಗಳನ್ನು ಅಳವಡಿಸಿಕೊಳ್ಳಬಹುದು. ಮಲೆನಾಡು ಪ್ರದೇಶದಲ್ಲಿ ಎಷ್ಟು ಸಂಪನ್ಮೂಲಗಳು ಇದೆ ಎನ್ನುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ನಮ್ಮ ಮಲೆನಾಡಿನ ಸಂಪನ್ಮೂಲಗಳ ಬಗ್ಗೆ ಈ ವರದಿಯಲ್ಲಿ ಹೇಳಿದ್ದಾರೆಂದು ನಾನು ಗ್ರಹಿಸಿದ್ದೆ. ಆದರೆ ಈ ವರದಿಯಲ್ಲಿ ಏನೂ ಹೇಳಿಲ್ಲ. ವೆಸ್ಟರನ್ ಘಾಟ್ ಪ್ರೋಗ್ರಾಂ ಮಾತ್ರ ಒಂದು ಪ್ಯಾರಾಗ್ರಾಫ್ ಇದೆ. ಅದಕ್ಕೂ ಕೂಡ ಸಾಕಷ್ಟು ಹಣ ಒದಗಿಸಿಕೊಟ್ಟಿಲ್ಲ. ಅದರಲ್ಲೂ ತಾರತಮ್ಯವಾಗಿದೆ. ಇಡೀ ರಾಷ್ಟ್ರದಲ್ಲೇ ಈ ಪಶ್ಚಿಮಘಟ್ಟದ ಯೋಜನೆಯಿಂದ ನಮಗೆ ಬೇಕಾದಂಥ ಅನುಕೂಲ ಇದೆ. ಅದನ್ನು ನಮ್ಮ ರಾಜ್ಯ ತೆಗೆದುಕೊಳ್ಳುವುದಕ್ಕೆ ಹಿಂದೆ ಬಿದ್ದಿದೆ ಅಂತ ಅನಿಸುತ್ತದೆ. ಇದರಲ್ಲಿ ಬಳಕೆ ಮಾಡಿರುವಂತಾದ್ದು, ೧೯೧ ಲಕ್ಷ ಮಾತ್ರ ಒದಗಿಸಿದೆ, ಅಂತ ಹೇಳಿದರೆ, ನಮ್ಮ ರಾಜ್ಯದಲ್ಲಿ ಮಲೆನಾಡು ಪ್ರದೇಶದ ವಿಸ್ತರಣೆ ನೋಡಿದರೆ ಇದು ಸಾಕಾಗುವುದಿಲ್ಲ. ಅದಕ್ಕೋಸ್ಕರ ಮಾನ್ಯ ಸಚಿವರು ಕೇಂದ್ರದಿಂದ ಇನ್ನೂ ಹೆಚ್ಚು ಸಹಾಯಧನ ತರುವುದರ ಕಡೆ, ಮತ್ತು ಮಲೆನಾಡಿಗೋಸ್ಕರ ಪ್ರಾದೇಶಿಕ ಯೋಜನೆ ಅಳವಡಿಸುವುದರಲ್ಲಿ, ಇವೊತ್ತು ಪ್ರಾದೇಶಿಕ ಯೋಜನೆ ರೂಢಿಸಿಕೊಳ್ಳಬೇಕು, ಅದಕ್ಕೆ ಪ್ರತ್ಯೇಕ ಸೆಲ್ ಈ ಯೋಜನೆಯಲ್ಲಿ ರಚನೆ ಮಾಡಿ ಮಲೆನಾಡಿನ ಸಂಪತ್ತನ್ನು ಬಳಸಿಕೊಳ್ಳುವುದಕ್ಕೆ ಬೇಕಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು. ಅದು ಈ ರಾಜ್ಯದ ಪ್ರಗತಿಗ ಕಾರಣವಾಗುತ್ತ

ದೆಂದು ನಾನು ಸೂಚನೆ ಕೊಡಲಿಕ್ಕೆ ಬಯಸುತ್ತೇನೆ. ಇನ್ನು ಈ ಯೋಜನಾ ಇಲಾಖೆ ಬಹಳ ಸತ್ವ ಪೂರ್ಣವಾಗಿರಬೇಕು. ತಜ್ಞರಿಂದ ಕೂಡಿರಬೇಕು. ರಾಜ್ಯದ ಆಗುಹೋಗುಗಳ ಕಡೆ ಜನತೆಯ ಅನಿಸಿಕೆ ಗಳೇನಿದೆ, ಅದನ್ನು ಕಾರ್ಯಗತ ಮಾಡುವುದರಲ್ಲಿ ವಾಸ್ತವಾಂಶ ದೃಷ್ಟಿಯನ್ನು ಹೊಂದಿರಬೇಕು. ಅಂತ ಹೇಳುತ್ತೇನೆ. ಇನ್ನು ಈ ಯೋಜನಾ ಇಲಾಖೆಯವರು ಬೆಂಗಳೂರಿನ ಈ ಒಂದು ಹವಾದಲ್ಲಿ ಕುಳಿತು ಕೊಂಡು ಬೇರೆ ಜಿಲ್ಲಾ ಪ್ರದೇಶಗಳ ಸ್ಥಿತಿಯನ್ನು ಅರಿಯಲಿಕ್ಕೆ ಅಸಮರ್ಥರಾಗಿದ್ದಾರೆ. ಅಂತ ಕಾಣಿಸು ತ್ತಿದೆ ಆ ರೀತಿ ಮಾಡದೆ, ನಿಮ್ಮ ಇಲಾಖೆಗಳಲ್ಲೇ ಸಂಬಂಧಪಟ್ಟಂತೆ ಕಾರ್ಯಕ್ರಮಗಳನ್ನು ನೋಡಲಿಕ್ಕೆ ಪ್ರತ್ಯೇಕ ಇಲಾಖೆಗಳು ಇದೆ. ಇವರಲ್ಲಿ ಮಾನಿಟೋರಿಯಂ, ಇನ್‌ಫರ್‌ಮೇಷನ್ ಡಿವಿಜನ್ ಕೂಡ ಇದೆ. ಇದರಲ್ಲಿ ಎಷ್ಟರಮಟ್ಟಿಗೆ ಕಾರ್ಯನಿರ್ವಹಣೆ ಮಾಡುತ್ತಾರೋ ಗೊತ್ತಿಲ್ಲ. ಆದ್ದರಿಂದ ಈ ವಿಚಾರದಲ್ಲಿ. ಕೇಂದ್ರದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಯಾವರೀತಿ ಯೋಜನೆ ಈ ೨೦ ಅಂಶಗಳ ಕಾರ್ಯ ಕ್ರಮದಲ್ಲಿ ಬಂದಿದೆ, ಐ.ಆರ್.ಡಿ. ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್ ಎಷ್ಟರಮಟ್ಟಿಗೆ ಆಗುತ್ತಿದೆ. ಇವರು ತಮ್ಮ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಿಕ್ಕೆ ಇವರು ಎಲ್ಲಿಯವರೆಗೆ ನೋಡುತ್ತಾರೆ. ಕೆಲವು ಇಲಾಖೆಯ ಮುಖ್ಯಸ್ಥರು, ಈ ಡಿವಿಜನ್‌ಗಳ ಮುಖ್ಯಸ್ಥರು. ಅಲ್ಲಿಗೆ ಹೋಗಿ ಮುಟ್ಟಿಲ್ಲ ಅಂತ ನನಗೆನ್ನಿಸುತ್ತದೆ. ಅವರನ್ನು ಜಿಲ್ಲಾ ಮಟ್ಟಕ್ಕೆ. ತಾಲ್ಲೂಕು ಮಟ್ಟಕ್ಕೆ ಕಳುಹಿಸಬೇಕೆಂದು ಹೇಳುತ್ತೇನೆ. ಹಿಂದೆ ಒಂದು ಸಾರಿ ಪ್ರಸ್ತಾಪ ಮಾಡಿದಾಗ ಹೇಳಿದ್ದೆ, ಬೆಂಗಳೂರಿ ನಲ್ಲಿ ಇಲಾಖೆಯ ಮುಖ್ಯಸ್ಥರು ೧೦ ವರ್ಷಕ್ಕೂ ಮೇಲ್ಪಟ್ಟು ಈವರೆಗೆ ಇದ್ದವರೆ ಇದ್ದಾರೆಂದು. ಇಂತಹವರನ್ನು ಮಲೆನಾಡು ಸರ್ವೀಸಸ್‌ಗೆ ಕಳುಹಿಸಿದರೆ, ಆಗ ಅವರು ಬೇರೆ ಬೇರೆ ಜಿಲ್ಲಾ ತಾಲೂಕು ಗಳಿಗೆ ಹೋಗಿಬಂದ ಅನುಭವ ಹೊಂದಲಿಕ್ಕೆ ಅನುಕೂಲವಾಗುತ್ತದೆ. ಒಂದೇ ಕಡೆ ಇದ್ದರೆ ಅವರಿಗೆ ಅಲ್ಲಿಯ ಅನುಭವ ಬರುವುದಿಲ್ಲ. ಇದುವರೆಗೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಇಲ್ಲಿರತಕ್ಕವ ರನ್ನು ಬೇರೆ ಬೇರೆ ಜಿಲ್ಲೆಗಳಿಗೆ ಕಳುಹಿಸಿ ಜಿಲ್ಲಾ ಮಟ್ಟದಲ್ಲಿರತಕ್ಕವರನ್ನು ಬೆಂಗಳೂರಿಗೆ ಬರಲಿಕ್ಕೆ ವ್ಯವಸ್ಥೆ ಮಾಡಬೇಕು. ಅವರು ಪರಿಣಿತರೆ, ಈ ಇಲಾಖೆಯ ಕೆಲಸಗಳು ತ್ವರಿತವಾಗಿ ನಡೆಯುವಂಥ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಈ ಇಲಾಖೆಯ ಮುಖ್ಯಸ್ಥರನ್ನು ನೇಮಿಸುವಾಗ ಹಿಂದಿನಿಂದ ಒಳ್ಳೆಯ ಸಂಪ್ರದಾಯ ಹಾಕಿಕೊಂಡಿದ್ದರು. ಅಖಿಲ ಭಾರತಮಟ್ಟದಲ್ಲಿರತಕ್ಕ ಯೋಜನಾ ಆಯೋಗದ ಸದಸ್ಯರು ಇದ್ದು ಕೆಲವು ಅಧಿಕಾರಿಗಳನ್ನು ನೇಮಕ ಮಾಡಿದರು. ಆದ್ದರಿಂದ ಈ ಒಂದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇಡೀ ರಾಷ್ಟ್ರದಲ್ಲಿಯೇ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತದೆ. ಒಳ್ಳೆಯ ತಜ್ಞರಿಂದ ಕೂಡಿದೆ. ಇನ್ನು ಮುಂದೆಯೂ ಕೂಡ ಈ ಸಂಪ್ರದಾಯವನ್ನು ಹಾಕಿಕೊಳ್ಳಬೇಕು. ಇನ್ನು ಮುಂದೆಯೂ ಕೂಡ ಹಿಂದೆ ಹಾಕಿಕೊಂಡ ಕಾರ್ಯಕ್ರಮದ ರೀತಿಯಲ್ಲೇ ಅಡ್ವರ್‌ಟೈಸ್ ಮಾಡಿ ತಜ್ಞರನ್ನು ಇಟ್ಟುಕೊಂಡು ಇಂಟರ್‌ವ್ಯೂ ಮಾಡಿ ನೇಮಿಸಿಕೊಳ್ಳುವುದರಿಂದ, ಒಳ್ಳೆಯ ತಜ್ಞರ ಸಹಾಯ ನಮಗೆ ಸಿಕ್ಕಿದ ಹಾಗೆ ಆಗುತ್ತದೆ. ಪ್ರಮೋಷನ್ ಕೊಟ್ಟರೆ ಆ ರೀತಿ ಸಿಕ್ಕಲಾರದು ಎನ್ನುವುದನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ, ಈಗ ನಮ್ಮ ಅರ್ಥಸಚಿವರು ಆಗಮಿಸಿದ್ದಾರೆ. ಅವರು ಮಲೆನಾಡಿನ ಬಗ್ಗೆ ಹೆಚ್ಚಿನ ದೃಷ್ಟಿಯನ್ನು ಇಟ್ಟುಕೊಳ್ಳಬೇಕು. ಅವರು ಇದೇ ಸದನದಲ್ಲಿ ಹೇಳಿದಂಥ ಒಂದು ಮಾತು ಇತ್ತು. ಅವರು ಅದನ್ನು ತೆಗೆದುಕೊಂಡು ಮಲೆನಾಡು ಅಭಿವೃದ್ಧಿಯ ಬಗ್ಗೆ ಪ್ರತ್ಯೇಕವಾಗಿ ಯೋಜನಾ ಇಲಾಖೆಯಲ್ಲಿಯೇ ಒಂದು ವಿಭಾಗವನ್ನು ಸ್ಥಾಪನೆ ಮಾಡಬೇಕು. ಅವರು ಕೊಟ್ಟಂಥ ಮಾತು ಇದೆ. ಈ ವರದಿಯಲ್ಲಿ ಆ ವಿಚಾರ ಬರುತ್ತದೆಂದು ನಾನು ಹುಡುಕಿ ನೋಡಿದೆ. ಪೂರ್ತಿ ಪುಸ್ತಕ ಹುಡುಕಿ ನೋಡಿದರೂ ಎಲ್ಲೂ ಸಿಕ್ಕಲಿಲ್ಲ. ವೆಸ್ಟರನ್ ಘಾಟ್ ಇದಕ್ಕೂ ತೃಪ್ತಿಕರವಾಗಿಲ್ಲ, ತಾಲೂಕುವಾರು ಸಿಕ್ಕತಕ್ಕ ಸಹಾಯ ಕೂಡ ಸರಿಯಾಗಿ ಸಿಕ್ಕಿಲ್ಲ. ಇವೊತ್ತು ಮಂಗಳೂರು ಅಭಿವೃದ್ಧಿಯಾದರೆ ಇಡೀ ಮಲೆನಾಡು ಅಭಿವೃದ್ಧಿಯನ್ನು ಮಾಡಿದ ಹಾಗೆ ಆಗುವುದಿಲ್ಲ. ನಮ್ಮ ಮಲೆನಾಡಿನ ಭಾಗದ ಸದಸ್ಯರನ್ನೆಲ್ಲಾ ಕರೆದು ಸಮಾಲೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇ ವೆಂದು ಅವರು ಹೇಳಿದ್ದರು. ಆದರೆ ತೆಗೆದುಕೊಳ್ಳಲಿಲ್ಲ. ಮಾನ್ಯ ಅರ್ಥ ಸಚಿವರು ಮತ್ತು ಯೋಜನಾ ಮಂತ್ರಿಯವರು ಸೂಕ್ತ ಕ್ರಮ ತೆಗೆದುಕೊಂಡು ನಮ್ಮ ಮಲೆನಾಡಿಗೆ ಪ್ರಾದೇಶಿಕ ಯೋಜನೆ ಅನ್ವಯಿಸು ವಂತೆ ಪ್ರತ್ಯೇಕ ಒಂದು ಸೆಲ್ಲನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ. ಕೊನೆಯದಾಗಿ ಹೇಳುವುದೇನೆಂದರೆ, ಕಾರ್ಮಿಕ ಇಲಾಖೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಬಹಳ ಕಿರುಕುಳವಾಗುತ್ತಿದೆ. ಸಣ್ಣ ಕೈಗಾರಿಕೆಗಳವರು ಸ್ವತಃ ಮಾಲೀಕರು ಮತ್ತು ಕೆಲಸಗಾರರೂ ಆಗಿರುತ್ತಾರೆ. ಈ ಸಂಘಗಳಿಂದಾಗಿ ಕೈಗಾರಿಕೆಗೆ ಅನೇಕ ಕಡೆಗಳಲ್ಲಿ ಬಹಳ ತೊಂದರೆ

ಯಾಗಿದೆ. ಸಾಕಷ್ಟು ಪ್ರಗತಿಯನ್ನು ಕೈಗಾರಿಕೆಯಲ್ಲಿ ಸಾಧನೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಕಾರ್ಮಿಕ ಸಚಿವರು ಈ ಸಣ್ಣ ಕೈಗಾರಿಕೆಗಳಿಗೆ ಇರತಕ್ಕ ಕಿರುಕುಳವನ್ನು ಹೋಗಲಾಡಿಸಬೇಕೆಂದು ಕೇಳಿ ಕೊಂಡು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಬಸವನಗುಡಿ)—ಸನ್ಮಾನ್ಯ ಅಧ್ಯಕ್ಷರೆ, ನಾನು ಕೇವಲ ಲೇಬರ್ ಡಿಪಾರ್ಟ್‌ಮೆಂಟ್ ಮತ್ತು ಉದ್ಯೋಗ ತರಬೇತಿ ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡು ತ್ತೇನೆ. ನಮ್ಮ ರಾಜ್ಯದ ಕಾರ್ಮಿಕ ಶಾಖೆ ಎಷ್ಟರಮಟ್ಟಿಗೆ ಕೆಲಸಮಾಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಬಹಳ ಜನ ಹೇಳಿದ್ದಾರೆ, ಅಲ್ಲದೆ ನಾವೂ ಕೂಡ ಕಳೆದ ಕೆಲವಾರು ತಿಂಗಳುಗಳಿಂದ ನೋಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಫರ್ನಾಂಡಿಸ್‌ರವರು ಬಹಳ ನೊಂದ ಮನಸ್ಸಿನಿಂದ ಮಾತನಾಡಿ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಏನಾದರೂ ವಿವಾದಗಳು ಬಂದರೆ ಅದನ್ನು ಕನ್ಸಿಲಿಯೇಷನ್ ಮಾಡತಕ್ಕದ್ದು, ಇದು ಕನ್ಸಿಲಿಯೇಷನ್‌ನಲ್ಲಿ ತೀರ್ಮಾನವಾಗದಿದ್ದರೆ ಅಡ್ಜುಡಿಕೇಷನ್‌ಗೆ ರೆಫರ್ ಮಾಡುವುದು ನಮ್ಮ ರಾಜ್ಯಸರ್ಕಾರದ ವ್ಯಾಪ್ತಿಯಲ್ಲಿರತಕ್ಕದ್ದು. ಮಾನ್ಯ ಫರ್ನಾಂಡಿಸ್‌ರವರು ಹೇಳಿದಂತೆ ಬೆಂಗಳೂರು ಬೇಸ್ಡ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಸ್ಟ್ರೈಕ್ ನೋಟೀಸ್ ಕೊಟ್ಟರೂ ಕೂಡ ಅವರನ್ನು ಕನ್ಸಿಲಿಯೇಷನ್‌ಗೆ ಕರೆಯದೆ ಕೊನೆಗೆ ಇನ್ನೇನು ಸ್ಟ್ರೈಕ್ ಆಗುತ್ತದೆಂದು ತಿಳಿದು ನೆಪಮಾತ್ರಕ್ಕೆ ಅವರನ್ನು ಕನ್ಸಿಲಿಯೇಷನ್‌ಗೆ ಕರೆದು ಕನ್ಸಿಲಿಯೇಷನ್ ಫೇಲ್ಯೂರ್ ರಿಪೋರ್ಟ್ ಕೊಟ್ಟು ಅಡ್ಜುಡಿಕೇಷನ್‌ಗೆ ರೆಫರ್ ಮಾಡದಿದ್ದರೆ ಆ ಸ್ಟ್ರೈಕ್ ಇಲ್ಲೀಗಲ್ ಆಗುತ್ತಿತ್ತು. ಆ ಕಾರ್ಮಿಕರು ೮೦ ದಿವಸಗಳ ಕಾಲ ಸ್ಟ್ರೈಕ್ ಮಾಡತಕ್ಕ ಅವಶ್ಯಕತೆ ಇರಲಿಲ್ಲ. ಕೋರ್ಟಿನಲ್ಲಿ ಏನಾದರೊಂದು ತೀರ್ಮಾನವಾಗುತ್ತಿತ್ತು. ಅದನ್ನು ನಮ್ಮ ಕಾರ್ಮಿಕ ಬಂಧುಗಳು ಒಪ್ಪಿಕೊಳ್ಳುತ್ತಿದ್ದರು. ಆದರೆ ನಮ್ಮ ಸರ್ಕಾರ ಒಂದು ಕ್ರಿಯಾಲೋಪ ಮಾಡಿದೆ. ಈ ವಿಚಾರದಲ್ಲಿ ಫೇಲ್ಯೂರ್ ರಿಪೋರ್ಟ್‌ನ್ನು ಬಹಳ ಜಾಗ್ರತೆ ತರಿಸಿಕೊಂಡು ಅಡ್ಜುಡಿಕೇಷನ್‌ಗೆ ರೆಫರ್ ಮಾಡಲಿಲ್ಲ. ಇದು ಪ್ರಮುಖವಾದ ಪ್ರಶ್ನೆ. ಇದರಲ್ಲಿ ಕೇಂದ್ರ ಸರ್ಕಾರಕ್ಕೆ ಅಧಿಕಾರವೇ ಇಲ್ಲ. ಪೂರ್ತಿ ಅಧಿಕಾರವಿರತಕ್ಕದ್ದು ನಮ್ಮ ರಾಜ್ಯ ಸರ್ಕಾರಕ್ಕೆ. ಅದರ ಮೇಲೆ ಕೂತುಕೊಂಡು ನೀವು ಇದನ್ನು ಮಾಡಬೇಡಿ ಎಂದು ಫೋನ್‌ನಲ್ಲಿ ಹೇಳಿದರೆ ಇವರು ಹೇಗೆ ಮಾಡುತ್ತಾರೆ. ಅವರು ರೆಫರ್ ಮಾಡಿ ಎಂದು ಮತ್ತೆ ಹೇಳುವವರೆಗೂ ಇವರು ಮಾಡುವಂತಿಲ್ಲ. ದುರ್ದೈವವಶಾತ್ ಸುಮಾರು ೨೦೦ ಕೋಟಿ ರೂಪಾಯಿಯ ಉತ್ಪಾದನೆ ನಷ್ಟವಾಯಿತು. ಕಾರ್ಮಿಕರಿಗೆ ನೂರಾರು ಕೋಟಿ ರೂಪಾಯಿ ವೇತನ ನಷ್ಟವಾಯಿತು. ಸುಮಾರು ೧.೨೫ ಲಕ್ಷ ಸಂಸಾರಗಳು ೮೦ ದಿವಸಗಳ ಸ್ಟ್ರೈಕ್ ಕಾಲದಲ್ಲಿ ಪಟ್ಟ ಕಷ್ಟವನ್ನು ನಾವು ಕಣ್ಣಿಂದ ನೋಡುವುದಕ್ಕಾಗುತ್ತಿರಲಿಲ್ಲ. ಈ ರೀತಿಯ ಕ್ರಿಯಾಲೋಪವನ್ನು ಮಾಡಿರುವುದರಿಂದ ಇಲಾಖೆಗೆ ಒಳ್ಳೆಯ ಹೆಸರು ಬರುವುದಿಲ್ಲ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಎಂದರೆ. ಇವರು ಇಲಾಖೆಯ ವಾರ್ಷಿಕ ವರದಿಯನ್ನು ಡಿಮ್ಯಾಂಡ್‌ನ್ನು ಸಭೆಯಮುಂದೆ ಇಟ್ಟಿಗತಕ್ಕದ್ದು ಅಂದರೆ ೧೯೮೦-೮೧ನೇ ಸಾಲಿಗೆ ಕೇವಲ ಮಾರ್ಚಿ ೩೧ ರಿಂದ ಡಿಸೆಂಬರ್ ೩೧ ರವರೆಗೆ ಮಾತ್ರ ಇಟ್ಟಿದ್ದಾರೆ. ಸಾಮಾನ್ಯವಾಗಿ ಏಪ್ರಿಲ್ ೧ನೇ ತಾರೀಖಿನಿಂದ ಮಾರ್ಚಿ ೩೧ನೇ ತಾರೀಖಿನವರೆಗೆ ಬೇಡಿಕೆಯನ್ನು ಮಂಡಿಸುತ್ತಾರೆ. ಆದರೆ ಇದು ಆ ರೀತಿ ಇಲ್ಲ. ಆದ್ದರಿಂದ ಇನ್ನುಮುಂದಾದರೂ ಒಂದು ವರ್ಷಕ್ಕೆ ಪೂರ್ತಿಯಾಗಿ ರಿಪೋರ್ಟ್‌ನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಸೂಚಿಸಬಯಸುತ್ತೇನೆ. ಇಲ್ಲಿ ಸರ್ಕಾರದವರು ಏನು ಹೇಳುತ್ತಿದ್ದಾರೆಂದರೆ ಈ ವರ್ಷ ಲಾಕ್ ಔಟ್ ಇರಲಿಲ್ಲ, ಸ್ಟ್ರೈಕ್ ಇರಲಿಲ್ಲ ಎಂದು ಡಿಸೆಂಬರ್‌ನಿಂದ ಈಚೆಗೆ ಲಾಕ್ ಔಟ್ ಇತ್ತು. ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಅವರಿಗಿರತಕ್ಕ ಕೆಲಸಗಳು ಏನು ಎಂಬುದನ್ನು ಈ ಪುಸ್ತಕದ ೨ನೇ ಪುಟ ದಲ್ಲಿ ನಮೂದಿಸಿದ್ದಾರೆ, ಈ ೨೮ ಕಾಯಿದೆಗಳನ್ನು ಅನುಷ್ಠಾನಕ್ಕೆ ತರಬೇಕು. ಅವರ ಅಧಿಕಾರಿಗಳು ಯಾವ ಯಾವ ಕಾಯಿದೆಗಳು ಇವೆ ಎಂಬುದನ್ನಾದರೂ ತಿಳಿದುಕೊಂಡಿದ್ದಾರೆಯೋ ? ಎಂಬ ಅನುಮಾನ ನಮಗೆ ಇದೆ. ಏಕೆಂದರೆ ಇವರು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ೨೨ ಲೇಬರ್ ಆಫೀಸರ್ ಗಳಿದ್ದಾರೆ, ೧೬ ಜನ ಲೇಬರ್ ಇನ್‌ಸ್ಪೆಕ್ಟರ್‌ಗಳಿದ್ದಾರೆ, ನೂರಾರು ಜನ ಸೀನಿಯರ್ ಲೇಬರ್ ಇನ್‌ಸ್ಪೆಕ್ಟ ರ್‌ಗಳಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳಿರತಕ್ಕ ನಗರಗಳಲ್ಲಿ ಹೆಚ್ಚಿನ ಲೇಬರ್ ಇನ್‌ಸ್ಪೆಕ್ಟರ್‌ಗಳು ಇರಬೇಕು. ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಲೇಬರ್ ಇನ್‌ಸ್ಪೆಕ್ಟರ್‌ಗಳಿರಬೇಕು. ಇಲ್ಲಿ ಯಾವ ಯಾವ ಕಾಯಿದೆಗಳನ್ನು ಹೇಳಿದ್ದಾರೆಂದರೆ (೧) ಬೋನಸ್ ಪಾವತಿ ಕಾಯಿದೆ, (೨) ವೇತನ ಪಾವತಿ ಕಾಯಿದೆ (೩) ಮಕ್ಕಳ ನೇಮಕಾತಿ ಕಾಯಿದೆ (೪) ವಾರದ ರಜಾ ದಿನಗಳ ಕಾಯಿದೆ (೫)

ತೋಟಗಳ ಕಾಯಿದೆ ಇನ್ನೂ ಮುಂತಾದುವು. ಇವನ್ನೆಲ್ಲಾ ಅರ್ಥಮಾಡಿಕೊಂಡು ಜಾರಿಗೆ ತರಬೇಕಾದರೆ ಈಗಿರತಕ್ಕ ಆದೇಶದ ಪ್ರಕಾರ ಸಾಧ್ಯವಾಗುವುದಿಲ್ಲ. ಆದ್ದರಿಂದ ಇವರು ಹೆಚ್ಚಿನ ಅಧಿಕಾರಿಗಳನ್ನು ನೇಮಕ ಮಾಡಬೇಕಾದ್ದು ಮುಖ್ಯವಾದುದು.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಕಾರ್ಮಿಕರು ಅಥವಾ ಯೂನಿಯನ್‌ನವರ ವಿವಾದ ಇದೆ ಎಂದು ಹೇಳಿದಮೇಲೆ ಕನ್ಸಿಲಿಯೇಷನ್‌ಗೆ ಆದೇಶ ಬರಬೇಕು. ಬೆಂಗಳೂರು ಬೇಸ್ಡ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕನ್ಸಿಲಿಯೇಷನ್‌ಗೆ ೪–೫ ತಿಂಗಳಾದರೂ ಕರೆಯಲೇ ಇಲ್ಲ. ಇದಕ್ಕೆ ಒಂದು ಕಾಲವನ್ನು ನಿಗದಿಮಾಡದಿದ್ದರೆ ಈ ಕಾಯಿದೆ ಇದ್ದರೂ ಕೂಡ ಕಾರ್ಮಿಕರಿಗೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಒಂದು ವಿವಾದ ಬಂದಮೇಲೆ ಗರಿಷ್ಠ ೧೫ ದಿವಸದೊಳಗೆ ಕನ್ಸಿಲಿಯೇಷನ್‌ನ್ನು ಶುರು ಮಾಡಬೇಕು. ಅನಂತರ ಅದು ಫೇಲ್ಯೂರ್ ಆಗುತ್ತದೋ ಅಥವಾ ಅನುಕೂಲವಾಗುತ್ತದೋ ಅದು ಬೇರೆ ವಿಚಾರ. ಆದರೂ ಆ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಮಂತ್ರಿಗಳು ಒಂದು ಆದೇಶ ಕೊಡಬೇಕು. ಈ ರಿಪೋರ್ಟ್ ಸರ್ಕಾರಕ್ಕೆ ಬಂದಮೇಲೆ ಅದು ಫೇಲ್ಯೂರ್ ಆಗಿದ್ದರೆ ಅದನ್ನು ಅಡ್ಜುಡಿಕೇಷನ್ ರೆಫರ್ ಮಾಡಬೇಕು. ಏಕೆಂದರೆ ಕಳೆದ ಸಾರಿ ಸುಮಾರು ಒಂದೂವರೆ ವರ್ಷವಾದರೂ ಇದು ಆಗಲಿಲ್ಲ. ಆದುದರಿಂದ ನನ್ನ ಸಲಹೆ ಸರ್ಕಾರಕ್ಕೆ ಏನೆಂದರೆ, ಕಾರ್ಮಿಕರು ಮತ್ತು ಮಾಲೀಕರಿಗೆ ಇರತಕ್ಕ ವಿವಾದದ ಬಗ್ಗೆ ಫೇಲ್ಯೂರ್ ರಿಪೋರ್ಟ್ ಬಂದಕೂಡಲೇ ನೇರವಾಗಿ ಯೂನಿಯನ್‌ನವರೇ ಲೇಬರ್ ಕೋರ್ಟಿನ ಮುಂದೆ ಹೋಗಿ ಕೇಸ್ ಹಾಕುವುದಕ್ಕೆ ಏತಕ್ಕೆ ಅವಕಾಶವನ್ನು ಕೊಡಬಾರದು ? ಇಂಥ ಪ್ರಕರಣಗಳಲ್ಲಿ ತಿಂಗಳುಗಟ್ಟಲೆ ಕಾಯಿಸತಕ್ಕಂಥ ಅಧಿಕಾರಿಗಳನ್ನು ಸರ್ಕಾರದವರು ಏತಕ್ಕೆ ಇಟ್ಟುಕೊಳ್ಳಬೇಕು? ಇದನ್ನು ಮಾನ್ಯ ಸಚಿವರು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಕನ್ಸಿಲಿಯೇಷನ್ ಫೇಲ್ಯೂರ್ ಆದಮೇಲೆ ಯೂನಿಯನ್‌ನವರು ಅಥವಾ ಕಾರ್ಮಿಕರೇ ನೇರವಾಗಿ ಕೋರ್ಟಿನಲ್ಲಿ ಕೇಸ್ ಹಾಕುವುದಕ್ಕೆ ಅವಕಾಶ ಕೊಟ್ಟರೆ ಅದು ಜಾಗ್ರತೆ ತೀರ್ಮಾನವಾಗುತ್ತದೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನನ್ನದು ಇನ್ನೊಂದು ಸಲಹೆ ಎಂದರೆ ವಾಗ್ವಾದಗಳು ಬಂದಾಗ ಕಂಪಲ್ಸರಿ ಆರ್ಬಿಟ್ರೇಷನ್ ಮಾಡತಕ್ಕದ್ದು. ಆ ಆರ್ಬಿಟ್ರೇಷನ್‌ನಲ್ಲಿ ಸರ್ಕಾರದವರು ನೇಮಕ ಮಾಡತಕ್ಕ ಒಬ್ಬ ಅಧಿಕಾರಿ ಇರುತ್ತಾನೆ, ಮಾಲೀಕರ ಕಡೆಯವರೂ ಒಬ್ಬರು ಇರುತ್ತಾರೆ. ಕಾರ್ಮಿಕರ ಕಡೆಯವರು ಅವರು ಕೊಡತಕ್ಕ ತೀರ್ಮಾನ ಎಲ್ಲರಿಗೂ ಬೈಂಡಿಂಗ್ ಆಗಿರುತ್ತದೆ. ಆದ್ದರಿಂದ ಕಂಪಲ್ಸರಿ ಆರ್ಬಿಟ್ರೇಷನ್‌ನ್ನು ನಮ್ಮ ರಾಜ್ಯದಲ್ಲಿ ತಂದರೆ ಕಾರ್ಮಿಕರು ಮತ್ತು ಮಾಲೀಕರಲ್ಲಿ ಉಂಟಾಗತಕ್ಕ ವೈಮನಸ್ಸಾಗಲಿ ಮುಷ್ಕರಗಳಾಗಲಿ, ತಪ್ಪುತ್ತವೆಂದು ನನ್ನ ಸಲಹೆ. ಮಾನ್ಯ ಸದಸ್ಯರಾದ ಮೈಕೇಲ್ ಫರ್ನಾಂಡೀಸ್ ರವರು ಮಾತನಾಡುತ್ತಾ ಮಾಲೀಕರು ತಮ್ಮ ಕಾರ್ಮಿಕರಿಗೆ ಪ್ರತಿ ತಿಂಗಳೂ ಪ್ರಾವಿಡೆಂಟ್ ಫಂಡ್ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿರುವುದಿಲ್ಲ. ಇದರಿಂದಾಗಿ ಕಾರ್ಮಿಕರು ತಮ್ಮ ಕೆಲಸದಿಂದ ನಿವೃತ್ತಿಯಾದಾಗ ಸಕಾಲದಲ್ಲಿ ಅವರಿಗೆ ಪ್ರಾವಿಡೆಂಟ್ ಫಂಡ್ ಹಣ ಸಿಕ್ಕುವುದಿಲ್ಲ. ಯಾವ ಮ್ಯಾನೇಜ್‌ಮೆಂಟ್‌ನವರು ಕಾರ್ಮಿಕರ ಪ್ರಾವಿಡೆಂಟ್ ಫಂಡ್ ಹಣವನ್ನು ಪ್ರತಿ ತಿಂಗಳೂ ಕಟ್ಟುವುದಿಲ್ಲ. ಕರ್ತವ್ಯ ಲೋಪ ಮಾಡಿರುತ್ತಾರೆ. ಅಂಥವರ ಮೇಲೆ ನಿಮ್ಮ ಅಧಿಕಾರಿಗಳು ಕೇಸನ್ನು ಹಾಕುವುದಕ್ಕೆ ತಡಮಾಡುತ್ತಿದ್ದಾರೆ. ಇದರಿಂದಾಗಿ ಕಾರ್ಮಿಕರು ಹೇಳತೀರದ ತೊಂದರೆಗೆ ಗುರಿಯಾಗುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸೂಕ್ತ ಗಮನ ಕೊಡಬೇಕೆಂದು ತಿಳಿಸಬಯಸುತ್ತೇನೆ.

೪–೦೦ ಪಿ.ಎಂ.

ಸ್ವಾಮಿ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಎಂದು ೧೯೪೭ರಲ್ಲಿ ಬಂದಿತು. ಆಗ ಕೆಲವು ಅಮೆಂಡ್‌ಮೆಂಟ್‌ಗಳು ಆಗಿದ್ದು ಇಲ್ಲಿಯವರೆಗೆ ಒಬ್ಬ ಕಾರ್ಮಿಕ ಎಂದು ಹೇಳುವುದಕ್ಕೆ ಡೆಫನೇಷನ್ ಏನೆಂದರೆ ಸೂಪರ್‌ವೈಸರ್ ಕೆಲಸ ಮಾಡತಕ್ಕಂಥವರು ಐದುನೂರು ರೂಪಾಯಿಗಿಂತ ಕಡಿಮೆ ವರಮಾನ ಬರತಕ್ಕಂಥ ಕಾರ್ಮಿಕನು ಮಾತ್ರ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಕಾರ್ಯ ವ್ಯಾಪ್ತಿಗೆ ಬರುತ್ತದೆ. ನಮ್ಮ ಸರ್ಕಾರದ ನಾಲ್ಕನೇ ದರ್ಜೆಯ ನೌಕರನಿಗೆ ಐದುನೂರು ರೂಪಾಯಿ ಸಂಬಳ ಬರುತ್ತದೆ. ಐದುನೂರು ರೂಪಾಯಿಗಳ ಸಂಬಳವನ್ನು ಮಿತಿ ಇಟ್ಟುಕೊಂಡರೆ ಇಂಡಸ್ಟ್ರಿಯಲ್ ಕಾರ್ಮಿಕನಿಗೆ ಪ್ರಯೋಜನವಾಗುವುದಿಲ್ಲ. ಎರಡು ಸಾವಿರ ಸಂಬಳ ಬರುವವರೆಗೆ ಇಂಡಸ್ಟ್ರಿಯಲ್

ಡಿಸ್‌ಪ್ಯೂಟ್ ಪ್ರಾವಿಷನ್ ಅಪ್ಲೈ ಆಗುವಂತೆ ಮಾಡಬೇಕು. ಮೊದಲೆ ವಿಚಾರದಲ್ಲಿ ಅಮೆಂಡ್‌ಮೆಂಟ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೆವು. ಅಮೆಂಡ್‌ಮೆಂಟ್ ಬೇಕಾದ ಪ್ರಾವಿಷನ್ ಬಹಳ ಇವೆ. ಮಾನ್ಯ ಫರ್ನಾಂಡೀಸ್‌ರವರೂ ಕೂಡ ಮಂತ್ರಿಗಳಿಗೆ ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿರುತ್ತಾರೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಇರತಕ್ಕಂಥದ್ದು ಕೇವಲ ಹೆಸರಿಗೆ, ಜನರಿಗೆ ಕಣ್ಣೀರು ಒರಿಸುವುದಕ್ಕೆ ಮಾತ್ರ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನು ಪ್ಲಾಂಟೇಷನ್ ಲೇಬರ್ ಆಕ್ಟ್ ಇದು ನಮ್ಮ ರಾಜ್ಯದಲ್ಲಿ ಕಾಫಿ ಬೆಳೆ ಬಹಳ ಉತ್ತಮವಾಗಿ ಬೆಳೆಯುತ್ತದೆ. ನಾವು ಬೆಳೆದಂಥ ಕಾಫಿ ಪರದೇಶಗಳಿಗೂ ಹೋಗುತ್ತದೆ. ಪ್ಲಾಂಟೇಷನ್ ಲೇಬರ್ ಆಕ್ಟ್ ೧೯೫೧ ರಲ್ಲಿ ಮೊದಲಬಾರಿಗೆ ಇಶ್ಯೂ ಆಯಿತು. ಆದರೆ ಇಲ್ಲಿ ಆಕ್ಟ್‌ನಲ್ಲಿರುವ ಡೆಫನೇಷನ್ ಪ್ರಕಾರ ಮುನ್ನೂರು ರೂಪಾಯಿಗಳು ಸಂಬಳ ಬರತಕ್ಕಂಥ ಕಾರ್ಮಿಕರಿಗೆ ಮಾತ್ರ ಆಕ್ಟ್‌ನಲ್ಲಿ ಏನೇನು ಫೆಸಿಲಿಟೀಸ್ ಕೊಡಬೇಕೆಂದು ಇರುತ್ತದೆಯೋ ಅದರ ಪ್ರಕಾರ ಅವರಿಗೆ ಮಾತ್ರ ದೊರೆಯುತ್ತಿದೆ. ಸ್ವಾಮಿ ಇಲ್ಲಿ ಮೇಸ್ತ್ರಿಗೆ ಮುನ್ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಬರುತ್ತಿದೆ. ಆ ಮೇಸ್ತ್ರಿಗೂ ಕೂಡ ಕಾನೂನಿನಂತೆ ಪ್ಲಾಂಟೇಷನ್ ಆಡಳಿತದವರು ಆಸ್ಪತ್ರೆಯ ಸೌಲಭ್ಯ, ಕೊಡತಕ್ಕಂಥದ್ದು, ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡತಕ್ಕಂಥದ್ದು, ಅವರಿಗೆ ಅಪ್ಲೈ ಆಗುವುದಿಲ್ಲ. ಎರಡು ಸಾವಿರ ರೂಪಾಯಿಗಳ ವರೆಗೆ ವರಮಾನವಿದ್ದರೂ ಕೂಡ ಆ ಆಕ್ಟ್‌ನಲ್ಲಿ ಬರತಕ್ಕಂಥ ಸೌಲಭ್ಯಗಳು ದೊರೆಯುವಂತೆ ಮಾಡಬೇಕು. ಆದ್ದರಿಂದ ಈ ಎಲ್ಲ ಸೌಲಭ್ಯಗಳು ಬರತಕ್ಕಂಥ ಒಂದು ಅಮೆಂಡ್‌ಮೆಂಟನ್ನು ಮಾಡಬೇಕೆಂದು ಸೂಚನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಜೊತೆಗೆ ಅಮೆಂಡ್‌ಮೆಂಟ್‌ನಲ್ಲಿ ಮೆಡಿಕಲ್ ಫೆಸಿಲಿಟೀಸ್ ಕೊಡುವುದಕ್ಕೆ ಆಸ್ಪತ್ರೆಗಳಲ್ಲಿ ಪ್ಲಾಂಟೇಷನ್ ಲೇಬರ್ ಆಕ್ಟ್‌ನಲ್ಲಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಒಂದೇ ಒಂದು ಆಸ್ಪತ್ರೆಯಲ್ಲಿ ಅಂದರೆ ಅಮೇತಿಯಲ್ಲಿರುವ ಅಮೇರಿಕಾ ಆಸ್ಪತ್ರೆಯಲ್ಲಿ ಕೆಲವು ಕಾರ್ಮಿಕರು ಮತ್ತು ಪ್ಲಾಂಟೇಷನ್‌ನವರಿಗೂ ಈ ಸೌಲಭ್ಯವನ್ನು ಕಲ್ಪಿಸಿಕೊಟ್ಟಿರುತ್ತಾರೆ. ಉಳಿದ ಕಡೆಗಳಲ್ಲಿ ಕೊಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ಒಂದು ಟ್ರೈಪಾಟ್ರೀಟ್ ಮೀಟಿಂಗ್ ಕೂಡ ಆಗಿದ್ದು ಇಂಥಿಂಥ ಕಡೆ ಡಿಸ್‌ಪೆನ್ಸರಿಗಳನ್ನು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಳ್ಳಲಾಗಿತ್ತು. ಇಲ್ಲಿಯವರೆಗೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಟ್ರೈಪಾಟ್ರೀಟ್ ಮೀಟಿಂಗ್‌ನಲ್ಲಿ ಏನು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ ಅದನ್ನು ಆದಷ್ಟು ಜಾಗ್ರತೆಯಾಗಿ ಅನುಷ್ಠಾನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಯುನಾನಿಮಸ್ ಆಗಿ ರೆಕಮೆಂಡೇಷನ್ ಆಗಿರತಕ್ಕಂಥದ್ದು ಮತ್ತು ಸರ್ಕಾರಿ ನೇತೃತ್ವದಲ್ಲಿ ಆಗಿರತಕ್ಕಂಥ ರೆಕಮೆಂಡೇಷನ್‌ನ್ನು ಜಾರಿಗೆ ಕೊಡದೆ ಏತಕ್ಕೆ ನಿಧಾನ ಮಾಡುತ್ತಿದ್ದಾರೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳನ್ನು ಆದಷ್ಟು ಜಾಗ್ರತೆಯಾಗಿ ಇದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ಲಾಂಟೇಷನ್ ಲೇಬರ್ ಹೌಸಿಂಗ್ ಸ್ಕೀಮ್ ಎಂದು ಇದೆ, ಇದರಲ್ಲಿ ಪ್ಲಾಂಟೇಷನ್ ಲೇಬರ್‌ಗಳಿಗೆ ಮಾಲೀಕರೆ ಮನೆಗಳನ್ನು ಒದಗಿಸತಕ್ಕಂಥ ನಿಯಮವಿರುತ್ತದೆ. ಅದರಲ್ಲಿ ಸರ್ಕಾರ ಸಬ್‌ಸಿಡಿಯನ್ನು ಕೊಟ್ಟುಕೊಂಡು ಬಂದಿರುತ್ತಾರೆ. ಕೇಂದ್ರ ಸರ್ಕಾರದವರು ೧೦೦ಕ್ಕೆ ೩೭ ಪರ್ಸೆಂಟ್ ಸಬ್‌ಸಿಡಿ ರೂಪದಲ್ಲಿ ಮತ್ತು ೫೭ ಪರ್ಸೆಂಟ್ ಸಾಲದ ರೂಪದಲ್ಲಿ ಕೊಡುತ್ತಾರೆ. ಮಾಲೀಕರೂ ಕೇವಲ ೧೨½ ಪರ್ಸೆಂಟ್ ಕೊಡಬೇಕಾಗಿರುತ್ತದೆ. ಈ ರೀತಿ ಒಂದು ಆಕ್ಟ್ ಇದ್ದರೂ ಕೂಡ ಸರಿಯಾದ ರೀತಿಯಲ್ಲಿ ಈ ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸುತ್ತಿಲ್ಲ. ಕಡಿಮೆ ದರ್ಜೆ ಮನೆಗಳನ್ನು ಕಡಿಮೆ ಸಂಖ್ಯೆಯಲ್ಲಿ ಮನೆಗಳನ್ನು ಕೊಟ್ಟಿದ್ದಾರೆ. ತಮಿಳುನಾಡಿನಲ್ಲಿ, ಕೇರಳದಲ್ಲಿ ಹೆಚ್ಚಿನರೀತಿಯಲ್ಲಿ ಇದರ ಉಪಯೋಗವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಲೆಕ್ಕದಲ್ಲಿಯೂ ಕೂಡ ಕಳೆದವರ್ಷ ೨೨ ಮನೆಗಳನ್ನು ತೆಗೆದುಕೊಂಡಿದ್ದು ಅದರಲ್ಲಿ ೧೬ ಮನೆಗಳು ಅರ್ಧಂಬರ್ಧವಾಗಿರುತ್ತದೆ ಎಂದು ಹೇಳಿರುತ್ತಾರೆ. ಈ ಡಿಸೆಂಬರ್‌ನೊಳಗೆ ಮುಗಿಸುವುದಾಗಿ ಟೈಮ್ ಕೊಟ್ಟಿರುತ್ತಾರೆ. ಚಿಕ್ಕಮಗಳೂರು ಮತ್ತು ಹಾಸನಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರು ಇರುತ್ತಾರೆ. ಅವರಿಗೆ ಇದೇ ಪ್ರಮಾಣದಲ್ಲಿ ಅಂದರೆ ವರ್ಷಕ್ಕೆ ೨೦ ಮನೆಗಳನ್ನು ಕೊಡುತ್ತಾ ಹೋದರೆ ಯಾವ ಕಾಲಕ್ಕೆ ಮನೆಗಳನ್ನು ಒದಗಿಸಲು ಸಾಧ್ಯವಾಗುತ್ತದೆಂಬುದನ್ನು ದೀರ್ಘವಾಗಿ ಆಲೋಚನೆ ಮಾಡಬೇಕಾಗಿರುತ್ತದೆ. ಸರ್ಕಾರ ಸಬ್‌ಸಿಡಿ, ಸಾಲ ಕೊಡತಕ್ಕಂಥದ್ದಕ್ಕೆ ನಿರ್ಬಂಧವಿಲ್ಲದಿದ್ದರೂ ಕೂಡ ಸರ್ಕಾರದವರು ಮಾಲೀಕರಿಗೆ ಇವೆಲ್ಲವನ್ನು ಕೊಟ್ಟರೂ ಕೂಡ ಎಲ್ಲಿ ಕಾರ್ಮಿಕರಿಗೂ ಮನೆಗಳನ್ನು ಏತಕ್ಕೆ ಕೊಡುತ್ತಿಲ್ಲವೋ ಎನ್ನುವುದನ್ನು ಮಾನ್ಯ ಮಂತ್ರಿಗಳು ದೀರ್ಘವಾಗಿ ಯೋಚನೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಮಿನಿಮಮ್ ವೇಜಸ್ ಆಕ್ಟ್ ಎಂದು ಸರ್ಕಾರದವರು ಒಂದು ಆಜ್ಞೆಯನ್ನು ಮಾಡಿದ್ದಾರೆ. ಇತ್ತೀಚೆಗೆ ರಾಜ್ಯದಲ್ಲಿ ತಾವು ಯಾವ ಆಜ್ಞೆಯನ್ನು ಮಾಡಿಲ್ಲವೆಂದು ಹೇಳುತ್ತೇನೆ, ೧ನೇ ಜನವರಿ ೧೯೮೧ ರಂದು ಮಿನಿಮಮ್ ವೇಜಸ್ ಆಕ್ಟ್‌ನಲ್ಲಿ ಹೆಚ್ಚಿನ ಹಣವನ್ನು ಕೊಡಬೇಕೆಂದು ಕಾನೂನನ್ನು ಜಾರಿಗೆ ತಂದಿದ್ದರು. ಆದರೆ ಈ ಪ್ಲಾಂಟೇಷನ್‌ನಲ್ಲಿ ಮಿನಿಮಮ್ ವೇಜಸ್ ಆಕ್ಟ್‌ನ್ನು ತರಬೇಕೆಂದು ಸರ್ಕಾರದ ನಿಲುವು ಇದ್ದರೂ ಆಜ್ಞೆಯನ್ನು ಇನ್ನೂ ಹೊರಡಿಸಿಲ್ಲ. ಉಳಿದಿದ್ದಕ್ಕೆಲ್ಲ ಆಜ್ಞೆಯನ್ನು ಹೊರಡಿಸಿರುತ್ತಾರೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರು ನಗರದಲ್ಲಿರತಕ್ಕಂಥ ನೂರಾರು ಗೌವರ್ನ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಮಾನ್ಯ ಫರ್ನಾಂಡೀಸ್‌ರವರು ಹೇಳಿದ ಹಾಗೆ ಮಿನಿಮಮ್ ವೇಜಸ್ ೮ ರೂಪಾಯಿ ೧೦ ಪೈಸೆಯನ್ನು ತೆಗೆದುಕೊಂಡರೂ ೨೫೦ ರೂಪಾಯಿಗಳಾಗುತ್ತದೆ. ಅಂದರೆ ತಿಂಗಳಿಗೆ ೧೫೦ ರೂಪಾಯಿಗಳ ಸಂಬಳವನ್ನು ಕೊಡದೆ ಇರತಕ್ಕಂಥ ಕೈಗಾರಿಕೆಗಳು ಬಹಳ ಸಂಖ್ಯೆಯಲ್ಲಿ ಇರುತ್ತವೆ. ಅಧಿಕಾರಿಗಳು ತನಿಖೆ ಮಾಡಿದರೆ ಬೆಂಗಳೂರು ನಗರದಲ್ಲಿ ನೂರಾರು ಕೈಗಾರಿಕೆಗಳು ೧೫೦ ರೂಪಾಯಿಗಳ ಸಂಬಳವನ್ನೂ ಕೂಡ ಕೊಡುತ್ತಿಲ್ಲ. ಈ ರೀತಿಯಾಗಿ ನೌಕರರಿಗೂ ಮೋಸ ಮಾಡುತ್ತಿರುವುದಲ್ಲದೆ, ಸರ್ಕಾರಕ್ಕೂ ಮೋಸ ಮಾಡುತ್ತಿರುತ್ತಾರೆ. ಇದನ್ನು ಮಾನ್ಯ ಸಚಿವರು ಮಂಗಳೂರು ಮತ್ತು ಬೆಂಗಳೂರು ಇನ್ನೂ ಅನೇಕ ಕಡೆ ಅಂದರೆ ದೊಡ್ಡ ದೊಡ್ಡ ಕೈಗಾರಿಕೆಗಳು ನಡೆಸುವಂಥ ಕಡೆ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಸಂಬಳವನ್ನು ಕೊಡತಕ್ಕಂಥ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಉದ್ಯೋಗ ತರಬೇತಿ ಕೇಂದ್ರಗಳು, ಇದರ ವಿಷಯವನ್ನು ತೆಗೆದುಕೊಂಡರೆ ಸ್ವಾಮಿ ತಾವು ಕೊಟ್ಟಿರತಕ್ಕಂಥ ಪಟ್ಟಿಯಲ್ಲಿ ೨೬ ವೃತ್ತಿ ತರಬೇತಿ ಕೇಂದ್ರಗಳಿವೆ ಎಂದು ಕೊಟ್ಟಿರುತ್ತೀರಿ. ಇದರಲ್ಲಿ ಇರತಕ್ಕಂಥದ್ದು ೧೮ ಸ್ಥಳಗಳಲ್ಲಿ ಮಾತ್ರ ವೃತ್ತಿ ತರಬೇತಿ ಕೇಂದ್ರಗಳಿವೆ. ಪ್ರತಿಯೊಂದು ತಾಲ್ಲೂಕಿಗೂ ಕೂಡ ಒಂದು ವೃತ್ತಿ ತರಬೇತಿ ಕೇಂದ್ರವನ್ನು ಮಾಡದೇಹೋದರೆ ಬಹಳ ತೊಂದರೆಯಾಗುತ್ತದೆ. ಏತಕ್ಕೆಂದರೆ ಎಸ್.ಎಸ್.ಎಲ್.ಸಿ ಪಾಸ್ ಆದವರೂ, ಗ್ರಾಜ್ಯುಯೇಟ್ಸ್. ಆದವರು ಲಕ್ಷಾಂತರ ಜನರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿರುತ್ತಾರೆ. ಎಷ್ಟೋ ಜನರೂ ಕೆಲಸವಿಲ್ಲದೆ ಇರತಕ್ಕಂಥ ನಿದರ್ಶನಗಳು ಇರುತ್ತವೆ. ವೃತ್ತಿ ತರಬೇತಿ ತೆಗೆದುಕೊಂಡಿದ್ದರೆ ಸರ್ಕಾರದಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಸಿಕ್ಕದಿದ್ದರೂ ಕೂಡ ಸ್ವಂತ ಕೆಲಸವನ್ನು ಮಾಡಲು ಅನುಕೂಲವಾಗುತ್ತದೆ. ಡೀಸೆಲ್ ಎಂಜಿನ್‌ಗಳ ರಿಪೇರಿ, ಟ್ರಾಕ್ಟರುಗಳ ರಿಪೇರಿ ಮಾಡತಕ್ಕಂಥದ್ದು, ಎಲೆಕ್ಟ್ರಿಫಿಕೇಷನ್. ಸಣ್ಣ ಸಣ್ಣ ಯಂತ್ರಗಳನ್ನು ರಿಪೇರಿ ಮಾಡತಕ್ಕಂಥದ್ದು ಇವೇ ಮುಂತಾದವುಗಳನ್ನು ಸ್ವಂತವಾಗಿ ಮಾಡಿಕೊಂಡು ತಮ್ಮ ಜೀವನವನ್ನು ಮಾಡಲು ಸಾಧ್ಯವಾಗುತ್ತದೆ. ಈವತ್ತಿನ ದಿವಸ ಎಲ್ಲ ತಾಲ್ಲೂಕುಗಳಲ್ಲಿಯೂ ಕೂಡ ಬೇಕಾದಷ್ಟು ಪಂಪ್‌ಸೆಟ್ಟುಗಳು ಬಂದಿರುತ್ತವೆ, ಟ್ರ್ಯಾಕ್ಟರುಗಳು ಬಂದಿರುತ್ತವೆ. ಅವುಗಳು ಕೆಟ್ಟು ಹೋದರೆ ಅವುಗಳ ದುರಸ್ತಿಗಾಗಿ ಜಿಲ್ಲಾ ಕೇಂದ್ರಗಳಿಗೆ ಬರಬೇಕಾಗಿರುತ್ತದೆ. ಆದ್ದರಿಂದ ವೃತ್ತಿ ತರಬೇತಿ ಕೇಂದ್ರಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ಬಹಳ ಮುಖ್ಯವಾದ ವಿಚಾರವೆಂದರೆ ಎಲ್ಲಿ ನೋಡಿದರೂ ಈ ಮೇಸನ್ ಅಂದರೆ ಗಾರೆ ಕೆಲಸ ಮಾಡತಕ್ಕಂಥ ಒಂದು ತರಬೇತಿ ಕೊಡುವುದು ಇರುವುದಿಲ್ಲ. ಇದು ಬಹಳ ಮುಖ್ಯವಾದುದು, ಒಂದು ಇಟ್ಟಿಗೆ ಸ್ವಲ್ಪ ಓರೆಕೋರೆಯಾದರೆ ಅದನ್ನು ಸರಿಪಡಿಸಬೇಕಾದರೆ ಬಹಳಷ್ಟು ಸಿಮೆಂಟನ್ನು ಉಪಯೋಗಿಸಬೇಕಾಗುತ್ತದೆ ಎಷ್ಟು ಸಿಮೆಂಟ್ ಉಪಯೋಗಿಸಬೇಕಾಗಿರುತ್ತದೆ ಅದಕ್ಕೆ ಒಂದೂವರೆಯಷ್ಟು ಸಿಮೆಂಟನ್ನು ಉಪಯೋಗಿಸಬೇಕಾಗುತ್ತದೆ. ಇದರಿಂದ ಮನೆಯನ್ನು ಕಟ್ಟಿಸತಕ್ಕಂಥವನಿಗೂ ಬಹಳಷ್ಟು ನಷ್ಟವಾಗುತ್ತದೆ. ಸರ್ಕಾರದವರು ಇದನ್ನು ಮನಸ್ಸಿಗೆ ಏತಕ್ಕೆ ತೆಗೆದುಕೊಳ್ಳುತ್ತಿಲ್ಲವೋ ತಿಳಿಯುತ್ತಿಲ್ಲ. ಮೇಸಿನ್ ತರಬೇತಿ ಕೊಡುವುದನ್ನು ಕೂಡ ವೃತ್ತಿ ಶಿಕ್ಷಣ ತರಬೇತಿಯಲ್ಲಿ ಅಳವಡಿಸಿಕೊಳ್ಳಬೇಕೆಂದು ಸೂಚನೆಯನ್ನು ಕೊಡಬಯಸುತ್ತೇನೆ. ಇಷ್ಟು ಹೇಳಿ ಎಂಪ್ಲಾಯ್‌ಮೆಂಟ್ ವಿಷಯದ ಬಗ್ಗೆ ಹೇಳುವುದಾದರೆ ಎಂಪ್ಲಾಯ್‌ಮೆಂಟ್ ರಿಜಿಸ್ಟರ್ ಆಕ್ಟ್ ಪ್ರಕಾರ ೩ ೭೪೯ ಜನ ಕೆಲಸವಿಲ್ಲದೆ ರಿಜಿಸ್ಟರ್ ಮಾಡಿಸಿರುತ್ತಾರೆಂದು ತಿಳಿದಿರುತ್ತದೆ. ರಿಜಿಸ್ಟರ್ ಮಾಡಿಕೊಳ್ಳದೆ. ಇದು ತಿಳಿಯದೇ ಇರತಕ್ಕಂಥವರು ಎಷ್ಟೋ ಜನರು ಇರುತ್ತಾರೆ. ಡಿಪಾರ್ಟ್‌ಮೆಂಟ್‌ನವರು ಅವರುಗಳಿಗೆ ಕೆಲಸಗಳನ್ನು ಹೊಂದಿಸತಕ್ಕಂಥ ಕಾಲದಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿಲ್ಲ. ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಚನೆ ಸಂಬಂಧಪಟ್ಟವರಿಗೆ ನೀಡಬೇಕೆಂದು ಕೇಳಿಕೊಳ್ಳುತ್ತಾ, ಮತ್ತೊಮ್ಮೆ ಇಂಡಸ್ಟ್ರಿಯಲ್

ಡಿಸ್‌ಪ್ಯೂಟ್ ಆಕ್ಟ್‌ನಲ್ಲಿ ಮತ್ತು ಪ್ಲಾಂಟೇಷನ್ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟ್‌ಗಳನ್ನು ತರಬೇಕೆಂದು ಸೂಚನೆ ಮಾಡುತ್ತೇನೆ. ಇದರ ಬಗ್ಗೆ ಒಂದು ಕಾನ್‌ಫರೆನ್ಸ್ ಕರೆಯುವುದಾಗಿ ತಿಳಿಸಿದ್ದೀರಿ. ಅದನ್ನು ಕೂಡ ಆದಷ್ಟು ಜಾಗ್ರತೆಯಾಗಿ ತೀರ್ಮಾನ ತೆಗೆದುಕೊಂಡು ಕಾರ್ಮಿಕ ಇಲಾಖೆ ಪ್ರತಿಯೊಬ್ಬ ಬಡ ಕಾರ್ಮಿಕರಿಗೂ ಕೂಡ ಅನುಕೂಲಕರವಾದ ರೀತಿಯಲ್ಲಿ ಕೆಲಸ ಮಾಡಿದರೆ ನಿಮ್ಮ ಇಲಾಖೆ ಇರುವುದಕ್ಕೂ ಸಾರ್ಥ್ಯವಾಗುತ್ತದೆ. ಇಲ್ಲದಿದ್ದರೆ ಕಣ್ಣು ಒರೆಸುವುದಕ್ಕೋಸ್ಕರ ನಿಮ್ಮ ಇಲಾಖೆಯನ್ನು ಇಟ್ಟುಕೊಂಡಿರುತ್ತೀರಿ ಎನ್ನುವ ಭಾವನೆ ಬರುತ್ತದೆ ಎಂದು ಹೇಳಿ ಸ್ವಲ್ಪ ಹೆಚ್ಚಿನ ಕಾಲಾವಕಾಶವನ್ನು ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ತಕ್ಕೇಡ್ (ಪರಸಗಡ).—ಸನ್ಮಾನ್ಯ ಅಧ್ಯಕ್ಷರೇ, ಕಾರ್ಮಿಕ, ಯೋಜನೆ ಹಾಗೂ ವಾಕ್ಫ್ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ವಾಕ್ಫ್ ಬೋರ್ಡ್ ನಮ್ಮ ರಾಜ್ಯದಲ್ಲಿ ಧರ್ಮ ಭೋಧೆಯನ್ನು ಜನರಲ್ಲಿ ಜಾಗೃತಿಯನ್ನು ಮೂಡಿಸುವ ಸಲುವಾಗಿ ಬೆಳೆದು ಬಂದ ಒಂದು ಸಂಸ್ಥೆ. ಈ ಒಂದು ಸಂಸ್ಥೆಯಲ್ಲಿ ವಾಕ್ಫ್ ಅಭಿವೃದ್ಧಿ ಮತ್ತು ಹಾಜ್ ಕಮಿಟಿ ಎಂದು ಮಾಡಲಾಗಿದೆ. ಧಾರ್ಮಿಕ ವಿಷಯದಲ್ಲಿ ಜನರಲ್ಲಿ ಒಂದು ಸೌಹಾರ್ದಯುತವಾದ ಭಾವನೆ ಬೆಳೆದು ಬರಬೇಕು, ಅವರಲ್ಲಿ ಒಂದು ವಿವೇಕ ಮತ್ತು ಧರ್ಮದಲ್ಲಿ ಒಂದು ಅಚಲವಾದ ಶ್ರದ್ಧೆ ಬೆಳೆದು ಬರಬೇಕು. ಆ ಬಗ್ಗೆ ಆಸಕ್ತಿ ಹುಟ್ಟಿಸಬೇಕು ಎನ್ನುವ ಬಗ್ಗೆ ಅನೇಕ ಸಂಸ್ಥೆಗಳು ಇವೆ. ಎಲ್ಲಾ ರಾಜ್ಯಗಳಲ್ಲಿ ಇರುವಂತೆ ಈ ಒಂದು ವಾಕ್ಫ್ ಬೋರ್ಡ್ ಏನಿದೆ ಇದರ ಸಂಸ್ಥೆಗಳಿಗೆ ಸಂಬಂಧಪಟ್ಟ ಆಸ್ತಿ ಏನಿದೆ ಆ ಆಸ್ತಿ ಧರ್ಮದ ಸಲುವಾಗಿ ವಿನಿಯೋಗ ಮಾಡುವ ಒಂದು ಸದುದ್ದೇಶದಿಂದ ಈ ಒಂದು ವಾಕ್ಫ್ ಬೋರ್ಡ್ ಬಂದಿದೆ. ಈ ಒಂದು ಸಂಸ್ಥೆಯು ಮುಂದಿನ ಕಾರ್ಯ ಸರಿಯಾದ ರೀತಿಯಲ್ಲಿ ನಮ್ಮ ರಾಜ್ಯದ ಜನತೆಗೆ, ಅದರಲ್ಲೂ ವಿಶೇಷವಾಗಿ ಇಸ್ಲಾಮ್ ಧರ್ಮದವರಿಗೆ ಉಪಯೋಗ ಆಗಬೇಕು, ಆ ರೀತಿಯಲ್ಲಿ ಮಾನ್ಯ ಮಂತ್ರಿಯವರು ಕಾರ್ಯಗಳನ್ನು ಹಾಕಿಕೊಂಡು ಒಂದು ಹೆಚ್ಚಿನ ದೃಷ್ಟಿಕೋನವನ್ನು ಇಟ್ಟು ಕೆಲಸ ಮಾಡಬೇಕೆಂದು ನಾನು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ. ಹಾಜ್ ಕಮಿಟಿಗೆ ನಮ್ಮ ರಾಜ್ಯದಿಂದ ಇವತ್ತು ಮುಂಬೈನಲ್ಲಿ ಒಂದು ಕಟ್ಟಡವನ್ನು ಕಟ್ಟಿಸಲಾಗುತ್ತಿದೆ. ಹಾಜ್ ಯಾತ್ರೆ ಕೈಗೊಳ್ಳುವವರಿಗೆ ಒಂದು ಪವಿತ್ರವಾದ ಕಾರ್ಯ ಮಾಡಿದಂತಾಗುತ್ತದೆ. ಪುಣ್ಯ ಪುರುಷರು ಹೋಗಿ ಪವಿತ್ರ ಆತ್ಮರಾಗಿ ಬರುವಂತಹ ಈ ಒಂದು ಕಾರ್ಯಕ್ಕೆ ನಮ್ಮ ರಾಜ್ಯ ಸರ್ಕಾರ ಕೊಡುವ ಈ ಒಂದು ಪುರಸ್ಕಾರ ಯೋಗ್ಯವಾದುದು. ಅದಕ್ಕೆ ಇನ್ನೂ ಹೆಚ್ಚಿನ ಸಹಾಯ ಬೇಕಾದಲ್ಲಿ ನಮ್ಮ ಮಾನ್ಯ ಮಂತ್ರಿಗಳು ಅದನ್ನು ಕೊಡುವುದಕ್ಕೆ ಅಡ್ಡಿಯಿಲ್ಲವೆಂದು ನಾನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇನ್ನು ಸುರಪುರದಲ್ಲಿ ಏನೊಂದು ಹಳೆಯ ಮಸೀದಿ ಇತ್ತು ಅಲ್ಲಿ ಒಂದು ಹೊಸದಾಗಿ ಕಟ್ಟಬೇಕೆಂದು ಮಾನ್ಯ ಕುಮಾರನಾಯಕರಿಂದ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದ್ದಾರೆ ಸರ್ಕಾರಕ್ಕೆ ವಿನಂತಿ ಮಾಡಿಕೊಂಡು ಆ ಸ್ಥಳದಲ್ಲಿ ಮೊದಲು ಒಂದು ಪವಿತ್ರವಾದ ಮಸೀದಿ ಇತ್ತು ಆ ಸ್ಥಳದಲ್ಲಿ ಒಂದು ಮಸೀದಿಯನ್ನು ಕಟ್ಟುವುದಕ್ಕೆ ಮನ್ನಣೆ ಕೊಡಬೇಕೆಂದು ತಿಳಿಸಿದ್ದರು. ಆ ಸ್ಥಳದಲ್ಲಿ ಒಂದು ಮಸೀದಿಯನ್ನು ಕಟ್ಟಬೇಕೆಂದು ಸರ್ಕಾರ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿತು. ನಮ್ಮ ದೇಶದ ಮಹಾ ನಾಯಕರಾದ ಶ್ರೀಮಾನ್ ವಲ್ಲಭಾಯ್ ಪಟೇಲ್ ಅವರಿಗೆ ಇಡೀ ದೇಶದ ಜನತೆ ಈಗಲೂ ಹಿಂದೆಯೂ ಹಾಗೂ ಮುಂದೆಯೂ ಸರಿಯಾದ ರೀತಿಯ ಗೌರವವನ್ನು ಸೂಚಿಸುತ್ತಾ ಬಂದಿದೆ. ಈ ದೇಶದಲ್ಲಿ ಬೆಳೆದ ಜಾತೀಯ ಸೌಕರ್ಯದ ದೃಷ್ಟಿಯಿಂದ ಈ ಕಾರ್ಯವನ್ನು ಮಾಡುವುದಾಗಿದೆ. ಶ್ರೀ ವಲ್ಲಭಾಯಿ ಪಟೇಲ್‌ರವರ ಈಗಿರತಕ್ಕಂತಹ ಪುತ್ಥಳಿಯನ್ನ ಬೇರೆ ಯಾವ ಸ್ಥಳದಲ್ಲಿ ಸ್ಥಾಪನೆ ಮಾಡುವ ಬಗ್ಗೆ, ಆ ಬಗ್ಗೆ ಸ್ಥಳವನ್ನು ಗೊತ್ತುಮಾಡುವ ಬಗ್ಗೆ ಸ್ಟೇ ಆರ್ಡರ್ ಕೊಡಲಾಗಿದೆ. ಇದು ಏನನ್ನು ತೋರಿಸುತ್ತದೆಂದರೆ ನಮ್ಮ ರಾಜ್ಯದಲ್ಲಿ ಮತೀಯ ಒಂದು ಭಿನ್ನಾಭಿಪ್ರಾಯ ಇಲ್ಲದೇ ಸೌಹಾರ್ದ ರೀತಿಯಿಂದ ಪ್ರೇಮದಿಂದ, ಶಾಂತಿಯಿಂದ ಇದನ್ನು ಮಾಡಬೇಕು, ಈ ದೇಶದ ಜನರಲ್ಲಿ ಸರಿಯಾಗ ಒಂದು ಧರ್ಮದ ಬಗ್ಗೆ ಕಲ್ಪನೆ ಇರಬೇಕು ಎಂಬುದನ್ನು ತೋರಿಸುತ್ತದೆ. ಪ್ರತಿಯೊಂದು ಧರ್ಮದ ಬಗ್ಗೆ ಮನ್ನಣೆ ಗೌರವ ಇದೆ ಎಂಬುದನ್ನು ಇದು ಸೂಚಿಸು

† Indicates that remarks or speeches have not been revised by the member concerned.

ತ್ತದೆ. ಈ ರಾಜ್ಯದ ನಮ್ಮ ವಾಕ್ಫ್ ಬೋರ್ಡ್ ಪ್ರತಿಯೊಂದು ಆಸ್ತಿಯನ್ನು ಸರಿಯಾಗಿ ನೋಡಿಕೊಳ್ಳುತ್ತಿದೆ. ಮತ್ತು ಎಲ್ಲಾದರೂ ವ್ಯತ್ಯಾಸ ಆಗಿದ್ದರೆ ಆದನ್ನು ಸರಿಪಡಿಸುವ ದೃಷ್ಟಿಯಿಂದ ಇವತ್ತು ಸರ್ಕಾರದವರು ತೆಗೆದುಕೊಂಡಿದ್ದಾರೆಯೇ ಹೊರತು ಇಂದು ಯಾರನ್ನೇ ಆಗಲೀ, ವಾಕ್ಫ್ ಬೋರ್ಡ್‌ನ್ನಾಗಲೀ, ಹಾಜ್ ಕಮಿಟಿಯನ್ನಾಗಲಿ ದೂಷಿಸುವ ಪ್ರಶ್ನೆ ಬರುವುದಿಲ್ಲ. ಇಲ್ಲಿ ದ್ವೇಷ, ತಿರಸ್ಕಾರ ಮಾಡುವ ದೃಷ್ಟಿ ಇಲ್ಲ ಎಂದು ನಾನು ಹೇಳುತ್ತೇನೆ. ಇಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಇದೆ. ಅದನ್ನೆಲ್ಲಾ ಕ್ರೂಢೀಕರಿಸಿ ಇವತ್ತು ಧರ್ಮದ ಕಾರ್ಯಗಳಿಗೆ ವಿನಿಯೋಗಿಸುವ ಉದ್ದೇಶದಿಂದ ಇವತ್ತು ಈ ಕಾರ್ಯವಾಗುತ್ತಿದೆಯೆಂದು ಹೇಳಿ ಇವತ್ತು ವಾಕ್ಫ್ ಮಂತ್ರಿಗಳು ಏನು ಬೇಡಿಕೆಯನ್ನು ಮಂಡಿಸಿದ್ದಾರೆ ಅದು ಬಹಳ ಯುಕ್ತ ಇದೆ ಅದನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆಂದು ಹೇಳುತ್ತೇನೆ.

ಇನ್ನು ಯೋಜನೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಡತನ ನಿರ್ಮೂಲನ ಹಾಗೂ ನಿರುದ್ಯೋಗ ನಿರ್ಮೂಲನದ ಬಗ್ಗೆ ಸರ್ಕಾರ ಭರವಸೆಗಳನ್ನು ಕೊಡುತ್ತ ಬಂದಿದೆ. ಬಡತನ ನಿರ್ಮೂಲನ ಮಾಡುವ ಸಲುವಾಗಿ ನಮ್ಮ ಯೋಜನೆಗಳಲ್ಲಿ ಬಹಳ ಕಾರ್ಯಕ್ರಮ ಗಳನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲಿ ಅವರು ಹಾಕಿಕೊಂಡಿರತಕ್ಕ ಯೋಜನೆಗಳ ಪೈಕಿ ಈ ದಿನ ಉದ್ಯೋಗ ದೃಢೀಕರಣ ಯೋಜನೆ ಬಹಳ ಮಹತ್ವದ್ದಾಗಿದೆ. ಕಳೆದ ೩೦ ವರ್ಷಗಳಲ್ಲಿ ಏನು ನಮ್ಮ ಹಳ್ಳಿಗಳಲ್ಲಿ ನೀರು ಇದ್ದಿದ್ದಿಲ್ಲ, ರಸ್ತೆ ಆಗಿದ್ದಿಲ್ಲ, ಸರಿಯಾದ ರೀತಿಯ ನೈರ್ಮಲ್ಯ ಯೋಜನೆ ಆಗಿದ್ದಿಲ್ಲ ಅಂತಹದ್ದನ್ನೆಲ್ಲಾ ಕಾರ್ಯರೂಪಕ್ಕೆ ತರುವುದಕ್ಕೆ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿದೆ. ೨೦ ಅಂಶಗಳ ಕಾರ್ಯಕ್ರಮದ ಕೆಳಗೆ ಗ್ರಾಮೀಣ ಪ್ರದೇಶದಲ್ಲಿ ಸರಿಯಾದಂತಹ ಪ್ರಗತಿಯನ್ನು ಮಾಡುವುದು ಸಾಧ್ಯವಿದೆ ಎಂದು ತೋರಿಸಲಾಗಿದೆ. ಈ ದಿನ ಕೇಂದ್ರ ಸರ್ಕಾರದವರು ದೆಹಲಿಯಲ್ಲಿ ಕುಳಿತುಕೊಂಡು ಯೋಜನೆಗಳನ್ನು ತಯಾರು ಮಾಡಿದರೂ ಕೂಡಾ ಅವರು ಹಳ್ಳಿಗಳನ್ನು ಯಾವ ರೀತಿಯಿಂದಲೂ ಅಲಕ್ಷ್ಯ ಮಾಡಿಲ್ಲ. ಸ್ವಾತಂತ್ರ್ಯಾನಂತರ ಗ್ರಾಮಾಂತರ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ನೂರಕ್ಕೆ ಐವತ್ತು ಭಾಗ ಜನ ಬಡತನದ ರೇಖೆಯ ಕೆಳಗೆ ಇದ್ದು ಈ ಜನರ ಬಗ್ಗೆ ಸರಿಯಾದಂತಹ ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ ಇವರ ಬಡತನವನ್ನು ನಿರ್ಮೂಲನ ಮಾಡಬೇಕಾದರೆ, ನಮ್ಮ ನೀರಾವರಿ ಯೋಜನೆಗಳನ್ನು ಸರಿಯಾಗಿ ಮಾಡಬೇಕಾಗಿದೆ. ಇನ್ನು ಎರಡನೆಯದಾಗಿ, ಉದ್ಯೋಗ. ಔದ್ಯೋಗಿಕ ಸೌಕರ್ಯಗಳನ್ನು ನಾವು ನಿರ್ಮಾಣ ಮಾಡಬೇಕಾಗಿದೆ. ಹಳ್ಳಿಗಳ ಕಡೆ ಕೈಗಾರಿಕೆಗಳ ಸ್ಥಾಪನೆಗೆ ಹೆಚ್ಚು ಆದ್ಯತೆ ಕೊಡಬೇಕಾಗಿದೆ. ಇವನ್ನು ಹಳ್ಳಿಗಳ ಕಡೆ ವಿಕೇಂದ್ರೀಕರಣ ಮಾಡಬೇಕಾಗಿದೆ.

ಇನ್ನು ವಿದ್ಯುಚ್ಛಕ್ತಿಯ ಸರಬರಾಜನ್ನು ಹಳ್ಳಿಗಳ ಕಡೆಗೆ ಹೆಚ್ಚು ಮಾಡಬೇಕಾಗಿದೆ. ದೊಡ್ಡ ದೊಡ್ಡ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಬೆಳಗಾಂನಲ್ಲಿರುವ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಮೂರನೇ ಒಂದು ಭಾಗದಷ್ಟು ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ ಪಂಜಾಬ್ ಹಾಗೂ ಹರಿಯಾಣ ರಾಜ್ಯಗಳಲ್ಲಿ ಇವತ್ತು ಗ್ರಾಮಾಂತರ ಪ್ರದೇಶಗಳ ಕಡೆಗೆ ಹೆಚ್ಚು ವಿದ್ಯುತ್ ಒದಗಿಸಿ ಅಲ್ಲಿಯ ಉದ್ಯೋಗ ಶಕ್ತಿಯನ್ನು ಹೆಚ್ಚಿಸಿದ್ದಾರೆ. ಅದೇ ರೀತಿ ನಮ್ಮಲ್ಲೂ ಕಾರ್ಯಕ್ರಮಗಳು ಆಗಬೇಕೆಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಸಂಪನ್ಮೂಲಗಳನ್ನು ದೊರಕಿಸಿಕೊಡಬೇಕಾಗುತ್ತದೆ. ಹಣ ಸಹಾಯವನ್ನು ಮಾಡಬೇಕಾಗುತ್ತದೆ. ಬೇರೆ ಬೇರೆ ತರಬೇತಿ ಕೇಂದ್ರಗಳ ಮುಖಾಂತರ ತರಬೇತಿಯನ್ನು ಕೊಟ್ಟು ಅವರ ಬಡತನದ ನಿರ್ಮಾಲನದ ಕಡೆಗೆ ಹೆಚ್ಚು ಗಮನಕೊಡಬೇಕಾಗುತ್ತದೆ. ಹಾಗೂ ನಿರುದ್ಯೋಗ ನಿವಾರಣೆಯಾಗಬೇಕಾದರೆ ಒಕ್ಕಲುತನದಲ್ಲಿ ಅನೇಕ ಸುಧಾರಣೆಗಳನ್ನು ಮಾಡಬೇಕಾಗಿದೆ. ನೂರಕ್ಕೆ ಎಪ್ಪತ್ತೈದು ಭಾಗ ಇರುವ ಒಕ್ಕಲುತನದ ಅಭಿವೃದ್ಧಿಗಾಗಿ, ನೀರು ಸಿಗುವ ಕಡೆ ಅಣೆಕಟ್ಟುಗಳನ್ನು ಕಟ್ಟಿಸಿ, ಕೆರೆಗಳನ್ನು ಕಟ್ಟಿಸಿ ನೀರನ್ನು ಒದಗಿಸಬೇಕಾಗಿದೆ ರೈತರಿಗೆ ನೀರು ಎಂದರೆ ಅದು ಬಂಗಾರ ಇದ್ದ ಹಾಗೆ. ಬಂಗಾರದಂತಹ ನೀರನ್ನು ರೈತರಿಗೆ ಕೊಟ್ಟರೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ. ನಮ್ಮ ರಾಜ್ಯದಲ್ಲಿ ಬಡತನ ಸಂಪೂರ್ಣ ನಿರ್ಮೂಲನವಾಗಬೇಕಾದರೆ ಕೃಷಿಕರಿಗೆ, ಕೃಷಿ ಕಾರ್ಮಿಕರಿಗೆ ಸರಿಯಾದ ಒಂದು ಉದ್ಯೋಗಾವಕಾಶವನ್ನು ಕಲ್ಪಿಸುವ ಯೋಜನೆಗಳನ್ನು ನಮ್ಮ ಸರ್ಕಾರ ನಿರ್ಮಾಣ ಮಾಡಬೇಕಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸರಿಯಾದ ರೀತಿಯಲ್ಲಿ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಕ್ಕೆ ತರುತ್ತಿವೆ. ಇದನ್ನು ಅನುಷ್ಠಾನಕ್ಕೆ ತರುವಾಗ

ಕೆಲವೊಂದು ಕಡೆ. ಕೆಲವೊಂದು ರೀತಿಯ ಹಣ ಅಪವ್ಯಯವಾಗಿದೆ. ಆ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನಕೊಟ್ಟು ಅಪವ್ಯಯ ಯಾರಿಂದ ಯಾವ ಕಾರಣದಿಂದ ಆಗಿದೆ ಎಂದು ಕಂಡು ಹಿಡಿದು ಅವರ ಬಗ್ಗೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಈ ಯೋಜನೆ ಸರಿಯಾದ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಅನುಷ್ಠಾನದಲ್ಲಿ ಬರುತ್ತಿದೆ. ಸರಿಯಾದ ಕಾರ್ಯಕ್ರಮಗಳನ್ನು ನಮ್ಮ ರಾಜ್ಯಕ್ಕೆ ಹಾಕಿಕೊಂಡಿದ್ದು ಆಗಿದೆ, ಈ ದಿಶೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳು, ಯೋಜನಾ ಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಹೋಗಿ ಅನೇಕ ಯೋಜನೆಗಳನ್ನು ತಂದಿದ್ದಾರೆ. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡಬೇಕಾಗಿದೆ. ಪಶ್ಚಿಮಘಟ್ಟದ ಯೋಜನೆ ಬಹಳ ಪ್ರಮುಖ್ಯವಾದುದು, ಈ ಯೋಜನೆಯಿಂದ ಹೆಚ್ಚಿನ ಲಾಭವನ್ನು ಪಡೆದಿದ್ದೇವೆ. ಮಹಾರಾಷ್ಟ್ರ ಸರ್ಕಾರದವರು ಕೇರಳ ಸರ್ಕಾರದವರು ನಮ್ಮ ಸರ್ಕಾರಕ್ಕಿಂತ ಹೆಚ್ಚಿನ ರೀತಿಯಲ್ಲಿ ಸಹಾಯ ಪಡೆದಿದ್ದಾರೆ. ನನ್ನ ಮತದಾರ ಕ್ಷೇತ್ರವಾದ ಸವದತ್ತಿ ಪಶ್ಚಿಮಘಟ್ಟದ ಯೋಜನೆಗೆ ಬರುತ್ತದೆ ನನಗೆ ೧ ಲಕ್ಷ ರೂಪಾಯಿಗಳನ್ನು ಯೋಜನೆಗೆ ಕೊಟ್ಟಿದ್ದಾರೆ. ಮುಗಳಿಹಾಳ ಮತ್ತು ಅಕ್ಕಿಸಾಗರದ ನಡುವೆ ಬ್ರಿಡ್ಜ್ ಕಟ್ಟಲಿಕ್ಕೆ ೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪಶ್ಚಿಮಘಟ್ಟದ ಯೋಜನೆಯಲ್ಲಿ ಖಾನಪುರ, ಬೆಳಗಾವಿ, ಬೈಲಹೊಂಗಲ ಸವದತ್ತಿ ಒಟ್ಟು ೫ ತಾಲ್ಲೂಕುಗಳು ಸೇರುತ್ತವೆ. ಎಷ್ಟು ಹಣ ಖರ್ಚು ಮಾಡಿದ್ದೀರಿ ಈ ಯೋಜನೆಯಲ್ಲಿ ಎಷ್ಟು ಹಣ ತಂದಿದ್ದೀರಿ ಇದನ್ನು ತಮ್ಮ ಉತ್ತರದಲ್ಲಿ ದಯವಿಟ್ಟು ತಿಳಿಸಬೇಕು. ಪಶ್ಚಿಮಘಟ್ಟದ ಯೋಜನೆಯಿಂದ ಅಭಿವೃದ್ಧಿ ಪಡಿಸಬಹುದು, ಜನತೆಯ ಸರ್ವಾಂಗೀಣ ಮಾಡಲಿಕ್ಕೆ ಯೋಗ್ಯವಿದೆ. ಜನತೆಯ ಕಲ್ಯಾಣಕರ ಕೆಲಸಗಳನ್ನು ಮಾಡಲಿಕ್ಕೆ ಸಂಪೂರ್ಣ ಅವಕಾಶವಿದೆ. ಕೇವಲ ರಸ್ತೆ ಕೆಲಸ ಇಂತಹ ಕೆಲಸಗಳನ್ನು ಮಾಡುವುದಕ್ಕಿಂತ ಹೊಸ ಹೊಸ ಯೋಜನೆಗಳನ್ನು ತಂದು ಅನೇಕ ಮಹತ್ವವಾದ ಕೆಲಸಗಳನ್ನು ಹಿಂದುಳಿದ ಪ್ರದೇಶಗಳಲ್ಲಿ ಕೆಲಸ ಮಾಡಿ ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಿದೆ. ಕೇಂದ್ರ ಸರ್ಕಾರವೇ ಈ ಯೋಜನೆಯನ್ನು ತಂದದ್ದು ಆಗಿದೆ, ಅದಕ್ಕಾಗಿ ಮಾನ್ಯ ಯೋಜನಾ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಈ ಯೋಜನೆಯಿಂದ ಹೆಚ್ಚಿನ ಕೆಲಸಗಳನ್ನು ತೆಗೆದುಕೊಂಡು ಬಂದು ನಮ್ಮ ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಕಾರ್ಮಿಕ ಇಲಾಖೆಯ ಬಗ್ಗೆ ಹೇಳುವುದೇನೆಂದರೆ, ನಮ್ಮ ದೇಶದಲ್ಲಿ ಕೈಗಾರಿಕಾ ಕಾರ್ಮಿಕರ ಒಂದು ಸಮಸ್ಯೆ ಬಹಳ ಬೃಹದಾಕಾರವಾದುದು. ಈ ಸಮಸ್ಯೆಯನ್ನು ಪರಿಹರಿಸಲಿಕ್ಕೆ ನಮ್ಮ ಮುಖ್ಯ ಮಂತ್ರಿಗಳು ಮತ್ತು ಜಕನೂರ್‌ರವರು ವಕೀಲರೂ ಕೂಡ ಆಗಿದ್ದಾರೆ, ಈ ಸಮಸ್ಯೆಯ ಬಗ್ಗೆ ಕೂಲಂಕಷವಾಗಿ ಅಭ್ಯಾಸ ಮಾಡಿ ಸರಿಯಾದ ರೀತಿಯಲ್ಲಿ ಈ ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆಯನ್ನು ಪರಿಹರಿಸಬೇಕು. ನಾವು ಬೇರೆ ಬೇರೆ ರಾಜ್ಯಗಳಲ್ಲಿ ನೋಡುತ್ತಿದ್ದೇವೆ, ನಮ್ಮ ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಪ್ರತಿದಿನ ಸಂಪು, ಸಂಪಿನ ಮುಖಾಂತರ ವಿಧ್ವಂಸಕ ಕೃತ್ಯಗಳು ನಿರ್ಮಾಣವಾಗಿ ಅನೇಕ ರೀತಿಯಲ್ಲಿ ಹಣ ವ್ಯಯವಾಗುತ್ತಿದೆ. ಅಲ್ಲಿನ ಪರಿಸ್ಥಿತಿಯನ್ನು ಗಮನಿಸಿದಾಗ ನಮ್ಮ ರಾಜ್ಯದಲ್ಲಿ ಕಾರ್ಮಿಕರ ಸಮಸ್ಯೆಗಳು ಸರಿಯಾದ ರೀತಿಯಲ್ಲಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಗಿರಣಿಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಸುಮಾರು ೨೪ ಲಕ್ಷ ಕಾರ್ಮಿಕರು ಇದ್ದಾರೆ. ಕೈಮಗ್ಗ ಮತ್ತು ಪವರ್‌ಲೂಮ್‌ಗಳಲ್ಲಿ ನೇಕಾರರಾಗಿ ಕೆಲಸ ಮಾಡತಕ್ಕವರು ರಾಜ್ಯದಲ್ಲಿ ಸುಮಾರು ೫, ೬ ಲಕ್ಷ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಒಂದು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ಮಿನಿಮಮ್ ವೇಜಸ್ ಆಕ್ಟ್ ಇರತಕ್ಕ ಬಗ್ಗೆ ಬೆಳಗಾವಿಯಲ್ಲಿ ೨, ೩ ತಿಂಗಳ ಹಿಂದೆ ಒಂದು ಸಂಪು ನಡೆಯಿತು. ತಮ್ಮ ಗಮನಕ್ಕೆ ಏತಕ್ಕೆ ತರುತ್ತಿದ್ದೇನೆ ಅಂದರೆ ಹಿಂದಿನ ಕಾರ್ಮಿಕ ಮಂತ್ರಿಗಳಾದ ಮಾನ್ಯ ಇಬ್ರಾಹಿಂರವರು ಬೆಳಗಾವಿಯಲ್ಲಿ ಇದನ್ನು ನೋಡಿದ್ದಾರೆ. ಮಿನಿಮಮ್ ವೇಜಸ್ ಆಕ್ಟ್‌ನ ಪ್ರಕಾರ ಪವರ್‌ಲೂಮ್‌ನೊಳಗೆ ಕೆಲಸ ಮಾಡತಕ್ಕಂತಹ ಈ ಕಾರ್ಮಿಕರಿಗೆ ಕ್ವಾಲಿಟಿ ಮತ್ತು ಕ್ವಾಂಟಿಟಿ ಇವೆರಡರನ್ನೂ ವಿಚಾರ ಮಾಡಬೇಕಾಗುತ್ತದೆ. ಕಾಯಿದೆ ಇಡೀ ರಾಜ್ಯದಲ್ಲಿ ಒಂದೇ ಅನ್ವಯಿಸಬಾರದು. ಒಂದು ಸ್ಥಳದಲ್ಲಿರತಕ್ಕ ಪರಿಸ್ಥಿತಿ ಇನ್ನೊಂದು ಸ್ಥಳದಲ್ಲಿರುವುದಿಲ್ಲ, ಇವತ್ತು ೫೦ ಮೈಲಿಗೆ ಬೇರೆ ಬೇರೆಯಾದ ಪರಿಸ್ಥಿತಿ ಇರುತ್ತದೆ. ಬೆಳಗಾವಿ, ಬಿಜಾಪುರ, ಜಮಖಂಡಿ, ರಬಕವಿ, ಮತ್ತು ಹುಬ್ಬಳ್ಳಿ ನಮ್ಮ ರಾಜ್ಯದ ಉತ್ತರ ಭಾಗದ ಅದರಲ್ಲೂ ಬೆಳಗಾವಿ ವಿಭಾಗದ ನೇಕಾರರಿಗೆ ಮಿನಿಮಮ್ ವೇಜಸ್ ಆಕ್ಟ್ ಏನಿದೆ ಅದು ಅಷ್ಟೊಂದು ಸರಿಯಾಗಲಿಕ್ಕಿಲ್ಲ. ಕೆಲವೊಂದು ರೇಷ್ಮೆ ಸೀರೆಗಳನ್ನು ನೇಯ್ದರೆ ೫೦ ರೂಪಾಯಿಗಳವರೆಗೂ ಸಿಗುತ್ತದೆ. ಈ ಕಾನೂನನ್ನು ತಂದಿದ್ದರಿಂದ ಕಾರ್ಮಿಕರು ಯಾವ ರೀತಿಯಿಂದ

ರೇಷ್ಮೆ ಬಟ್ಟೆಯನ್ನು ನೇಯ್ಯುತ್ತಾರೆ? ಕೆಲಸಕ್ಕೆ ತಕ್ಕ ಕೂಲಿಯನ್ನು ಕೊಡದ ಹೊರತು ಸರಿಯಾಗುವುದಿಲ್ಲ. ಕನಿಷ್ಠ ೮.೧೦ ಪೈಸೆ ಎಂದು ಏನು ಕಟ್ಟುನಿಟ್ಟಾದ ಆಜ್ಞೆಯನ್ನು ಸರ್ಕಾರದವರು ಮಾಡಬಾರದು. ಎರಡನೆಯದಾಗಿ ನಾನು ಕೇಳಿಕೊಳ್ಳುವುದೇನೆಂದರೆ ಒಂದೇ ಉದ್ಯೋಗ ಮಾಡುವವರಿಗೆ ಒಂದು ದರ ಇರಬೇಕು. ಒಂದನ್ನು ಬೆಳೆಸಿ ಒಂದನ್ನು ನಷ್ಟಮಾಡತಕ್ಕದ್ದು ಸರಿಯಾಗಿರುವುದಿಲ್ಲ, ನಾವು ನಿರುದ್ಯೋಗ ನಿವಾರಣೆ ಮಾಡುತ್ತೇವೆಂದು ಹೇಳುವವರು ಕೈಮಗ್ಗದ ನೇಕಾರರಿಗೂ ಪವರ್‌ಲೂಮ್ ನೇಕಾರರಿಗೂ ಒಂದೇ ದರ ಕೊಡುವುದನ್ನು ಸಂಪೂರ್ಣ ಬಂದ್ ಮಾಡಿ. ನನ್ನ ಮತದಾರ ಕ್ಷೇತ್ರದಲ್ಲಿ ೨೫ ಸಾವಿರದವರೆಗೂ ಸಂಪಾದನೆ ಮಾಡುತ್ತಿದ್ದ ಪವರ್‌ಲೂಮ್‌ಗಳು ಇವತ್ತು ೭.೮ ಸಾವಿರ ರೂಪಾಯಿಗಳನ್ನು ಕೂಡ ಸಂಪಾದಿಸುತ್ತಿಲ್ಲ. ಪವರ್‌ಲೂಮ್ ತೆಗೆದು ಕೈಮಗ್ಗ ಜೋಡಿಸಲಿಕ್ಕೂ ಆಗುವುದಿಲ್ಲ. ಅಧ್ಯಕ್ಷರ ಮುಖಾಂತರ ನಾನು ಕೇಳಿಕೊಳ್ಳುತ್ತಿದ್ದೇನೆ, ನಾವು ನಿರುದ್ಯೋಗ ನಿವಾರಣೆ ಮಾಡುವಾಗ, ನಾವೀಗ ನಿವಾರಣೆಯನ್ನು ಒಂದು ಕಡೆ ಇಟ್ಟು ನಿರುದ್ಯೋಗವನ್ನು ನಿರ್ಮಾಣ ಮಾಡುವಂತಹ ಪರಿಸ್ಥಿತಿ ಬಂದಿದೆ ಇದು ಆಗಬಾರದು. ಒಬ್ಬರನ್ನು ದೊಡ್ಡವರನ್ನಾಗಿ ಮಾಡಿ ಮತ್ತೊಬ್ಬರನ್ನು ಸಣ್ಣವರನ್ನಾಗಿ ಮಾಡುವುದು ಅದು ಆಗಬಾರದು. ನಾವು ಯಾವುದೇ ಉದ್ದಿಮೆಯನ್ನು ಬೆಳೆಸುವಾಗ ಮತ್ತೊಂದು ಹಾನಿಯಾಗದಂತೆ ಮಾಡಬೇಕು. ಈ ಒಂದು ಉದ್ದಿಮೆಯಲ್ಲಿ ಸರಿಯಾದ ತರಬೇತಿಯನ್ನು ಕೊಟ್ಟು ಈ ಒಂದು ಉದ್ದಿಮೆ ಸರಿಯಾದ ರೀತಿಯಲ್ಲಿ ಬೆಳೆದು ಬರಬೇಕು. ಸರ್ಕಾರ ಈ ಬಗ್ಗೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಹಾರಾಷ್ಟ್ರದಲ್ಲಿರತಕ್ಕ ಈಚಲಕಾರಂಜ್, ಮೊಳಗಾಂ ಭಾಗದಲ್ಲಿ ಲಕ್ಷಾಂತರ ಪವರ್‌ಲೂಮ್‌ಗಳಿವೆ. ದೊಡ್ಡಬಳ್ಳಾಪುರದಲ್ಲಿವೆ, ಈ ಒಂದು ಸರ್ಕಾರಿ ಆಜ್ಞೆಯಿಂದ ಎಲ್ಲಾ ಕಡೆ ಕೈಮಗ್ಗದ ಹೆಸರಿನಿಂದ ಪವರ್‌ಲೂಮ್‌ಗಳು ಸಂಪೂರ್ಣ ನಾಶವಾಗುವ ರೀತಿಯಲ್ಲಿದೆ ಇದು ಆಗಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಕಾರ್ಮಿಕ ಮಂತ್ರಿಗಳು ಸರಿಯಾಗಿ ಇದಕ್ಕೊಂದು ಪರಿಹಾರ ಮಾಡಬೇಕು. ನಮ್ಮ ಯೋಜನಾ ಮಂತ್ರಿಗಳು ಯೋಗ್ಯ ರೀತಿಯಿಂದ ನಮ್ಮ ರಾಜ್ಯಕ್ಕೆ ಯೋಜನೆಗಳನ್ನು ತೆಗೆದುಕೊಂಡು ಬರಲಿ. ಇನ್ನು ವರ್ಕ್ಸ್ ಬೋರ್ಡ್‌ಗೆ ಧರ್ಮಬುದ್ಧಿಯಿಂದ ಯೋಜನೆಗಳನ್ನು ಹಾಕಿಕೊಳ್ಳಲಿ ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟೊತ್ತು ಮಾತನಾಡಲು ಕಾಲಾವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ವಂದಿಸಿ ಬೇಡಿಕೆಗಳನ್ನು ಮತ್ತೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದೇನೆ.

†ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ ನಮಗೆ ಒದಗಿಸಿರುವ ಕಾರ್ಮಿಕ ಇಲಾಖೆಯ ವಾರ್ಷಿಕ ವರದಿಯನ್ನು ಓದಿದರೆ, ನಮ್ಮ ಹಳ್ಳಿಗಾಡಿನ ರೈತರ ಮತ್ತು ಕೃಷಿ ಕಾರ್ಮಿಕರ ವಿಚಾರದಲ್ಲಿ ಯಾವುದೂ ಇಲ್ಲ. ಹಳ್ಳಿಗಾಡಿನಲ್ಲಿ ಬೇಕಾದಷ್ಟು ಅಗ್ರಿಕಲ್ಚರಲ್ ಲೇಬರರ್ಸ್ ಇದ್ದಾರೆ, ಅವರಿಗೆ ಏನು ಮಾಡಬೇಕೆಂಬುದರ ಬಗ್ಗೆ ನಮ್ಮ ಕಾರ್ಮಿಕ ಮಂತ್ರಿಗಳು ತಮ್ಮ ರಿಪೋರ್ಟ್‌ನಲ್ಲಿ ಏನು ಕೊಟ್ಟಿಲ್ಲ. ನಮ್ಮ ಕ್ಷೇತ್ರದಲ್ಲಿ ಹೇಳಬೇಕಾದರೆ ಸ್ಟಡ್ ಫಾರಂ ಇದೆ ಅಲ್ಲಿ ಕುದುರೆಗಳನ್ನು ಸಾಕಲು ಅನೇಕ ಜನ ಕಾರ್ಮಿಕರು ಇದ್ದಾರೆ. ಅವರು ಬಹಳ ಕಷ್ಟ ಜೀವನವನ್ನು ನಡೆಸುತ್ತಿದ್ದಾರೆ. ಅಲ್ಲಿ ಕೊಡತಕ್ಕ ಸಂಬಳ ಅವರಿಗೆ ಬಹಳ ಕಡಿಮೆ. ಅವರಿಗೆ ಒಂದು ಒಳ್ಳೆಯ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

೪.೩೦ ಪಿ.ಎಂ.

ಅದಲ್ಲದೆ ನಮ್ಮ ಹಳ್ಳಿಗಾಡಿನಲ್ಲಿ ರೇಷ್ಮೆ ಫಾರಂಸ್ ಏನು ಇವೆ ಅಲ್ಲಿ ತಮಗೆ ಬೇಕಾದ ಜನಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ. ಅವರೆಲ್ಲಾ ಕ್ಯಾಷುಯಲ್ ಲೇಬರರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಸಾಮಾನ್ಯ ಈಗ ಇರತಕ್ಕಂಥಾ ಎಲ್ಲಾ ರೇಷ್ಮೆ ಫಾರಂಗಳಲ್ಲೂ ನೂರಾರು ಜನರ ಈವೊತ್ತಿನವರೆಗೂ ಕೂಡ ಕ್ಯಾಷುಯಲ್ ಲೇಬರರ್ಸ್ ಆಗಿಯೇ ಕೆಲಸ ಮಾಡುತ್ತಿದ್ದಾರೆ. ಅವರನ್ನು ಪರ್ಮನೆಂಟ್ ಆಗಿ ತೆಗೆದುಕೊಂಡಿಲ್ಲ, ಅವರು ಪರ್ಮನೆಂಟ್ ಇರುವುದಿಲ್ಲವಾದ್ದರಿಂದ ಗ್ರಾಚುಯಿಟಿಯೂ ಸಹ ಸಿಕ್ಕುವುದಿಲ್ಲ. ಅಲ್ಲದೆ ಅವರನ್ನು ಕೆಲವು ಟೈಂನಲ್ಲಿ ಮಾತ್ರ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ, ಬೇರೆ ಟೈಂನಲ್ಲಿ ಅವರನ್ನೂ ರಿಮೂವ್ ಮಾಡಿಬಿಡುತ್ತಾರೆ. ಈ ಬಗ್ಗೆ ಸರಿಯಾದ ಒಂದು ಯೋಜನೆ ಹಾಕಿಕೊಂಡು ಅವರನ್ನೆಲ್ಲಾ ಪರ್ಮನೆಂಟ್ ಆಗಿ ಮಾಡಿ ಅಲ್ಲಿ ಕೆಲಸ ಮಾಡುವ ಹಾಗೆ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಎಲ್ಲೆಲ್ಲಿ ಸಿರಿಕಲ್ಚರ್ ಫಾರಂಗಳು ಇವೆಯೋ ಅಲ್ಲೆಲ್ಲಾ ಕ್ಯಾಷುಯಲ್ ಲೇಬರರ್ಸ್ ಕೈಯಲ್ಲೇ ಕೆಲಸ ಮಾಡಿಸಿಕೊಳ್ಳುತ್ತಿದ್ದಾರೆ. ಅವರನ್ನೆಲ್ಲಾ ಪರ್ಮನೆಂಟ್ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಎರಡನೆಯದಾಗಿ ನಮ್ಮ ಕಡೆ ಬೀಡಿ ವರ್ಕರ್ಸ್ ಬೇಕಾದಷ್ಟು ಜನಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೊಡುತ್ತಾ ಇರತಕ್ಕಂಥಾ ಸಂಬಳ ಬಹಳ ಕಡಿಮೆ. ಅವರಿಗೆ ಹೆಚ್ಚು ಸಂಬಳ ಕೊಡುವ ಹಾಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೂರನೆಯದಾಗಿ ನಮ್ಮ ಕಡೆ ಅಗ್ರಿಕಲ್‌ಚರಲ್ ಲೇಬರರ್ಸ್ ಏನು ಕೆಲಸ ಮಾಡುತ್ತಾರೆ ಅವರಿಗೆ ಮೇ ಜೂನ್ ತಿಂಗಳಲ್ಲಿ ಮಾತ್ರ ಕೆಲಸ ಇರುತ್ತದೆ. ಬಾಕಿ ಟೈಂನಲ್ಲಿ ಕೆಲಸ ಇರುವುದಿಲ್ಲ ಆದುದರಿಂದ ತಾಲ್ಲೂಕು ಬೋರ್ಡ್‌ನವರು ಬೇರೆ ಟೈಂನಲ್ಲೂ ಕೂಡ ಕೆಲಸ ಇರುವ ಹಾಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಕೆಲವು ಕಡೆ ಏನು ಆಗುತ್ತದೆ ಎಂದರೆ ಅವರು ಅಲ್ಲಿಂದ ಬೇರೆ ಕಡೆ ಹೋದರೆ ಕೆಲಸ ಸಿಕ್ಕುವುದಿಲ್ಲ. ಅಂಥಾದ್ದರಲ್ಲಿ ಏನು ಮಾಡಬೇಕು ಎಂದರೆ ತಾವು ಯಾವುದಾದರೂ ಡಿಪಾರ್ಟ್‌ಮೆಂಟಿನಲ್ಲಿ ಪ್ರತಿಯೊಂದು ಸ್ಥಳದಲ್ಲೂ ತಾಲ್ಲೂಕು ಬೋರ್ಡ್‌ನವರು ಅವರಿಗೆ ಕೆಲಸ ಸಿಗುವಂತೆ ಅವಕಾಶ ಮಾಡಿ ಕೊಡಬೇಕು ಎಂದು ಹೇಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸಾಮಾನ್ಯವಾಗಿ ೧೦೦ಕ್ಕೆ ೭೦–೮೦ ಜನರು ಹಳ್ಳಿಗಾಡಿನಲ್ಲೇ ವಾಸ ಮಾಡುತ್ತಾರೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಜನಕ್ಕೆ ಅಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿವೆ, ಅವರಿಗೆ ಅಲ್ಲಿ ಅನುಕೂಲವಾಗುವಂತೆ ಮಾಡಿಕೊಡುತ್ತೀರಿ. ಆದರೆ ಹಳ್ಳಿಗಾಡಿನಲ್ಲಿರುವ ಜನರ ಕಷ್ಟವನ್ನು ನೋಡುತ್ತಾ ಇಲ್ಲಾ. ಹಳ್ಳಿಗಾಡಿನಲ್ಲಿ ಎಷ್ಟೋ ಜನಕ್ಕೆ ಜಮೀನು ಇಲ್ಲದೆ ಮನೆ ಇಲ್ಲದೆ ಅವರೆಲ್ಲಾ ಅಗ್ರಿಕಲ್‌ಚರಲ್ ಲೇಬರರ್ಸ್ ಆಗಿ ಕೆಲಸ ಮಾಡುವುದಕ್ಕೆ ಶುರು ಮಾಡಿದ್ದಾರೆ. ಅವರ ಜೀವನ ತುಂಬಾ ಕಷ್ಟವಾಗಿದೆ. ಆದುದರಿಂದ ಅವರು ಮನೆ ಕಟ್ಟಿಕೊಂಡು ವಾಸ ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಅನುಕೂಲ ಮಾಡಿಕೊಡಿ.

(MR. DEPUTY SPEAKER IN THE CHAIR)

ಕೊನೆಯದಾಗಿ ಹೇಳುವುದೇನೆಂದರೆ ತಾವು ಹಳ್ಳಿಗಾಡಿನ ಜನರ ಕಷ್ಟವನ್ನು ಗಮನಕ್ಕೆ ತೆಗೆದುಕೊಂಡು ಅಲ್ಲಿರತಕ್ಕಂಥಾ ಅಗ್ರಿಕಲ್‌ಚರಲ್ ಲೇಬರರ್ಸ್‌ಗೆ ಆದಷ್ಟು ಮಟ್ಟಿಗೆ ಸಹಾಯ ಮಾಡಿಕೊಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† SRI B. B. SAYANAK (Belgaum).—Mr. Deputy Speaker Sir, I rise to oppose the demands which are before the House and make my observations.

The intention of all the Acts pertaining to Labour is good but the implementation is not proper. There is a Minimum Wages Act. It is not implemented. In Nippani, the Beedi workers started an agitation demanding the implementation of Minimum Wages Act. It was not implemented. There were processions. At that time the lady processionists were beaten mercilessly by the police. I saw the ladies who were beaten by the police with my own eyes. I brought it to the notice of the concerned Officers. Our Prime Minister is a lady and during her regime Ladies were beaten up mercilessly because they asked minimum wages. Another thing. Are you doing justice to the agricultural labourers? The Government is not taking care of them. They are asking for minimum wages. Rs. 6 per day per labourer is a minimum wage. But the land lords are not giving Rs. 6 per day per labourer. I request the Government to take drastic action in this behalf. Now regarding 'child labour'. We are seeing in the Canteen attached to the Legislators' Home that the boys working there are below 10 years of age. In most of the shops we see that children are

working as labourers. But the Labour Department is not taking any action. The children who are below 10 years of age should go to schools and learn something. The Department must stop the employment of children below 10 years as labourers. As far as the Employment Exchanges are concerned, as rightly said by hon. Member Sri C. M. Arumugham, I know that there are candidates who have not received a single 'call' for the last 10/15 years whereas some persons who have registered their names just one or two months back have got employment. How is it that this happens? TheOfficers are corrupt and they receive money. If this type of administration continues, there will be a big agitation and people will Gherao the Minister concerned and the Officers of the Department.

In Belgaum, there is a factory BEMCO where more than 1500 workers are employed. The Management has declared a Lock out and 1500 workers are on roads. The workers are going to start an agitation. I brought this fact to the notice of the hon. Minister. I would like to know what is the action taken by the hon. Minister and the Labour Department, in this behalf? The hon. Minister has tried his level best to settle the dispute between the Management and the Labourers. He brought them together. But nothing has happened and as a result, there is a Lock out. In another factory, where about 300 workers are employed. also there is a lock out. There is an Aluminium factory. I do not know what is wrong with the Management of that factory. Every year there will be a strike and the Management says that they are not bothered about it. They say that if there is any strike, they will close the factory. This should not be the attitude of the Management. There are so many factories in Belgaum. The Labour Department is lethargic. They are not taking any interest. If the Labour Department were to be active, there would not have been so many agitations and people especially the Beedi workers would not have starved. In Powerloom industry, more than 15000 workers are there in Belgaum. One man by name Shakadhar Tooki committed suicide. Those workers wanted the Minimum Wages Act to be implemented. But nothing happened. It wa during the time when Sri C. M. Ibrahim was the Labour Minister.

Why? I request the Minister that he must call the management and threaten that they must accept minimum wages. policy whenever there is agitation by workers for minimum wages Otherwise, you should take over the management. You are not going to do it. You say that you are for poor and you are championing the cause of poors and down-trodden but you are not doing justice for them. I request the Minister that he must settle all these and he must tell

his officers whenever there are demands from labourers, they must take initiative and settle the matter then and there only otherwise there will be a big agitation. I know what was going on in Bangalore How many crores of rupees were lost in the recent public sector workers strike. Now, I must tell my friend Mr. Fernandez that the workers leaders must tell the workers to work for 8 hours. The managements are telling that they are running under loss since the workers are not working sincerely for eight hours. I request the labour leaders to tell their workers that they must do their duty. Then only we will prosper and our nation will prosper. With these few words, I thank the Chair.

† ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ). —ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮಂತ್ರಿಯವರು ತಂದಿರತಕ್ಕಂಥ ಈ ಒಂದು ಬೇಡಿಕೆ ಏನಿದೆ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಆಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮೊದಲು ಈ ನಮ್ಮ ಲೇಬರ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಈ ಬಗ್ಗೆ ಸರ್ಕಾರದವರು ಅನೇಕ ವಿಧದಲ್ಲಿ ಹಾಕಿಕೊಂಡಿರತಕ್ಕಂಥ ಅಭಿವೃದ್ಧಿ ಕಾರ್ಯಕ್ರಮಗಳೆಲ್ಲಾ ಕಾನೂನಿನಲ್ಲಿ ಇದೆಯೇ ಹೊರತು ಅವು ವ್ಯವಹಾರದಲ್ಲಿ ಇಲ್ಲ ಎಂದು ನಾನು ಇವತ್ತು ಹೇಳಬೇಕಾಗುತ್ತದೆ. ನಮ್ಮ ಮೈಸೂರು ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಕೆಲವು ಸರ್ಕಾರಿ ಸಿಲ್ಕ್ ಫ್ಯಾಕ್ಟರಿಗಳು ಇವೆ. ಅಲ್ಲೆಲ್ಲಾ ಸುಮಾರು ೩-೪ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಹೆಣ್ಣು ಮಕ್ಕಳೂ ಸಹ ಹೆಚ್ಚಾಗಿ ಇದ್ದಾರೆ. ಈ ರೇಷ್ಮೆ ಫ್ಯಾಕ್ಟರಿಗಳಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳೂ ಇದ್ದಾರೆ. ಅವರಿಗೆ ೮ ರೂ. ೧೦ ಪೈಸೆ ವೇಜಸ್ಸನ್ನು ಫಿಕ್ಸ್ ಮಾಡಿದ್ದಾರೆ. ಮತ್ತು ಅದನ್ನು ಅವರಿಗೆ ಕೊಡುತ್ತಿದ್ದಾರೆ. ಈಗಿನ ಕಷ್ಟಕಾಲದಲ್ಲಿ ಅವರಿಗೆ ಈ ಒಂದು ವೇಜಸ್ಸನ್ನು ಕೊಟ್ಟು ಅವರನ್ನು ಅಪಾರ ಕನಿಷ್ಟ ರೀತಿಯಲ್ಲಿ ಕಂಡು ಅವರಿಗೆ ಸಾಕಷ್ಟು ರೀತಿಯಲ್ಲಿ ಅನೇಕ ಸೌಲಭ್ಯಗಳನ್ನು ಕೊಡದೇ ಇರುವುದರಿಂದ ಅಲ್ಲಿರತಕ್ಕಂಥ ಲೇಬರ್‌ಗಳೆಲ್ಲಾ ಕುಸಿದು ಬಿದ್ದಿದ್ದಾರೆ. ನಮ್ಮ ಕೊಳ್ಳೇಗಾಲ, ಮಾಂಬಳ್ಳಿ, ಚಾಮರಾಜನಗರ ಇನ್ನೂ ಮುಂತಾದ ಕಡೆಗಳಲ್ಲಿ ಔಷಧೋಪಚಾರ ಮತ್ತಿತರ ಸಕಲ ಸೌಕರ್ಯಗಳನ್ನೂ ಕೊಡುತ್ತಾ ಇಲ್ಲ. ಅವರು ಅವರ ಕಸುಬನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅನೇಕ ಸಣ್ಣ ಸಣ್ಣ ಕಾಯಿಲೆಗಳು ಬರುತ್ತವೆ. ಅವರನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ, ಅದಕ್ಕೆ ಅವಕಾಶವೇ ಆಗಿಲ್ಲ. ಲೇಬರ್ ಡಿಪಾರ್ಟ್‌ಮೆಂಟ್‌ನವರು ಈ ವಿಚಾರದಲ್ಲಿ ಸರಿಯಾಗಿ ವ್ಯವಸ್ಥೆ ಮಾಡಿಲ್ಲ. ಇಲಾಖೆಯವರು ಆ ಕೆಲಸಗಾರರ ಹಿತಚಿಂತನೆಯ ಬಗ್ಗೆ ಯಾವುದೇ ಯೋಚನೆ ಮಾಡುತ್ತಾ ಇಲ್ಲ. ಡಿಪಾರ್ಟ್‌ಮೆಂಟ್‌ನವರು ಬಂದು ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೋಡುತ್ತಾರೆಯೇ ಹೊರತು ಅವರ ಯೋಗಕ್ಷೇಮವನ್ನು ನೋಡುವುದಿಲ್ಲ. ಕೆಲಸಗಾರರು ಅವರಿಗೆ ಎಷ್ಟೇ ಕಷ್ಟವಿದ್ದರೂ ಬಂದು ಕೆಲಸ ಮಾಡಿ ಮನೆಗೆ ಹೋಗುತ್ತಾರೆ. ಈ ಇಲಾಖೆಯಲ್ಲಿ ಅನೇಕ ಜನ ಇನ್ಸ್‌ಪೆಕ್ಟರ್ಸ್ ಇದ್ದಾರೆ, ಅವರ್ಯಾರೂ ಈ ಜನರ ಹಿತರಕ್ಷಣೆಯನ್ನು ಮಾಡುತ್ತಾ ಇಲ್ಲ. ನಮ್ಮ ಚಾಮರಾಜನಗರ ತಾಲ್ಲೂಕಿನ ರೇಂಜ್‌ನಲ್ಲಿ ಒಬ್ಬರು ಇನ್ಸ್‌ಪೆಕ್ಟರ್ ಇದ್ದಾರೆ. ಅವರು ಕೊಳ್ಳೇಗಾಲ ಮತ್ತಿತರ ಅನೇಕ ತಾಲ್ಲೂಕುಗಳನ್ನು ಕಂಟ್ರೋಲ್ ಮಾಡಬೇಕು ಎಂದು ಮೇಲಿನವರು ಅವರಿಗೆ ಹೇಳಿದ್ದಾರೆ. ಅಷ್ಟು ತಾಲ್ಲೂಕುಗಳನ್ನು ಒಬ್ಬರೇ ನೋಡಿಕೊಳ್ಳುವುದಕ್ಕೆ ಕಷ್ಟವಿದೆ. ಈ ಒಂದು ವ್ಯವಸ್ಥೆ ಸರಿಯಿಲ್ಲ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಅಲ್ಲೆಲ್ಲಾ ಹೆಚ್ಚು ಹೆಚ್ಚು ಇನ್ಸ್‌ಪೆಕ್ಟರ್‌ಗಳನ್ನು ಹಾಕಿ ಅವರೆಲ್ಲಾ ದಕ್ಷ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕಂಥವರು ಈ ವಿಚಾರದಲ್ಲಿ ಬಹಳ ಇಂಟರೆಸ್ಟ್ ಇಟ್ಟುಕೊಂಡಿದ್ದಾರೆ. ಆದರೆ ಕೆಲಸದಲ್ಲಿ ಮಾತ್ರ ಅವರು ಬಹಳ ಹಿಂದೆ ಬಿದ್ದಿದ್ದಾರೆ ಅವರಿಗೆ ಈ ಬಗ್ಗೆ ಮಾನ್ಯ ಮಂತ್ರಿಯವರು ಅವರು ಚೆನ್ನಾಗಿ ಕೆಲಸ ಮಾಡುವಂತೆ ಸೂಚನೆಯನ್ನು ಕೊಡಬೇಕು. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಸಿರಿಕಲ್ಚರ್‌ನಲ್ಲಿ ಡೈಲಿ ವೇಜಸ್‌ನಲ್ಲಿ ಕೆಲಸ ಮಾಡತಕ್ಕಂಥವರು ೪ ಸಾವಿರ ಜನ ಇದ್ದಾರೆ. ಅವರಿಗೆ ದಿನವೊಂದಕ್ಕೆ ೪ ರೂಪಾಯಿ ೯೦ ಪೈಸೆಯಷ್ಟು ದಿನಗೂಲಿಯನ್ನು

ಕೊಡುತ್ತಿದ್ದಾರೆ. ಇದು ಸರಿಯೇ ? ಹತ್ತಾರು ವರ್ಷಗಳಿಂದ ಅಲ್ಲಿ ಭೂಮಿಯನ್ನು ಅಗೆದು ವ್ಯವಸಾಯ ಮಾಡಿ ಹಿಪ್ಪುನೇರಳೆ ಬೆಳೆಯನ್ನು ಬೆಳೆಯತಕ್ಕಂಥವರಿಗೆ ದಿನಗೂಲಿ ೪–೬೦ ಪೈಸೆ ಏನು ಕೊಡುತ್ತಿದ್ದಾರೆ ಅದು ಯಾವುದಕ್ಕೂ ಬರುವುದಿಲ್ಲ. ಇಲಾಖೆಯವರು ಈ ಬಗ್ಗೆ ಯೋಚನೆ ಮಾಡಿ ಅವರಿಗೆಲ್ಲಾ ಮಿನಿಮಂ ವೇಜಸ್ ಕೊಡುವಂತೆ ವ್ಯವಸ್ಥೆ ಮಾಡಬೇಕು. ಇದೇ ರೀತಿಯಲ್ಲಿ ಈ ರೇಷ್ಮೆ ಇಲಾಖೆಯಲ್ಲಿ ಕೆಲವು ಜನ ಸೇರಿಕೊಂಡು ಒಂದು ಯೂನಿಯನ್ ಮಾಡಿಕೊಂಡಿದ್ದಾರೆ. ಅಲ್ಲಿ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಲೇಬರರ್ಸ್ ಹತ್ತಿರ ಫಂಡ್ಸ್ ಕಲೆಕ್ಟ್ ಮಾಡಿಕೊಂಡು, ಅವರಲ್ಲೇ ೨ ಗುಂಪು ಮಾಡಿಕೊಂಡು ಬೇಕಾಬಿಟ್ಟಿ ಕೆಲಸ ಮಾಡುತ್ತಿದ್ದಾರೆ. ಇದನ್ನು ಇಲಾಖೆಯವರು ಗಮನಿಸುತ್ತಾ ಇಲ್ಲ. ನನ್ನ ಮತದಾರರ ಕ್ಷೇತ್ರದಲ್ಲಿ ಲೇಬರ್ ಕ್ಲಾಸ್‌ನಲ್ಲಿ ಬಡವರು, ಹಿಂದುಳಿದವರು ಮತ್ತು ಹರಿಜನ ಗಿರಿಜನರೇ ಹೆಚ್ಚಾಗಿದ್ದಾರೆ. ಹೀಗಿರುವಾಗ ಅಲ್ಲಿರತಕ್ಕಂಥ ಯೂನಿಯನ್ ಸರಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡದೇ ಹೋದರೆ ಆ ಲೇಬರರ್ಸ್‌ಗೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲದೇ ನಮಗೆಲ್ಲಾ ಅಪಮಾನವಾಗುತ್ತದೆ. ಅವರಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳೂ ಇದ್ದಾರೆ ಆದ್ದರಿಂದ ಮಾನ್ಯ ಮಂತ್ರಿಯವರು ಇಲಾಖೆಯ ಅಧಿಕಾರ ವರ್ಗದವರಿಗೆ ಸೂಕ್ತ ರೀತಿಯಲ್ಲಿ ಡೈರೆಕ್ಷನ್ ಕೊಟ್ಟು ಆ ಬಗ್ಗೆ ಏನೇನು ವ್ಯವಸ್ಥೆಯಾಗಬೇಕು, ಬೇರೆ ಬೇರೆ ರೀತಿಯಲ್ಲಿ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸುತ್ತೇನೆ. ಮತ್ತು ಸಿಲ್ಕ್ ಫಿಲೇಚರ್‌ನಲ್ಲಿ 'ನಿಮಗೆ ವಯಸ್ಸು ಆಗಿಬಿಟ್ಟಿದೆ, ನಿಮ್ಮ ಕೈಯಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ' ಎಂದು ಹೇಳಿ ಸಾವಿರಾರು ಜನರನ್ನು ಕೆಲಸದಿಂದ ತೆಗೆದುಬಿಟ್ಟಿದ್ದಾರೆ. ಈ ಸಿಲ್ಕ್ ಫಿಲೇಚರ್ ವರ್ಕ್ ಸರಿಯಾಗಿ ನಡೆಯುತ್ತಿಲ್ಲ. ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡಲು ಅಫಿಷಿಯಲ್ಸ್ ಮತ್ತು ನಾನ್‌ಅಫಿಷಿಯಲ್ಸ್ ಸೇರಿಸಿ ಒಂದು ಕಮಿಟಿ ಮಾಡಬೇಕು. ಆ ಕಮಿಟಿಯವರು ಈ ವಿಚಾರದಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ವರದಿಯನ್ನು ಕೊಟ್ಟ ಮೇಲೆ ಅವರನ್ನೆಲ್ಲಾ ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ಯೋಚನೆ ಮಾಡಬೇಕು. ಪ್ರತಿಯೊಂದು ಕುಟುಂಬದಲ್ಲಿ ಎಲ್ಲರನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಹೋದರೂ ಕೂಡ ಅತೀ ಕಷ್ಟದಲ್ಲಿರತಕ್ಕಂಥ ಕುಟುಂಬದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಕೆಲಸವನ್ನು ಒದಗಿಸಿಕೊಟ್ಟು ಆ ಸಾವಿರಾರು ಜನರು ಏನಿದ್ದಾರೆ ಅವರೆಲ್ಲಾ ತೃಪ್ತಿ ಪಡುವ ರೀತಿಯಲ್ಲಿ ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ ಇನ್ನು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ ಅಲ್ಲಿ ಅನೇಕ ಲೋಪದೋಷಗಳು ಆಗುತ್ತಿವೆ. ಈ ಲೇಬರರ್ಸ್ ಮಕ್ಕಳು ಅಲ್ಲಿಗೆ ಕಾರ್ಡ್ ಮಾಡಿಸುವುದಕ್ಕೆ ಹೋದಾಗ ಎಕ್ಸ್‌ಚೇಂಜ್‌ನವರು ಅವರಿಗೆ ಸರಿಯಾದ ರೀತಿಯಲ್ಲಿ ನಂಬರ್ ಕೊಡುವುದಿಲ್ಲ. ಆ ಮಕ್ಕಳಿಗೆ ಸರಿಯಾದ ನಂಬರ್ ದೊರೆಯದೇ ಇರುವುದರಿಂದ ಅವರು ಅನೇಕ ಹುದ್ದೆಗಳಿಗೆ ಅಪ್ಲೈ ಮಾಡಿಕೊಂಡರೂ ಸರಿಯಾದ ರೀತಿಯಲ್ಲಿ ಅವರಿಗೆ ಕೆಲಸ ದೊರೆಯುತ್ತಿಲ್ಲ. ಈ ಬಗ್ಗೆ ಅಲ್ಲಿಯ ಕಾರ್ಮಿಕರೆಲ್ಲಾ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಯವರು ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟು ಅವರು ಸರಿಯಾಗಿ ಕೆಲಸ ಮಾಡುವಂತೆ ಮಾಡಿ ಆ ಮಕ್ಕಳಿಗೆ ಕೆಲಸ ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನೊಂದು ವಿಚಾರವೇನೆಂದರೆ ನಮ್ಮಲ್ಲಿ ಒಂದು ಷುಗರ್ ಫ್ಯಾಕ್ಟರಿ ಇದೆ. ಅಲ್ಲಿ ಒಂದು ನೋಟಿಫಿಕೇಷನ್ ಇಷ್ಯೂ ಮಾಡಿದ್ದಾರೆ. ಮತ್ತು ಅಡ್ವೆರ್‌ಟೈಸ್‌ಮೆಂಟ್ ಕೊಟ್ಟಿದ್ದಾರೆ. ಯಾರ್ಯಾರು ೨–೩ ವರ್ಷದಿಂದ ಕೆಲಸವಿಲ್ಲದೇ ಮನೆಯಲ್ಲಿ ಕುಳಿತ್ತಿದ್ದಾರೆ ಅಂತಹವರಿಗೆ ಕೆಲಸ ಕೊಡುತ್ತೇವೆ ಎಂದು ಅದರಲ್ಲಿ ಹೇಳಿದ್ದಾರೆ. ಅವರಲ್ಲೂ ಕೂಡ ಆ ಕಸಬಿನಲ್ಲಿ ಟ್ರೈನಿಂಗ್ ಆದವರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಬೇರೆ ಬೇರೆ ಏರಿಯಾದವರಿಗೆ ೨–೩ ವರ್ಷ ಟ್ರೈನಿಂಗ್ ಆದವರಿಗೆ ಕೆಲಸ ಕೊಟ್ಟರೆ ನಮ್ಮ ಏರಿಯಾದವರಿಗೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಏರಿಯಾದಲ್ಲಿ ೬೦ ಜನರು ಇದ್ದಾರೆ. ಅವರೆಲ್ಲಾ ಬಡ ಕುಟುಂಬ ವರ್ಗಕ್ಕೆ ಸೇರಿದವರು. ಅವರನ್ನು ಅಲ್ಲಿ ಕೆಲಸಕ್ಕೆ ತೆಗೆದುಕೊಂಡು ಅವರಿಗೆಲ್ಲಾ ೧ ತಿಂಗಳು ಟ್ರೈನಿಂಗ್ ಕೊಡಲಿ ಎಂದು ನಾನು ಹೇಳುತ್ತೇನೆ ಈಗಾಗಲೇ ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಲಾಸ್ ಮಾಡಿದ್ದಾರೆ. ಅವರಿಗೆ ಒಂದು ತಿಂಗಳು ಟ್ರೈನಿಂಗ್ ಕೊಟ್ಟರೆ ಏನೂ ಲಾಸ್ ಆಗುವುದಿಲ್ಲ. ಆದ್ದರಿಂದ ಆ ಜನರನ್ನು ಕೆಲಸಕ್ಕೆ ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅಲ್ಲಿ ಕೆಲವರನ್ನು ಕ್ಯಾಷುಯಲ್ ಲೇಬರರ್ಸ್ ಎಂದು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದಾರೆ. ಅವರಲ್ಲಿ ೫ ವರ್ಷದಿಂದ ಕೆಲಸ ಮಾಡುವವರೂ ಇದ್ದಾರೆ, ೧೦ ವರ್ಷದಿಂದ ಕೆಲಸ ಮಾಡು

ವವರೂ ಇದ್ದಾರೆ. ಅವರನ್ನು ಇಲ್ಲಿಯವರೆಗೆ ಪರ್ಮನೆಂಟ್ ಮಾಡಲಿಲ್ಲ. ಅವರು ಎಷ್ಟು ದಿವಸ ಕೆಲಸ ಮಾಡುತ್ತಾರೋ ಅಷ್ಟು ದಿವಸಕ್ಕೆ ಲೆಕ್ಕ ಹಾಕಿ ದುಡ್ಡು ಕೊಟ್ಟು ಕಳಿಸಿಬಿಡುತ್ತಾರೆ. ಅವರೆಲ್ಲಾ ಬಡ ಜನರು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಪರ್ಮನೆಂಟ್ ಜಾಬ್ ಸಿಕ್ಕದೆ ಹೋದರೆ ಅವರೆಲ್ಲರ ಜೀವನಕ್ಕೆ ಒಂದು ಸರಿಯಾದ ವ್ಯವಸ್ಥೆಯಾಗುವುದಿಲ್ಲ, ಅವರು ಇನ್ನು ಮುಂದೆಯೂ ಕೂಡ ಕಣ್ಣೀರಿನಲ್ಲಿ ಕೈ ತೊಳೆಯುವ ಹಾಗೆ ಆಗುತ್ತದೆ. ಅವರೆಲ್ಲಾ ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಆ ಬಡಜನರು ಜೀವನದಲ್ಲಿ ನಮಗೆ ಖಾಯಂ ಕೆಲಸ ಸಿಕ್ಕುತ್ತದೆ, ಸಾಕಷ್ಟು ಕೂಲಿ ಸಿಕ್ಕುತ್ತದೆ ಎಂದು ಆಶೆ ಇಟ್ಟು ಕೊಂಡಿದ್ದಾರೆ. ಅವರು ಎಲ್ಲಾ ಕೆಲಸವನ್ನೂ ತೃಪ್ತಿದಾಯಕವಾಗಿ ಮಾಡುತ್ತಿದ್ದಾರೆ. ಆದ್ದರಿಂದ ಅವರೆಲ್ಲಾ ಏನು ೫–೧೦ ವರ್ಷಗಳಿಂದ ಕ್ಯಾಷ್ಯುಯಲ್ ಲೇಬರರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ ಅವರೆಲ್ಲರನ್ನೂ ಅಲ್ಲಿ ಪರ್ಮನೆಂಟ್ ಮಾಡುವುದಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ಕೈಕೊಳ್ಳಬೇಕು ಎಂದು ನಾನು ತಮ್ಮ ಮುಖಾಂತರ ಅವರಲ್ಲಿ ಪ್ರಾರ್ಥಿಸುತ್ತೇನೆ.

ಮಾನ್ಯ ಅಧ್ಯಕ್ಷರೇ ದಿನಗೂಲಿಯಾಗಿ ೧೧–೧೫ ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರನ್ನು ಪರ್ಮನೆಂಟ್ ಮಾಡಿಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಪಿ.ಡಬ್ಲ್ಯೂ. ಡಿ. ಇಲಾಖೆಯಲ್ಲಿ ಕೆಲವು ಹರಿಜನ ಮತ್ತು ಗಿರಿಜನರು ಗ್ಯಾಂಗ್ ಮೆನ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಈ ಗ್ಯಾಂಗ್‌ಮೆನ್‌ಗಳನ್ನು ಖಾಯಂ ಮಾಡಿಕೊಳ್ಳುತ್ತೇವೆ ಎಂದು ಶ್ರೀಮಾನ್ ಬಂಗಾರಪ್ಪನವರು ಪಿ.ಡಬ್ಲ್ಯೂ.ಡಿ ಮಂತ್ರಿಗಳಾಗಿದ್ದಾಗ ವಾಗ್ದಾನವನ್ನು ಕೊಟ್ಟಿದ್ದರು. ಅದೂ ಸಹಾ ಇದುವರಿವಿಗೂ ಕಾರ್ಯಗತವಾಗಿಲ್ಲ. ಪಾಪ ರೋಡಿನಲ್ಲಿ ಕೆಲಸ ಮಾಡ ತಕ್ಕಂತಹ ಗ್ಯಾಂಗ್‌ಮೆನ್‌ಗಳಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಇನ್ನು ಅನೇಕ ಇಲಾಖೆಗಳಲ್ಲಿ ದಿನಗೂಲಿಯಾಗಿ ಕೆಲಸ ಮಾಡಿಕೊಂಡು ಇರುವವರಿದ್ದಾರೆ. ಅವರೆಲ್ಲರನ್ನೂ ಸರ್ಕಾರದವರು ಪರ್ಮನೆಂಟ್ ಮಾಡಿಕೊಂಡು ಅವರಿಗೆ ಸರಿಯಾದ ಒಂದು ಮಿನಿಮಮ್ ವೇಜಸ್ ಕೊಟ್ಟರೆ ಅವರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಅವರಿಗೆ ಯಾವಾಗಸರಿಯಾದ ಸಂಬಳವನ್ನು ಕೊಡುವುದಿಲ್ಲವೋ ಆಗ ಅವರು ಕಡಿಮೆ ಕೆಲಸವನ್ನು ಮಾಡುತ್ತಾರೆ. ಅವರಿಗೆ ಹೆಚ್ಚು ಸಂಬಳವನ್ನು ಕೊಟ್ಟರೆ ಅವರು ಹೆಚ್ಚು ಕೆಲಸವನ್ನು ಮಾಡುತ್ತಾರೆ. ಹೆಚ್ಚು ಕೆಲಸ ಮಾಡಿ ದೇಶದ ಅಭಿವೃದ್ಧಿಯನ್ನು ಮಾಡುತ್ತಾರೆ. ನೌಕರರು ಇಲ್ಲದಿದ್ದರೆ ಅಭಿವೃದ್ಧಿ ಕೆಲಸಗಳು ನಡೆಯುವುದಿಲ್ಲ. ಆದ್ದರಿಂದ ತಾವು ಅಭಿವೃದ್ಧಿ ಕೆಲಸಗಳು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಆಗಬೇಕಾದರೆ ಕೆಲಸ ಮಾಡುವಂತಹ ನೌಕರರಿಗೆ ಬೆಂಬಲ ಕೊಡಬೇಕಾಗುತ್ತದೆ. ಅವರಿಗೆ ಬೆಂಬಲ ಕೊಡುವುದರ ಮುಖಾಂತರ ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಮತ್ತು ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟ್ ಮತ್ತು ಪಿ.ಡಬ್ಲ್ಯೂ.ಡಿ ಡಿಪಾರ್ಟ್‌ಮೆಂಟ್ ಗಳಲ್ಲಿ ಸುಮಾರು ೧೦–೨೦ ವರ್ಷಗಳಿಂದ ದಿನಗೂಲಿಯಾಗಿ ಕೆಲಸ ಮಾಡಿಕೊಂಡಿರುವಂತಹ ಜನರು ಇದ್ದಾರೆ. ಅವರನ್ನು ಆಯಾಯಾ ಇಲಾಖೆಗಳಿಗೆ ಪರ್ಮನೆಂಟಾಗಿ ತೆಗೆದುಕೊಳ್ಳತಕ್ಕಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮತ್ತೆ ಅವರಿಗೆ ಏನೇನು ಸೌಕರ್ಯಗಳು ಕೊಡಬೇಕೋ ಅವೆಲ್ಲವನ್ನೂ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅನಂತರ ಈ ದಿನಗೂಲಿಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಆಸ್ಪತ್ರೆಯ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು. ಮತ್ತು ರೇಷ್ಮೆ ಫಿಲೇಚರ್‌ಗಳಲ್ಲಿ ಕೆಲಸ ಮಾಡುವಂತಹ ನೌಕರರಿಗೆ ಟಿ.ಬಿ. ಕಾಯಿಲೆ ಬರುತ್ತದೆ ಎಂದು ನಾನು ಕೇಳಿದ್ದೇನೆ. ಅದಕ್ಕೋಸ್ಕರವಾಗಿ ಈ ಟಿ ಬಿ. ಕಾಯಿಲೆಯನ್ನು ನಿವಾರಿಸುವಂತಹ ಔಷಧಿಯನ್ನು ನೌಕರರಿಗೆ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಂತಹ ರೇಷ್ಮೆ ಫಿಲೇಚರ್‌ಗಳು ಮೈಸೂರಿನಲ್ಲಿವೆ ಮತ್ತು ನರಸೀಪುರದಲ್ಲಿ ಇವೆ. ಈ ಫಿಲೇಚರ್‌ಗಳಲ್ಲಿ ಸಾಕಷ್ಟು ಹರಿಜನ ಮತ್ತು ಗಿರಿಜನರೇ ಕೆಲಸ ಮಾಡುತ್ತಿರುವುದು ಬೇರೆ ಜಾತಿಯವರೂ ಯಾರೂ ಹೋಗುವುದಿಲ್ಲ. ಆದ್ದರಿಂದ ನಾನು ನನ್ನ ಎಲ್ಲಾ ಸಲಹೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇನೆ. ನನ್ನ ಎಲ್ಲಾ ಸಲಹೆಗಳನ್ನು ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

SRI QUMARUL ISLAM (Gulbarga).—Mr. Deputy Speaker Sir, I want to speak on the demands of Wakfs first and the report is consisting of 1 to 1½ pages. I want to tell you that the Board of Wakfs is functioning under the provisions of Act 1954, and it is a very important Board which is dealing with the religious institutions of the Muslims and the properties. A properties worth crores of rupees are under the control of the Government. Illegaly, unauthorisedly they are under the control of the Government and some of the properties, unauthorisedly are under the control of some other people. The first step that the Board should take is that they must see that these properties are freed from illegal and unauthorised control. To-day these steps have been taken. But, I think, the steps which are taken are not sufficient. If you go through the report, only one point which I wanted to tell in this House, is that even though there are 19,000 Wakf institutions there is 6% collection, out of which the expenditure of this Board is met. Even if there is a grant-in-aid from the last four to five years by the Government of Karnataka the Wakf Board collection is very poor. The reason shown is that 6% collection were not given by a number of institutions. Previously there was an impression in the institutions that the Wakf Board is not giving any favour from the last 4 years, even if you pay 6%. The Wakf Board has taken steps and the Wakf Board is giving lakhs together towards repairs, renovations and improvements of the mosques, for the grave yards and other things. When this step has been taken why there is no improvement in the collection of the Wakf? It is because, this Wakf Board, unfortunately is controlled by powerful Muthwalli. I want to tell the Hon. Minister frankly. First of all, we must agree that the Wakf Board Act, 1954 is really having a lot of lacunae. With this Act, it is not possible for the Government to get whatever they want, and it has to be amended. For that there is sufficient ground. When Maharashtra and West Bengal are having their own bye-laws, their own separate Act, under the light of this only why not the Hon. Minister come forward and this House pass a Separate Act in Karnataka so that under that Act we must see that all the properties one freed? This Wakf Board should be freed from the Muthwallies. There are wakf institutions in Durgas. You will see that they are the Wakfs which are having properties. Muthwallies are very much interested, because they are having properties. Durgas which are having properties, there the Muthwallies are not at all helping for growing up of the institutions. These buildings are giving lakhs of rupees, but they are swallowing. In this Act, they say the Muthawally must be a Member of the Board. In this House, since last two years I have been making charges against a particular Muthwally of my

constituency. This Muthwally is a very big Muthwally of a very big Durga of India. That Muthwally has smuggled jewelleries worth of Rs 5 lakhs. They have already been smuggled to the foreign country. The allegation was made in this House when Sri Aziz Sait was the Minister in 1978. Last year also I have made an allegation. I was informed and in this House it was said that a commission has already been appointed to probe into the matter. I want to know in this House what action and enquiry has been taken. Fortunately or unfortunately, the Muthwally is continuously the non-official member of the State Wakf Board. He is one of the 11 members and he is dealing in a very big capacity and in a very big show. I want to tell that a Muslim should be known by his heart and by his act and the way of life. If you put big jubbas, it does not mean that he is a big man in Islam. I just want to quote one saying in Urdu.

(The Hon. Member spoke in urdu)

5 P. M.

Because she is the daughter of a Prophet, it was said she will not go to heaven. One will be examined by his character and attitude Since they are Muthuvalis you give them respect because they belong to some saintly class. You have to check their character. If Muthuvalis are there in the Wakf Board why not remove them ? What is the difficulty ? I know the cases that are going on between the Government and the Wakf Board. They say under the Wakf Act, the Muthuvalis are powerful and the Government cannot shake them. I know that story fully but what is going on there ? If such things are there, I want to know what action the Government has taken. How many years it will take ? It is going on since one year. The Wakf Board is not functioning properly and there are so many litigations. I would like to know how the Wakf Minister is going to solve the problem.

The second point which I want to tell the Hon'ble Minister is about the Darga. There is a museum and many things have been smuggled out from there. I have got the information that so many other valuables are going to be smuggled shortly by the same Muthuvalis. A dimond was sold for Rs. 5 lakhs in Germany and again in America it was sold for Rs 21 lakhs. The remaining valuable things will again go to the foreign countries if you don't control them now. Now the museum Darga is under the control of Muthuvalis. I would like to know from the Hon. Minister how he is going to take action in future. There should be a thorough enquiry and a report should be sumbitted before this House and a copy of it should be

given to all the members. There are hundreds of Muthuvalis and a big majority of them are eating away the property of Wakf Board. They are taking grants from Government in the name of high schools on the basis of rents they are collecting, but they are not giving it to the Wakf Board. How the Wakf Board will get 6% out of that? Further the grants they abtain from the Education Department and the rent that is collected are not credited into the account of Wakf Board. That is why there is very poor collection in this.

Sir, the Hon'ble Minister is the Chairman of the Haj Committee. There are about 49 non-official members in the Committee. I want to know, what is the reason for the less number of people going to Haj from Karnataka? If you take the ration and the number of piligrims who went for this Haj, it is decreasing. Then there was no authorised representative on behalf of Karnataka when the Haj Committee meeting was going on in Bombay at the time of pora, by which they send people to Haj. In that pora another man was sitting in the chair and he was asked to get out of that meeting, because he was not a legal and authorised representative on behalf of the Government of Karnataka. If it is a fact, what is the reason the Government did not send its representative. Because of that, I think, Muslims of Karnataka are not able to go to Haj in more number this year also. This is a most unfortunate thing and the Hon. Minister being the Chairman of Haj Committee in Karnataka, I want him to answer this question in this House. I hope he will reply to this.

The other point is, every years they are sending two persons to Hujjaj on voluntary basis. I think. here the Hyderabad-Karnataka area is neglected. This year also there is only one application. The applicant is a very good man. At least this time an opportunity may be given to an applicant from Hyderabad-Karnataka to go to Haj.

Mr. Deputy Speaker.—Sir, you also belong to Basavakalyan and you know Hyderabad-Karnataka was a part and parcel of Nizam State. We are all born after 1947 in Free India. But we have not changed the slavery. When Nizam State was there, it is a fact that there mosques and other things. After the police action you know hundreds of mosques were demolished and converted into temples and Kattas, which is still alive in the memory of people. There are number of examples which I can give in this House. One member said about Shorapur. This is not a new case. At least after 33 years, the Government of Karnataka have realised, in a secular and democratic country what has happened in the past and they have

issued an order. Afterwards that order was stayed. When the first order was issued, there was a mosque which was completely destroyed in 1948 during the police action. After some years the statue of our National Leader Sirdar Vallabhai Patel was installed there. Everybody, every citizen has got respect to Sirdar Vallabhai Patel. He is known as 'Iron Man' of India. But one thing I want to tell is, Mosques and temples are the places of worship. In temples we can have the statues of Lord Krishna, Lord Venkateshwara, Lord Shiva and all lords. Even though whatever maximum respect we give to our leaders, may be Sirdar Vallabhai Patel or Mahatma Gandhi, who is the father of our nation, we cannot have their statues in temples or mandirs. No Hindu will tolerate to place their statues in place of Lord, Similarly, no Muslim will tolerate to place the statues of some Muthuvalis or Sajjeda in a Mosque, because these are holy places. Sirdar Vallabhai Patel was a pucca Hindu. I want that his soul should be happy. Now his followers in his name had the statue of Sirdar Vallabhai Patel in the place of a mosque in Shorapur where there are 19 shops and a big mosque. It is still alive in the minds of the people, who met the Chief Minister and the concerned Minister The local MLA of Shorapur knows everything and the background of it. That MLA has been elected with thumping majority not only by Muslims, but also by Hindus and other backward caste people. He himself has repeated that there was a mosque. and that was converted When the Government changes such things will happen where a Mosque may be converted to temple and a temple may be converted into a mosque, I don't want to bring that situation now. I am the representative of the people in this House, In a secular and democratic country, I have got a fundamental right to say that Mosque should be protected and temple should be protected, An order was issued by the Government and in some press it has appeared that Sri C. M. Ibrahim has issued that order, Sri Ibrahim, who is the Minister for Wakf, is not at all concerned with that. That order was a Cabinet decision. The previous order was also a Cabinet order. Again that was amended and another Cabinet order was issued stating that the statue has to be installed in some other place and a sum of Rs. 5 lakhs was given to construct a mosque, to bring to the original position, which was there 33 years back. I want to suggest to the Hon'ble Minister, the sister of Sirdar Vallabhai Patel is till alive in Gujarat, why not the Government of Karnataka initiate to meet herand bring her here and all the people belonging to different communities gather and receive her and create a natural scene there. She will be given an honour and she will be made the chief guest and

with respect let us have the statue in Shorapur wherever the people wanted to have it but not in the mosque. By keeping a statue in the mosque the followers of Sardar Vallabhai Patel are not doing any good to him. He was a pucca Hindu and a pucca citizen of India and his soul will not be happy for his followers action. The followers must understand this. If I mind. I can talk so many things on this but there should be a concrete reason when we criticise or when we want to say something. I have not taken up this issue. But when one of the opposition members took up this issue I knew that it would hurt the feelings of so many people. That is why I did not want to talk at that time. But this issue was raised by one of the hon. members of the ruling party when this House has taken up the Wakf demand, and the Government which is a party had issued an order and it is not that they are not aware of this. Due to this order our feelings were hurt. We wanted that justice should be done. Sir, in your constituency there is mosque, as well as Darga and also there is a temple but how nicely we are tackling this issue is well known to you. In Sedam and Kamalapur also there are mosques. Hon'ble Ministers have also visited those places. There, neither the prayer nor the pooja was going on prior to 1947. Some residents of Basavakalyan are saying that as there is a Basavanna so there is a temple. I can give you hundreds of examples of Hyderabad Karnataka area. In Sedum, there is a Ganapathi idol and a school is also going on there. Government have already issued orders to remove this idol to some other place as the property belongs to Wakf Board. Wakf Board is under the control of the Government. So, it is the responsibility of the Government to save the property belonging to the religious institutions. A bad situation was created and now it is O. K. due to the intervention of the Government. In every place there will be anti-social elements. I am not saying that in my community there are no anti-social elements. In every community anti-social elements are there and they try to create this sort of situations and they bring in communal feelings among the people. I wanted to inform the House that if it was not a mosque I say that I have no claim over it. Let the Government come forward and say that there was no mosque. When it was known that there is a mosque which was converted into Mandir the Government took bold steps in this direction. So, Government took a right decision to nip the bud in the early stages. So, I humbly request the Hon'ble Minister and the Government to exercise its power to stop such things prevailing in Hyderabad Karnataka area. It should not be continued. We want peace and communal harmony to prevail everywhere. There are religious institutions and muzarai,

I can give the example of Thirupathi temple. How nicely they are utilising the amount donated by the devotees of the Lord for economic upliftment of the people. But here you are nor able to control the Muthuvalis. I am of the view that money should not go to the Muthuvalis but that money should be utilised properly for the economic upliftment of our community people. Now the Government is giving lakhs of rupees for the development of Wakf property. Here I suggest that this money should be utilised properly and all the wakf property should be improved. Further I say that Wakf property should be free from illegal and unauthorised occupation. I also suggest that the Wakf Board should take steps to construct complexes on the Wakf Property. Sir, in Gulbarga there is Ethinakhana and it is a very good place. If you construct a complex there all the Wakf institutions can survive out of the income you get from this Complex. You can run an orphanage also out of this income.

Thank you.

†ಶ್ರೀ ಬಿ.ಎನ್. ಕೆಂಗೇಗೌಡ (ಚಾಮರಾಜ).—ಸನ್ಮಾನ್ಯ ಅಧ್ಯಕ್ಷರೆ, ಈಗ ಕಾರ್ಮಿಕ ಮಂತ್ರಿಗಳು ಮತ್ತು ಯೋಜನಾ ಮಂತ್ರಿಗಳು ತಂದಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಯಾವುದಾದರೂ ಒಂದು ಯೋಜನೆ ನಮ್ಮ ರಾಜ್ಯದಲ್ಲಾಗಲೀ ಅಥವಾ ನಮ್ಮ ರಾಷ್ಟ್ರದಲ್ಲಾಗಲೀ ಸಂಪೂರ್ಣ ಫಲವನ್ನು ಕೊಡಬೇಕಾದರೆ ಅದಕ್ಕೆ ಅತ್ಯಾವಶ್ಯಕವಾಗಿ ಆಗಬೇಕಾದುದು ಎಲ್ಲಾ ಜನರ ಒಂದು ಪಾರ್ಟಿಸಿಪೇಷನ್. ಪ್ರತಿಯೊಬ್ಬ ವ್ಯಕ್ತಿ ಹೆಂಗಸೇ ಆಗಲಿ, ಗಂಡಸೇ ಆಗಲಿ ನಮಗಾಗಿ ಈ ಯೋಜನೆ, ಇದು ನಮ್ಮ ಯೋಜನೆ ಎಂದು ಅಭಿಪ್ರಾಯ ಮೂಡುವ ರೀತಿಯಲ್ಲಿ ನಾವು ಯೋಜನೆಯನ್ನು ತಯಾರು ಮಾಡಿದಾಗ ಜನರಿಗೆ ಅರಿವಾಗುವ ರೀತಿಯಲ್ಲಿ ತಿಳಿಸತಕ್ಕದ್ದು ನಮ್ಮ ಕರ್ತವ್ಯ. ಆಗ ಯಾವುದೇ ಯೋಜನೆ ಸಫಲತೆಯನ್ನು ಕೊಡುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನು ಬಹುಮುಖ್ಯವಾದ ವಿಷಯವನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಯೋಜನಾ ಇಲಾಖೆಯಲ್ಲಿ ಮಾನಿಟರಿಂಗ್ ಮಾಡಿ ಈ ಸ್ಕೀಮನ್ನು ತಯಾರು ಮಾಡತಕ್ಕ ಕಾರ್ಯವನ್ನು ಕೈಗೊಂಡಿದ್ದೇವೆ. ಎಂದು ಹೇಳಿದ್ದಾರೆ, ಮಾನಿಟರಿಂಗ್ ಆಗುತ್ತದೆ. ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಏನೇನು ಮಾಡಿದ್ದೇವೆಂದು ಹೇಳಿರತಕ್ಕ ಈ ಆನ್ಯುಯಲ್ ರಿಪೋರ್ಟನ್ನು ಇಂಡೆಕ್ಸ್ ಎಂದು ಕರೆದರೆ ತಪ್ಪಾಗಲಾರದು, ತಾವೂ ಒಪ್ಪಿಕೊಳ್ಳುತ್ತೀರಿ ಎಂದು ನನ್ನ ಅಭಿಪ್ರಾಯ. ಇದರಲ್ಲಿ ಯಾವ ರೀತಿ ಹಳ್ಳಿಗಳ ಅಭಿವೃದ್ಧಿ ಸಾಧಿಸಬೇಕು, ಪಟ್ಟಣಗಳ ಅಭಿವೃದ್ಧಿ ಯಾವ ರೀತಿ ಸಾಧಿಸಬೇಕು ಎನ್ನುವುದಕ್ಕೆ ಎಲಿಮೆಂಟರಿ ಪ್ರಿನ್ಸಿಪಲ್ಸ್ ಬಗ್ಗೆ ಮಾಹಿತಿ ಇಲ್ಲ, ಈ ರೀತಿ ಮಾಡುತ್ತೇವೆ ಎಂಬ ಅವಕಾಶ ಕೂಡ ಮಾಡಿಲ್ಲ. ನಾವು ೧೯೪೭ನೇ ಇಸವಿಯಲ್ಲಿ ಸ್ವಾತಂತ್ರ್ಯ ಗಳಿಸಿದ್ದೇವೆ. ಇಂದಿನತನಕ ಹಳ್ಳಿಗಳು ಯಾವ ಸ್ಥಿತಿಯಲ್ಲಿದ್ದವೊ ಅದೇ ಸ್ಥಿತಿಯಲ್ಲಿವೆ. ಯಾವುದೇ ಹಳ್ಳಿಗೆ ಹೋದರೂ, ಮೊದಲು ಒಂದು ರೋಡು ಏನಿತ್ತು ಆ ರೋಡು ರಿಪೇರಿಯಾಗಿಲ್ಲ ಎಂದು ಹೇಳಿದರೂ ಅದು ಹಳ್ಳಿಗಳಿಂದ ಬಂದಿರತಕ್ಕವರು ಒಪ್ಪತಕ್ಕ ಮಾತು. ಹಳ್ಳಿಗಳನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಸರಿಯಾದ ಯೋಜನೆ ಹಾಕಿಕೊಂಡಿಲ್ಲ. ಆ ಬಗ್ಗೆ ತೀವ್ರವಾದ ಗಮನ ಹರಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೆ ಈ ಸೋಶಿಯೋ ಎಕಾನಮಿಕ್ ಪ್ರೋಗ್ರಾಂ ಎಂದು ಹೇಳಿ ಏನು ಇದೆ ಈ ಪ್ರೋಗ್ರಾಂಗಳ ಬಗ್ಗೆ ಕಾರ್ಯಕ್ರಮ ನಡೆಯುತ್ತಿದೆ. It has got some bearing on the department of planning ಇದರಲ್ಲಿ ಬಹಳ ಮುಖ್ಯವಾದದ್ದು holding the price line of essential commodities. ಇದನ್ನು ತೆಗೆದುಕೊಳ್ಳಬೇಕು. ಮತ್ತೆ ಇದರಲ್ಲಿ ಇನ್ನೊಂದನ್ನು ನಾವು ಜೊತೆಯಲ್ಲಿ

ವಾದ ಮಾಡಬೇಕಾದರೆ ಇನ್ನೊಂದು ಇದೆ. production of the State in all fields. ಇದನ್ನು ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯವಾದದ್ದು. ಮತ್ತೆ ಪ್ಲಾನಿಂಗ್ ಮತ್ತು ಲೇಬರ್ ಡಿಪಾರ್ಟ್‌ಮೆಂಟ್ ಈ ಎರಡನ್ನೂ ಕೂಡ ಸೇರಿಸಿಕೊಂಡು ಮಾತನಾಡಬೇಕಾದಂಥ ಸಂದರ್ಭ ಉಂಟಾಗುತ್ತದೆ. ಇವತ್ತು ಸ್ಟ್ರೈಕ್‌ಗಳು ಆಗುತ್ತದೆ. ಸ್ಟ್ರೈಕ್‌ಗಳನ್ನು ಮಾಡಬಾರದೆಂದು ಹೇಳುವುದಿಲ್ಲ. ಕಾನೂನು ಬದ್ಧವಾಗಿ ಮುಷ್ಕರವನ್ನು ನಡೆಸಲಿ. ರಾಷ್ಟ್ರದ ಮತ್ತು ರಾಜ್ಯದ ಉತ್ಪನ್ನ ಹಾಳಾಗದ ರೀತಿಯಲ್ಲಿ, ರಾಷ್ಟ್ರದ ಪ್ರಗತಿ ಕುಂಠಿತವಾಗದ ರೀತಿಯಲ್ಲಿ ಮುಷ್ಕರ ಗಳನ್ನು ನಡೆಸಿದರೆ ನಾನು ಒಪ್ಪುತ್ತೇನೆ. ಈ ಮುಷ್ಕರಗಳು ರಾಜ್ಯದ ಹಾಗೂ ರಾಷ್ಟ್ರದ ಜನತೆಯ ಹಿತದೃಷ್ಟಿಗೆ ವಿರುದ್ಧವಾಗಿ ಆಗತಕ್ಕಂಥ ಕಾರ್ಯಗಳು ಆಗಬಾರದು. ಅವರಿಗೆ ನಾನಾ ಕಷ್ಟಗಳು ಬಂದಾಗ, ತೊಂದರೆಗಳು ಬಂದಾಗ, ಅವರ ನ್ಯಾಯಯುತವಾದ ಬೇಡಿಕೆ ಗಳಿಗೋಸ್ಕರವಾಗಿ ಅವರು ಅದನ್ನು ಸಕಾಲದಲ್ಲಿ ಕಾನೂನು ಬದ್ಧವಾಗಿ ಎಲ್ಲ ವ್ಯವಹಾರಗಳನ್ನು ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳಲಿ. ಮತ್ತು ಸರ್ಕಾರಕ್ಕೂ ಸಹ ಅವರ ಬಗ್ಗೆ ಅನುಕಂಪವಿರಬೇಕು. ಕಾರ್ಮಿಕರಿಗೆ ಸಹಕಾರ ಮತ್ತು ಸಹಾಯವನ್ನು ನೀಡಬೇಕು, ಇದಕ್ಕೆ ವಿರುದ್ಧವಾಯಿತೆಂದರೆ ದೇಶದ ಉತ್ಪನ್ನ ರಾಜ್ಯದ ಉತ್ಪನ್ನ ಕುಂಠಿತವಾಗುತ್ತದೆ. ಆಗ how can we hold the price line of essential commodities. ಎನ್ನುವ ಪ್ರಶ್ನೆ ಉದ್ಭವಿಸು ತ್ತದೆ. ನಿಜವಾಗಿಯೂ ಕಾರ್ಮಿಕರು ಈ ದೇಶದ ಉತ್ಪನ್ನಕ್ಕೆ ಕಾರಣಕರ್ತರಾಗಿರತಕ್ಕವರು, ಅವರಿಗೆ ನಾನು ಈ ಸಂದರ್ಭದಲ್ಲಿ ಅಪೀಲ್ ಮಾಡಿಕೊಳ್ಳುವುದಿಷ್ಟೆ, ನಿಮ್ಮ ಕೆಲಸಕಾರ್ಯಗಳ ಬಗ್ಗೆ ನಿಷ್ಠೆಯಿಂದ ದುಡಿಯಬೇಕು ಮತ್ತು ಕಾನೂನು ಬದ್ಧವಾಗಿ ನಿಮ್ಮ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುವುದು ನಿಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆಯಬೇಕಾದರೆ ಕಾನೂನು ಬದ್ಧವಾಗಿ ಪಡೆಯಬೇಕು, ಅದರಿಂದ ಸಾರ್ವಜನಿಕರಿಗೆ ಕಷ್ಟ ಅಥವಾ ನಷ್ಟಗಳನ್ನುಂಟು ಮಾಡಿ ವ್ಯವಹಾರ ಮಾಡತಕ್ಕ ಕೆಲಸಗಳಿಗೆ ಕೈಹಾಕ ಬಾರದೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾವು ಅವರಲ್ಲಿ ಅಪೀಲ್ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಈ socio economic programmes. ಏನಿದೆ ಸಮಾಜ ಕಲ್ಯಾಣ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳೇನಿವೆ, ಇವುಗಳನ್ನೇ ೨೦ ಅಂಶದ ಕಾರ್ಯಕ್ರಮವೆಂದು ಕರೆಯುತ್ತೇವೆ. ಇದರಲ್ಲಿ distribution of sites...ಏನಿದೆ...ತಾವು ಆನ್ಯುಯಲ್ ರಿಪೋರ್ಟ್‌ನಲ್ಲಿ ಕೊಟ್ಟಿರುವ ಅಂಕಿಅಂಶದ ಪ್ರಕಾರವಾಗಿ ನಾವು ನೋಡುವುದಾದರೆ, ಸುಮಾರು ೧೧ ಲಕ್ಷದ ೭ ಸಾವಿರ ಚಿಲ್ಲರೆ ಫ್ಯಾಮಿಲಿಗಳನ್ನು ಐಡೆಂಟಿಫೈ ಮಾಡಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ೯ ಲಕ್ಷದ ೨೯ ಸಾವಿರ ಫ್ಯಾಮಿಲಿಗಳಿಗೆ ಸೈಟ್‌ಗಳನ್ನು ೩೧ನೇ ಮಾರ್ಚ್ ೧೯೮೧ ರೊಳಗೆ ಹಂಚಿದ್ದೇವೆಂದು ಹೇಳಿದ್ದೀರಿ. ಇದು ದೊಡ್ಡ ದೊಡ್ಡ ನಗರಗಳಲ್ಲಿ, ಪಟ್ಟಣಗಳಲ್ಲಿ ಇಂಥಾ ಒಂದು ಕಾರ್ಯ ನಡೆದಿಲ್ಲವೆಂದು ಹೇಳಿದರೆ ಅದು ನಿಜವಾಗಿಯೂ ಆಶ್ಚರ್ಯದ ಸಂಗತಿಯಾಗಿದೆ. ಇದು ಕೇವಲ ಗ್ರಾಮಗಳಲ್ಲಿ ಮತ್ತು ರೂರಲ್ ಏರಿಯಾ ದಲ್ಲಿ ಮಾತ್ರ ಬಡವರು ಇರುವುದಿಲ್ಲ, ಎಲ್ಲಾ ಕಡೆಯೂ ಬಡವರು ಇರುವುದರಿಂದ ತಮ್ಮ ನೀತಿ ಇರುವುದು ಎಲ್ಲಾ ಬಡವರಿಗೂ ಸೈಟ್‌ಗಳನ್ನು ಹಂಚಬೇಕೆಂದಿರುವುದರಿಂದ ಈ ರೀತಿಯಾಗಬಾರದು. ಪಟ್ಟಣದಲ್ಲಿಯೋ ಇರಲಿ ಹಳ್ಳಿಯಲ್ಲಿಯೋ ಇರಲಿಯಾವ ಬಡವರಿಗೆ ಇರಲು ಸೈಟ್ ಇಲ್ಲವೋ ಅಂಥವರಿಗೂ ಸೈಟ್‌ಗಳನ್ನು ಒದಗಿಸುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ, ಇನ್ನು ಬಾಂಡೆಡ್ ಲೇಬರರ್ಸ್ ಬಗ್ಗೆ ಹೇಳುವುದಾದರೆ, ಅವರ ಬಗ್ಗೆ ಪುನರ್ ವಸತಿ ಕಾರ್ಯಕ್ರಮ ಸಮರ್ಪಕವಾಗಿ ಸಾಗಿಲ್ಲ. ಇದು ಸರಿಯಾಗಿ ಯೋಜನೆ ಆಗಿಲ್ಲವೆಂದು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರಿ ಎಂದು ಕಾಣಿಸುತ್ತದೆ. ಇದು ೧೯೭೬ನೇ ಇಸವಿಯಲ್ಲಿ ಕಾನೂನು ಜಾರಿಗೆ ಬಂತು. ಅದರಲ್ಲಿ ೬೨ ಸಾವಿರದ ೬೯೯ ಬಾಂಡೆಡ್ ಲೇಬರರ್ಸ್ ಇದ್ದಾರೆಂದು ಹೇಳಿದ್ದೀರಿ. ಅದರಲ್ಲಿ ೯ ಸಾವಿರದ ೪೦೩ ಜನರಿಗೆ ಪುನರ್‌ವಸತಿಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆಯೆಂದು ಹೇಳಿದ್ದೀರಿ ಮತ್ತೆ ಇನ್ನು ೫೮೪ ಜನ ಬಾಂಡೆಡ್ ಲೇಬರರ್ಸ್ ಏನಿದ್ದಾರೆ ಅವರಿಗೆ ನಮ್ಮ ಆಸಿಸ್ಟೆನ್ಸ್ ಬೇಕಿರಲಿಲ್ಲ ಮತ್ತೆ ಕೆಲವರ ವೇರ್ ಅಬೌಟ್ಸ್ ಗೊತ್ತಿಲ್ಲವೆಂದು ಹೇಳಿದ್ದೀರಿ. ಮತ್ತೆ ಇತ್ತೀಚೆಗೆ ೪೧,೧೯೩ ಜನಕ್ಕೆ ಡೆಪ್ಯುಟಿ ಕಮಿಷನರ್ ರವರು ಪುನರ್ ವಸತಿ ಮಾಡುವ ಬಗ್ಗೆ ರೆಕಮೆಂಡ್ ಮಾಡಿದ್ದಾರೆಂದು ಹೇಳಿದ್ದೀರಿ. ಅಂದರೆ ಇಲ್ಲಿಯ ವರೆಗೆ ಪುನರ್ ವಸತಿ ಕಲ್ಪಿಸಿಕೊಟ್ಟಿರತಕ್ಕಂಥದ್ದು ಕೇವಲ ೨೨.೨೭೯ ಬಾಂಡೆಡ್ ಲೇಬರರ್ಸ್‌ಗೆ ಮಾತ್ರ

ವೆಂದು ಹೇಳಿದ್ದೀರಿ ಅಂದರೆ ಇನ್ನು ೪೦ ಸಾವಿರ ಚಿಲ್ಲರೆ ಬಾಂಡೆಡ್ ಲೇಬರರ್ಸ್‌ಗೆ ಪುನರ್ ವಸತಿಯನ್ನು ಕಲ್ಪಿಸಿಕೊಡಬೇಕಾಗಿದೆ ಒಬ್ಬ ಮನುಷ್ಯನಿಗೆ ಒಂದು ಹೊತ್ತು ಅನ್ನ ಇಲ್ಲದೇ ಹೋದರೆ ಅವನಿಗೆ ಪ್ರಪಂಚವೇ ಕಾಣುವುದಿಲ್ಲ ಅಂಥಾದ್ದರಲ್ಲಿ ಅವರನ್ನು ೫ ವರ್ಷಗಳಿಂದ ಈ ರೀತಿಯಾಗಿ ಊಟ, ವಸತಿ ಇಲ್ಲದೆ ಇಟ್ಟಿದ್ದೀರಲ್ಲಾ. ಮೊದಲಾಗಿದ್ದರೆ ಅವರು ಅವರಿವರ ಮನೆಯಲ್ಲಿ ಕೆಲಸ ಮಾಡಿಕೊಂಡು ಅರ್ಧ ಹೊಟ್ಟೆ ತುಂಬಿಕೊಂಡಾದರೂ ಇರುತ್ತಿದ್ದ, ಅದೂ ಇಲ್ಲದೆ ಹಾಗೆ ಈಗ ತಾವು ಮಾಡಿದ್ದೀರಿ. ಆದುದರಿಂದ ಮಿಕ್ಕವರ ಬಗ್ಗೆ ಡೆಪ್ಯುಟಿ ಕಮಿಷನರ್ ರವರು ಏನು ಶಿಫಾರಸ್ಸು ಮಾಡಿದ್ದಾರೆ ಅವರಿಗೆಲ್ಲರಿಗೂ ತೀವ್ರ ಗತಿಯಲ್ಲಿ ಪುನರ್ ವಸತಿ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಬಯಸುತ್ತೇನೆ.

ಇನ್ನು ವ್ಯವಸಾಯ ಉತ್ಪನ್ನಗಳ ಬೆಲೆ ಇವತ್ತು ವಿಪರೀತವಾಗಿ ಜಾಸ್ತಿಯಾಗಿದೆ. ರೈತನ ಕಷ್ಟ ನಿಜವಾಗಿಯೂ ಕೂಡ ಹೆಚ್ಚಾಗಿ ಜನರು ಅರಿತಿರಲಾರರು ಎಂದು ತಿಳಿದುಕೊಂಡಿದ್ದೇನೆ. ರೈತನ ಕಷ್ಟ ರೈತನಿಗೇ ಗೊತ್ತು, ಯಾವರೀತಿಯಾಗಿ ಬಾಯಿಗೆ ಬೆಲ್ಲ ಹಾಕಿಕೊಂಡರೆ ಸಿಹಿ ಎಂದು ಗೊತ್ತಾಗುತ್ತದೆಯೋ ಹಾಗೆ ಇವತ್ತಿನ ದಿವಸ ರೈತನ ಕಷ್ಟವರಿಯಬೇಕಾದರೆ ಸ್ವತಃ ವ್ಯವಸಾಯ ಮಾಡಿ ನೋಡಿ ತಿಳಿದುಕೊಳ್ಳಬೇಕಾಗಿದೆ. ಅದನ್ನು ಬಿಟ್ಟು ಇಲ್ಲಿ ಏರ್ ಕಂಡೀಷನ್ ರೂಂನಲ್ಲಿ ಕೂತುಕೊಂಡು, ನೆರಳಿನಲ್ಲಿ ಕೂತುಕೊಂಡು ರೈತನ ಕಷ್ಟವನ್ನು ಅರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಬಿತ್ತನೆ ಬೀಜಗಳನ್ನು ಹಾಕಬೇಕಾದರೆ ಇವತ್ತು ಅದರ ಬೆಲೆಯೂ ಕೂಡ ಏರಿದೆ, ಇವತ್ತು ಅದಕ್ಕೆ ರೈತರಿಗೆ ತಾವು ಹೈ ಈಲ್ಡ್ ವೈರೇಟ್ ಬೀಜಗಳನ್ನು ಸಣ್ಣ ರೈತರಿಗೆ ಮುಫತ್ತಾಗಿ ಕೊಡಬೇಕೆಂದು ಹೇಳಬಯಸುತ್ತೇನೆ. ಇದರಿಂದ ಸರ್ಕಾರಕ್ಕೆ ಅಷ್ಟೇನೂ ಹೆಚ್ಚಿನ ಖರ್ಚು ಬೀಳುವುದಿಲ್ಲ. ಇವತ್ತು ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ದೇಶದ ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಸಣ್ಣ ರೈತರಿಗೆ, ಅತಿ ಸಣ್ಣ ರೈತರಿಗೆ ಬೀಜಗಳನ್ನು ಮುಫತ್ತಾಗಿ ಕೊಡುವುದು ಏನಿದೆ ಇದನ್ನು ಅದಕ್ಕೆ ಕಂಪೇರ್ ಮಾಡಿದರೆ ಜುಜುಬಿಯಾಗುತ್ತದೆ. ಆದುದರಿಂದ ಇದನ್ನು ಸರ್ಕಾರದವರು ಈಗಲಾದರೂ ಮನದಟ್ಟು ಮಾಡಿಕೊಂಡು ತೀವ್ರಗತಿಯಿಂದ ಪರಿಶೀಲನೆ ಮಾಡಿ ಸಣ್ಣ ರೈತರಿಗೆ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜಗಳನ್ನು ಅವನಿಗೆ ಎಷ್ಟು ಬೇಕೋ ಅಷ್ಟನ್ನು ಮುಫತ್ತಾಗಿ ಕೊಟ್ಟರೆ ಒಳ್ಳೆಯದು, ಇದರಿಂದ ಅವರ ಹಿತದೃಷ್ಟಿಯನ್ನು ಮತ್ತು ದೇಶದ ಹಿತದೃಷ್ಟಿಯಿಂದಲೂ ಒಳ್ಳೆಯದಾಗುತ್ತದೆ ಮತ್ತು ದೇಶದ ಉತ್ಪನ್ನವೂ ಕೂಡ ಜಾಸ್ತಿಯಾಗುತ್ತದೆ.

೫.೩೦ ಪಿ.ಎಂ.

ವ್ಯವಸಾಯದ ಉತ್ಪನ್ನ ಜಾಸ್ತಿಯಾಗಬೇಕು, ತನ್ಮೂಲಕ ರಾಷ್ಟ್ರದ ಆಹಾರ ಧಾನ್ಯಗಳು ಏನಿವೆ ಅವು ಸಾಕಷ್ಟು ಜನರಿಗೆ ಸಿಗುತ್ತವೆಂಬ ಸಂದರ್ಭ ಉಂಟಾಗಬೇಕಾದರೆ ಸರ್ಕಾರದವರು ಬಿತ್ತನೆ ಬೀಜವನ್ನು ಮುಫತ್ತಾಗಿ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಯೋಜನೆಗಳನ್ನು ಹಾಕಿಕೊಳ್ಳುವಾಗ ರೀಜನಲ್ ಇಂಬ್ಯಾಲೆನ್ಸ್ ಅನ್ನು ಕಡಿಮೆ ಮಾಡತಕ್ಕ ಯೋಜನೆಗಳನ್ನು ಹಾಕಿಕೊಳ್ಳಬೇಕು, ಅದರ ನಂತರ ಕಡಿಮೆಯಾಗಬೇಕು. ನಮ್ಮ ಇವತ್ತಿನ ಯೋಜನೆಗಳಲ್ಲಿ ಬಡವ ಬಡವನಾಗಿರತಕ್ಕದ್ದು ಮತ್ತು ಸಾಹುಕಾರ ಸಾಹುಕಾರನಾಗತಕ್ಕ ಧೋರಣೆಯನ್ನು ಕಾಣುತ್ತಿದ್ದೇವೆ. ಅದು ಖಂಡಿತ ಆಗಬಾರದು. ಸಾಕಷ್ಟು ಮಟ್ಟಿಗೆ ಅಂತರ ಕಡಿಮೆಯಾಗತಕ್ಕ ಯೋಜನೆಗಳು ಬರಬೇಕು. ಮಲೆನಾಡಿನಲ್ಲಿ ಒಂದು ರೀತಿ ಮಾಡುವುದು ಮತ್ತು ಮೈದಾನ ಪ್ರದೇಶದಲ್ಲಿ ಒಂದು ರೀತಿ ಮಾಡುವುದು ಸರಿಯಲ್ಲ. ಒಂದು ಕಡೆ ಒಂದರ್ಧ ಭಾಗವನ್ನು ಅಭಿವೃದ್ಧಿ ಮಾಡುವುದು ಮತ್ತೊಂದು ಕಡೆ ಮಾಡದೆ ಇರುವುದು ತರವಲ್ಲ. ಸಮಗ್ರವಾಗಿ ಎಲ್ಲರಿಗೂ ತೃಪ್ತಿಕರವಾಗುವ ಹಾಗೆ ಯೋಜನೆಗಳನ್ನು ರೂಪಿಸಬೇಕು. ಆದ್ದರಿಂದ, ರೀಜನಲ್ ಇಂಬ್ಯಾಲೇನ್ಸ್ಸ್ ಹೋಗಬೇಕು ಮತ್ತು ತಾರತಮ್ಯದ ನೀತಿಯನ್ನು ಅನುಸರಿಸಬಾರದು ಹಾಗೂ ಎಲ್ಲ ಕಡೆಗೂ ಒಂದೇ ದೃಷ್ಟಿಯನ್ನಿಟ್ಟುಕೊಂಡು ಯೋಜನೆಗಳನ್ನು ತಯಾರಿಸಬೇಕೆಂದು ಹೇಳುತ್ತೇನೆ. ಇನ್ನು ಇವತ್ತಿನ ದಿವಸ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರಿಗೆ ಮನೆಗಳು ಸಿಗುವುದು ಕಷ್ಟವಾಗಿದೆ. ಅವರು ಎಲ್ಲಿಂದಲೋ ಬರಬೇಕಾದ ಪರಿಸ್ಥಿತಿ ಇದೆ. ಹೆಚ್ಚಾಗಿ ಜನರು ಸ್ಲಂ ಏರಿಯಾಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಅಲ್ಲಿಂದ ಕಾರ್ಖಾನೆಯ ಕೆಲಸ ಕಾರ್ಯಗಳಿಗೆ ಬರುತ್ತಿದ್ದಾರೆ. ಇದನ್ನು ತಪ್ಪಿಸಬೇಕಾದರೆ

ಸರ್ಕಾರದವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಯಾರು ಕಾರ್ಖಾನೆಗಳನ್ನು ಸ್ಥಾಪಿಸುತ್ತಾರೋ ಅವರೇ ತಮ್ಮ ಕಾರ್ಖಾನೆಯ ಕೆಲಸಗಾರರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ, ಅಥವಾ ಬಾಡಿಗೆ ಮನೆಗಳನ್ನು ಕೊಡತಕ್ಕ ಏರ್ಪಾಡನ್ನು ಮಾಡುವಂತೆ ನಿರ್ಬಂದ ಹಾಕಬೇಕು ಮತ್ತು ಯಾರು ಅದಕ್ಕೆ ಬದ್ಧರಾಗುತ್ತಾರೋ ಅಂಥವರಿಗೆ ಮಾತ್ರ ಲೈಸೆನ್ಸ್‌ಗಳನ್ನು ನೀಡತಕ್ಕ ವ್ಯವಸ್ಥೆ ಮಾಡಬೇಕು. ಜನಗಳು ಕಷ್ಟಪಟ್ಟು ದುಡಿದು ಇವರು ಬೆಳೆಯತಕ್ಕ ಅವಕಾಶ ಆಗಬಾರದು. ಅವರನ್ನು ಸುಖವಾಗಿ ಇಟ್ಟುಕೊಂಡು ಕೆಲಸಕಾರ್ಯಗಳನ್ನು ನಡೆಸಿ ದೇಶದ ಉತ್ಪನ್ನ ಜಾಸ್ತಿ ಮಾಡಬೇಕೇ ವಿನಹ ಅವರನ್ನು ಶೋಷಣೆ ಮಾಡತಕ್ಕ ಕೆಲಸವನ್ನು ಮಾಡಬಾರದು. ಸರ್ಕಾರದವರು ಕೆಲಸಗಾರರ ಹಿತದೃಷ್ಟಿಯಿಂದ ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಅಥವಾ ಬಾಡಿಗೆ ಮನೆಗಳನ್ನಾದರೂ ಕೊಡತಕ್ಕ ಸೌಲಭ್ಯವನ್ನು ಕಲ್ಪಿಸಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಜಯನಗರ)—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇಲೆ ಮಾತನಾಡುತ್ತಾ, ಮಾನ್ಯ ಮಿತ್ರರು ಯಾವ ಒಂದು ವಿಷಯದ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡಿಲ್ಲವೋ ಅದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳ ಬಗ್ಗೆ ಹೇಳುವುದಾದರೆ. ಈ ಬಡ್ಜೆಟ್ಟನ್ನು ನೋಡಿದಾಗ ಎಲ್ಲ ಜಿಲ್ಲೆಗಳಲ್ಲೂ ಈ ಒಂದು ಸಂಸ್ಥೆಗಳನ್ನು ತೆರೆದಿರುವುದು ಕಂಡುಬರುತ್ತದೆ: ಆದರೆ ಮಂಡ್ಯ ಜಿಲ್ಲೆಯಲ್ಲಿ ಮಾತ್ರ ಏತಕ್ಕೆ ಈ ಒಂದು ಕೇಂದ್ರವನ್ನು ತೆರೆಯಲು ಅವಕಾಶ ಮಾಡಿಲ್ಲವೆಂಬುದು ಗೊತ್ತಿಲ್ಲ.

ಶ್ರೀ ಎ.ಬಿ. ಜಕನೂರ್.—ಮಾಡಲಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಈ ಪಟ್ಟಿಯಲ್ಲಿ ಇಲ್ಲ. ಈಗ ಹೊಸದಾಗಿ ಮಂಜೂರಾಗಿರಬಹುದು. ಮಂಡ್ಯ ಜಿಲ್ಲೆಯಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿದ್ದು ಕೈಗಾರಿಕೆ ಕ್ಷೇತ್ರದಲ್ಲಿ ಹೆಚ್ಚಾಗಿ ಪ್ರಗತಿಯಾಗದಿರುವುದನ್ನು ನೋಡಿ ನೆಗ್ಲೆಕ್ಟ್ ಮಾಡಿದೆ ಎಂದು ಕಾಣುತ್ತದೆ. ಅಲ್ಲಿಗೆ ಆ ಒಂದು ಕೇಂದ್ರ ಮುಖ್ಯವಾಗಿ ಆಗಬೇಕಾಗಿತ್ತು. ಅದನ್ನು ಈಗ ಕೊಟ್ಟಿರುವುದು ಸಂತೋಷ. ನಮ್ಮ ರಾಜ್ಯದಲ್ಲಿ ಪೂರ್ಣಕಾಲಾವಧಿಯಲ್ಲಿ ಕೆಲಸ ಮಾಡತಕ್ಕ ೨೯ ಸಂಸ್ಥೆಗಳೂ ಮತ್ತು ಅಲ್ಪ ಕಾಲಾವಧಿಯಲ್ಲಿ ಕೆಲಸ ಮಾಡತಕ್ಕ ೬ ಸಂಸ್ಥೆಗಳು ಇವೆ. ಬೆಂಗಳೂರು ಒಂದರದ್ದೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಬೆಂಗಳೂರು ನಗರದ ಐ.ಟಿ.ಐ. ನಲ್ಲಿ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದೇ ಇರುವುದು ೪೫೦ ಮಾತ್ರ; ಆದರೆ ೧೪,೦೦೦ ಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ಅಷ್ಟೂ ಜನರಿಗೆ ಹೇಗೆ ಇಂಟರ್‌ವ್ಯೂ ಕೊಡುವುದೆಂದು ಹೇಳಿ ಅದನ್ನು ೨ ಸಾವಿರಕ್ಕೆ ಮಾತ್ರ ಇಂಟರ್‌ವ್ಯೂ ಮಾಡುವುದಕ್ಕೆ ಹೋಗಿ ಯಾವುದೇ ಮೆರಿಟ್ ವಿದ್ಯಾರ್ಥಿಗೂ ಮಾನ್ಯತೆ ಕೊಟ್ಟಿಲ್ಲ. ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ವಿಷಯಗಳು ಯಾವುವು ಎಂಬುದನ್ನು ಒಂದರಿಂದ ೫ ರವರೆಗೆ ಆದ್ಯತೆ ಮೇಲೆ ನಮೂದಿಸಬಹುದೆಂದು ವಿದ್ಯಾರ್ಥಿಗಳನ್ನು ಅರ್ಜಿ ಫಾರಂನಲ್ಲಿ ಕೇಳಿರುತ್ತಾರೆ. ಯಾವುದೋ ಒಂದು ವಿಷಯಕ್ಕೆ ಮೊದಲ ಆದ್ಯತೆ ನೀಡಿ ಕೇಳಿರುವ ವಿದ್ಯಾರ್ಥಿಗಳನ್ನೆಲ್ಲ ಒಂದು ಕಡೆ ಪಟ್ಟಿ ಮಾಡಿ ಅವರಲ್ಲಿ ಮೆರಿಟ್ ಇದ್ದವರಿಗೆ ಇಂಟರ್‌ವ್ಯೂ ಕಳುಹಿಸುತ್ತಾರೆ. ಅದೇ ವಿಷಯಕ್ಕೆ ೨ ನೇ ಆದ್ಯತೆ ನೀಡಿ ಸೀಟು ಕೇಳಿರುವ ವಿದ್ಯಾರ್ಥಿಗೆ ಮೆರಿಟ್ ಇದ್ದರೂ ಆತನು ಆ ವಿಷಯಕ್ಕೆ ಮೊದಲನೇ ಆದ್ಯತೆ ನೀಡಿಲ್ಲವೆಂದು ಆತನನ್ನು ಇಂಟರ್‌ವ್ಯೂಗೆ ಕರೆಯುವುದಿಲ್ಲ. ಅಲ್ಲಿ ಮಾಡುತ್ತಿರುವುದು ಏನೆಂದರೆ. ಒಂದು ಡಜನ್ ಆದ್ಯತೆ ಹಾಕಿದ್ದರೂ ಮೊದಲನೇ ಆದ್ಯತೆ ನೋಡಿ, ಮೆರಿಟ್ ನೋಡಿ ಇಂಟರ್‌ವ್ಯೂಗೆ ಕರೆಯುವುದು. ಅವನು ಆ ರೀತಿ ಆದ್ಯತೆ ಹಾಕುವ ಕಾರಣವೇನೆಂದರೆ, ಒಂದರಲ್ಲಿ ಸಿಗದಿದ್ದರೆ ಇನ್ನೊಂದರಲ್ಲಾದರೂ ಸಿಗಲಿ ಎಂದೇ ವಿನಹ ಇಂಟರ್‌ವ್ಯೂಗೆ ಕರೆಯದೆ ಇರಲಿ ಎಂದು ಅಲ್ಲ. ಆದುದರಿಂದ, ಮುಖ್ಯವಾಗಿ ಇಂಟರ್‌ವ್ಯೂಗೆ ಕರೆಯುವಾಗ ಮೆರಿಟ್ಟಿಗೆ ಆದ್ಯತೆ ನೀಡಿ ಆಯಾಯ ವಿಭಾಗಕ್ಕೆ ತಕ್ಕಂತೆ (ಹಿಂದುಳಿದ ವರ್ಗ, ಹರಿಜನಗಿರಿಜನ ಇತ್ಯಾದಿ) ಕರೆದು, ಅವನು ಮೊದಲ ಆದ್ಯತೆ ನೀಡಿ ಕೇಳಿರುವ ವಿಷಯ ಸಿಗುವ ಹಾಗೆ ಇಲ್ಲದಿದ್ದರೆ, ಅವನನ್ನು ಎರಡನೇ ಆದ್ಯತೆ ನೀಡಿ ಕೇಳಿರುವ ವಿಷಯವನ್ನು ತೆಗೆದುಕೊಳ್ಳುತ್ತೀಯ ಎಂದು ಕೇಳಿ, ಅದನ್ನು ಅತ ತೆಗೆದುಕೊಳ್ಳುವುದಾದರೆ ಅವನಿಗೆ ಸೀಟು ಕೊಡಬೇಕು. ಅದನ್ನು ಬಿಟ್ಟು ಮೊದಲು ನಾನು ಹೇಳಿದ ಹಾಗೆ ರಿಜೆಕ್ಟ್ ಮಾಡುವುದು ಸರಿಯಲ್ಲ. ಈ ಬಗ್ಗೆ ಪೂರಾ ವಿವರಗಳನ್ನು ಅಲ್ಲಿನ ಪ್ರಿನ್ಸಿಪಾಲರು ನೀಡಿದ್ದರಿಂದ ಗೊತ್ತಾಯಿತು; ಕಳೆದ ೨ ವರ್ಷಗಳಿಂದ ಇದೇ ರೀತಿ ಆಗುತ್ತಿದೆ. ಮುಂದೆಯಾದರೂ ಇದನ್ನು ಸರಿ ಮಾಡಬೇಕೆಂದು ಹೇಳುತ್ತೇನೆ. ಅಲ್ಲಿರತಕ್ಕ

೨೬ ಟ್ರೇಡುಗಳಲ್ಲೂ ಹೆಚ್ಚಾಗಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಸಂಭಂದ ಪಟ್ಟ ವಿಷಯಗಳಿವೆ ಇವೆ; ೨ ರಲ್ಲಿ ಮಾತ್ರ ಟೈಲರಿಂಗ್ ಮತ್ತು ಶೀಘ್ರಲಿಪಿ ಇದೆ ಆದರೆ ಎಲೆಕ್ಟ್ರಿಕಲ್, ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಕೂಡ ತರಬೇತಿ ಪಡೆಯುವುದು ಇರುತ್ತದೆ. ಅದು ಯಾವುದು ಎಂಬುದನ್ನು ತಿಳಿದುಕೊಂಡು ಅವಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕೂಡ ಅಲ್ಲಿ ತರಬೇತಿ ನೀಡಬೇಕಾಗುತ್ತದೆ. ಎಸ್.ಎಸ್.ಎಲ್.ಸಿ ಆಗದೆ ಇರುವವರಿಗೆ ಅನುಕೂಲವಾಗತಕ್ಕಂಥ ಟ್ರೇಡ್‌ಗಳನ್ನು ಕೂಡ ಇನ್ನು ಕೆಲವು ವಿಷಯಗಳನ್ನು ಅದರಲ್ಲಿ ಸೇರಿಸಬಹುದು. ಅದನ್ನು ಕೂಡ ಸರ್ಕಾರ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಕೃಷಿ ಇಂಜಿನಿಯರಿಂಗ್ ಕೂಡ ಒಂದು ತಾಂತ್ರಿಕ ವಿಷಯವೇ ಆಗಿದೆ ಅದರಲ್ಲಿ ಕೂಡ ತರಬೇತಿ ಪಡೆಯುವುದು ಇರುತ್ತದೆ. ಆದ್ದರಿಂದ ಅದನ್ನು ಮತ್ತು ಅದೇ ರೀತಿ ಇತರ ಟ್ರೇಡುಗಳನ್ನು ಕೂಡ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ಸೇರಿಸಬೇಕೆಂದು ಹೇಳುತ್ತೇನೆ. ಸಿವಿಲ್, ಅಗ್ರಿಕಲ್ಚರಲ್ ಇಂಜಿನಿಯರಿಂಗ್ ವಿಷಯಗಳನ್ನು ಅಲ್ಲಿ ಅಳವಡಿಸಿದರೆ ಜಿಲ್ಲಾ ಮಟ್ಟಗಳಲ್ಲಿ ಇರತಕ್ಕ ತರಬೇತಿ ಕೇಂದ್ರಗಳು ತಾಲ್ಲೂಕು ಮಟ್ಟಗಳಿಗೆ ಸಹ ಹೋಗುವ ಅವಕಾಶ ಬರುತ್ತದೆ. ತಾಲ್ಲೂಕು ಮಟ್ಟದಲ್ಲಿ ಕೂಡ ೫೦-೬೦ ಜನ ವಿದ್ಯಾರ್ಥಿಗಳಿರುವ ತರಬೇತಿ ಕೇಂದ್ರಗಳನ್ನು ತೆರೆಯುವ ಅವಕಾಶ ಬರುತ್ತದೆ. ಆಗ ಕೇವಲ ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಅಲ್ಲದೆ ಇತರ ಇಂಜಿನಿಯರಿಂಗ್ ಟ್ರೇಡುಗಳನ್ನು ಸಹ ಸೇರ್ಪಡೆ ಮಾಡಬಹುದೆಂದೂ ಮತ್ತು ಅದೇ ರೀತಿ ಮಾಡಬೇಕೆಂದು ಹೇಳುತ್ತೇನೆ. ಈ ವರ್ಷ ಬೆಂಗಳೂರು ನಗರದಲ್ಲಿ ಮಾತ್ರ ಮೋಟಾರು ಟ್ರೈನಿಂಗ್ ಸೆಂಟರನ್ನು ಪ್ರಾರಂಭಿಸುತ್ತಾರೆಂಬ ವಿಷಯ ತಿಳಿಯಿತು. ಮೋಟಾರು ವಾಹನಗಳ ಅಪಘಾತಗಳು ಹೆಚ್ಚಾಗುತ್ತಿರುವ ಇವತ್ತಿನ ದಿನಗಳಲ್ಲಿ ತರಬೇತಿಯ ಅವಶ್ಯಕತೆ ಬಹಳ ಇದೆ. ಅನೇಕ ಜನರು ಕ್ಲೀನರ್ ಆಗಿ ಸೇರಿದವರು ಎರಡು ವರ್ಷಗಳಲ್ಲಿ ಡ್ರೈವರ್ ಆಗಿ ಆರ್.ಟಿ.ಓ ಮುಖಾಂತರ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಅದಕ್ಕೋಸ್ಕರ ಬೆಂಗಳೂರಿನಲ್ಲಿ ಏನು ಒಂದು ಮೋಟಾರು ತರಬೇತಿ ಕೇಂದ್ರವನ್ನು ತೆರೆಯುತ್ತಿದ್ದೀರಿ ಅದೇ ರೀತಿ ವಿಭಾಗ ಕೇಂದ್ರಗಳಾದ ಬೆಳಗಾಂ, ಮೈಸೂರು ಹಾಗೂ ಗುಲ್ಬರ್ಗದಲ್ಲಿ ಕೂಡ ಮೋಟಾರು ತರಬೇತಿ ಕೇಂದ್ರಗಳನ್ನು ತೆರೆಯಬೇಕೆಂದು ಹೇಳುತ್ತೇನೆ. ಅಥವಾ ಅಲ್ಲಿರತಕ್ಕ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್‌ಗಳಲ್ಲಿ ಇದೂ ಒಂದು ಕೋರ್ಸನ್ನು ಹಾಕಿದರೆ ಅನುಕೂಲವಾಗುತ್ತದೆ ಏಕೆಂದರೆ ಇದು ಬಹಳ ಅವಶ್ಯಕವಾದ ವಿಷಯ. ತರಪೇತಿಗಳನ್ನು ಕೆಲವು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಮತ್ತು ಕೈಗಾರಿಕೆಗಳನ್ನು ಘಟಗಳಲ್ಲಿ ಕೊಡುತ್ತಿದ್ದಾರೆ ಐ.ಟಿ.ಐ (ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್) ಅಲ್ಲದೆ ಬೇರೆ ಬೇರೆ ಖಾಸಗಿ ಮತ್ತು ಸರ್ಕಾರೀ ಕಾರ್ಖಾನೆಗಳಲ್ಲೂ ತರಬೇತಿ ಕೊಡುತ್ತಿದ್ದಾರೆ. ಹೋದ ವರ್ಷ ಮೈಕೋ ಕಾರ್ಖಾನೆಯಲ್ಲಿ ನೀಡಿದ ತರಬೇತಿಗೆ All India Skilled Training ನಲ್ಲಿ ಮೊದಲನೆ ಸ್ಥಾನ ಬಂದಿದೆ. ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೊಡುವ ತರಪೇತಿಯಲ್ಲಿ Practical knowledge ಗಿಂತ Theoratical knowledge ಜಾಸ್ತಿ. ಆದರೆ ಈ ಇನ್ಸ್ಟಿಟ್ಯೂಟಗಳ ತರಬೇತಿ Theoratical knowledge ಗಿಂತ Practical knowledge ಜಾಸ್ತಿ ಇರಬೇಕು. ಈ ರೀತಿಯಾದ ತರಬೇತಿಯನ್ನು ಎಷ್ಟರಮಟ್ಟಿಗೆ ಕೊಡುತ್ತಿದ್ದಾರೆ ಎಂಬುದನ್ನು ನೋಡಬೇಕು. ಹೋದವರ್ಷ ತರಬೇತಿಯ ಉಪಕರಣಗಳಿಗೆ ೧೭.೩೩ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಇಷ್ಟು ಕಡಿಮೆ ಹಣ ಖರ್ಚು ಮಾಡಿದರೆ ಎಷ್ಟು ಮಾತ್ರ ಅನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದರಿಂದ ಇನ್‌ಸ್ಟಿಟ್ಯೂಟ್ ಮತ್ತು ವರ್ಕ್‌ಷಾಪ್‌ಗಳಲ್ಲಿ ಸರಿಯಾದ ತರಪೇತಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಫ್ಯಾಕ್ಟರಿಗಳಲ್ಲಿ ತರಬೇತಿ ಕೊಟ್ಟರೆ ಅಲ್ಲಿ ಹೆಚ್ಚಿನ ಸವಲತ್ತುಗಳು ಇರುವುದರಿಂದ ಅಲ್ಲಿ ತರಬೇತಿ ಪಡೆದವರು ಹೆಚ್ಚು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಈ ಕಾರಣದಿಂದಲೇ ಮೈಕೋ ಕಾರ್ಖಾನೆಯಲ್ಲಿ ನೀಡಿದ ತರಬೇತಿಗೆ ಮೊದಲನೇ ಬಹುಮಾನ ಬಂದಿದೆ ಎಂದು ಅರ್ಥವಾಗುತ್ತದೆ ಇನ್‌ಸ್ಟಿಟ್ಯೂಟ್‌ಗಳಲ್ಲಿ ತರಬೇತಿ ಕೊಟ್ಟಾದಮೇಲೆ ಕೆಲವು ಫ್ಯಾಕ್ಟರಿಗಳಿಗೆ ಪ್ರ್ಯಾಕ್ಟಿಕಲ್ ಟ್ರೈನಿಂಗ್‌ಗೆ ಕಳುಹಿಸಿ ಆದಾದಮೇಲೆ ಸರ್ಟಿಫಿಕೇಟ್ ಕೊಟ್ಟರೆ ಆಗ ಪೂರ್ಣವಾದ ತರಬೇತಿ ಸಿಕ್ಕಿದಂತಾಗುತ್ತದೆ. ಆದ್ದರಿಂದ ಆ ಕಡೆ ಗಮನ ವಹಿಸಬೇಕೆಂದು ಹೇಳುತ್ತೇನೆ

ಉದ್ಯೋಗ ವಿನಿಮಯ ಕಚೇರಿಯಲ್ಲಿ ೬ ಲಕ್ಷ ಚಿಲ್ಲರೆ ಅರ್ಜಿಗಳು ಇವೆ. ಈ ವರ್ಷದಲ್ಲಿ ರಾಜ್ಯಾದ್ಯಂತ ಸುಮಾರು ಎರಡೂವರೆ ಲಕ್ಷ ಅರ್ಜಿಗಳು ಬಂದಿವೆ. ಅದರಲ್ಲಿ ೨ ೧೭,೦೦೦ ಅರ್ಜಿಗಳನ್ನು ಅನೇಕ ಇಲಾಖೆಗಳಿಗೆ ಕಳುಹಿಸಿದ್ದಾರೆ. ಆದರೆ ಕೆಲಸ ಸಿಕ್ಕಿರುವುದು ೨೦,೦೦೦ ಜನರಿಗೆ ಮಾತ್ರ. ಇದರಲ್ಲಿ ಕಾರಣಾಂತರದಿಂದ ಇನ್ನೂ ೨೦,೦೦೦ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳಿ

ದ್ದಾರೆ. ೪೦ ಸಾವಿರ ಹುದ್ದೆಗಳಲ್ಲಿ ೨೦ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿ ಇನ್ನೂ ೨೦ ಸಾವಿರ ಹುದ್ದೆಗಳನ್ನು ಭರ್ತಿ ಮಾಡದೇ ಇರಬೇಕಾದರೆ ಕಾರಣ ಏನು ಎಂಬುದನ್ನು ನೋಡಬೇಕು. ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯಾ ಸ್ಥಾನಕ್ಕೆ ತಕ್ಕಂತೆ ತರಬೇತಿ ಪಡೆದವರು ಇದ್ದಾರೋ ಇಲ್ಲವೋ, ಒಂದು ವೇಳೆ ಇದ್ದರೆ ಅವರಿಗೆ ಸೂಚನೆ ಹೋಗುತ್ತದೆಯೋ ಇಲ್ಲವೇ ಎಂಬುದನ್ನು ವಿಚಾರಿಸಬೇಕು.

ಹರಿಜನ ಗಿರಿಜನರಿಗೇ ಒಂದು ವಿಶೇಷ ಉದ್ಯೋಗ ವಿನಿಮಯ ಕಚೇರಿಯನ್ನು ಮಾಡಿದ್ದೀರಿ. ಇದರಲ್ಲಿ ಸರ್ಕಾರದವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೧೩೫೪ ಹುದ್ದೆಗಳಿಗೆ ೪೯೩೩ ಜನರಿಗೆ ಇಂಟರ್‌ವ್ಯೂ ಮಾಡಿ ಅದರಲ್ಲಿ ೧೧೮ ಜನರಿಗೆ ಮಾತ್ರ ಕೆಲಸ ಸಿಕ್ಕಿದೆ. ೫ ಸಾವಿರ ಜನರಿಗೆ ಕಳುಹಿಸಿದ್ದರೂ ಕೂಡ ೧೧೮ ಜನರಿಗೆ ಮಾತ್ರ ಕೆಲಸ ಸಿಕ್ಕಿದರೆ ಇದಕ್ಕೆ ಏನು ಕಾರಣ? ಸರಿಯಾದ ತರಬೇತಿ ಕೊಟ್ಟಿಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ. ೧೩೫೪ ಹುದ್ದೆಗಳಿಗೆ ಯಾವ ಯಾವ ಟ್ರೇಡ್‌ನಲ್ಲಿ ತರಬೇತಿ ಹೊಂದಿರುತ್ತಾರೋ ಅವರಿಗೆ ಮಿನಿಮಂ ಕ್ವಾಲಿಫಿಕೇಷನ್ ಕೂಡ ಆ ಹುಡುಗರಿಗಿಲ್ಲ ಎಂದು ಅರ್ಥವಾಗುತ್ತಿದೆ. ಆದ್ದರಿಂದ ಹೀಗಾಗುತ್ತಿದೆ. ಅಥವಾ ಬೇರೆ ಇನ್ನೇನಾದರೂ ಅನ್ಯಾಯವಾಗುತ್ತಿರಬಹುದು ಎಂದು ಕಾಣುತ್ತದೆ. ಸುಮ್ಮನೆ ಅಪ್‌ಲಿಕೇಷನ್ ಕಳುಹಿಸಿದ ಹಾಗೆ ಕಳುಹಿಸಿ ಆಮೇಲೆ ರಿಜೆಕ್ಟ್ ಮಾಡಿದಹಾಗೆ ಮಾಡಿ ಬೇರೆ ಏನೋ ಕಾರಣ ತೋರಿಸಿ ಬೇರೆ ಜಾತಿಯವರಿಗೆ ಕೆಲಸಗಳನ್ನು ಕೊಡುವುದಕ್ಕೆ ಏನಾದರೂ ಅವಕಾಶ ಮಾಡಿಕೊಂಡಿದ್ದಾರೋ ಏನೋ ಎಂಬ ಬಗ್ಗೆಯೂ ತನಿಖೆ ಮಾಡಬೇಕಾಗುತ್ತದೆ.

ಅಂಗವಿಕಲರಿಗೆ ವಿಶೇಷ ಉದ್ಯೋಗ ವಿನಿಮಯ ಕಚೇರಿಯನ್ನು ಮಾಡಿದ್ದೀರಿ. ಅದರಲ್ಲೂ ಈ ವರ್ಷ ಅಂಗವಿಕಲರ ವರ್ಷ. ಈ ಸಂದರ್ಭದಲ್ಲಿ ಆ ಕಚೇರಿಯಲ್ಲಿ ಎಷ್ಟು ಜನ ರಿಜಿಸ್ಟರ್ ಮಾಡಿಕೊಂಡಿದ್ದಾರೆ, ಎಷ್ಟು ಜನರಿಗೆ ಅದರಲ್ಲಿ ಕೆಲಸ ಕೊಡಿಸಿದ್ದೀರಿ ಎಂಬ ಬಗ್ಗೆ ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಒಂದೆರಡು ಕಾರ್ಖಾನೆಗಳಲ್ಲಿ ಕಣ್ಣು ಇಲ್ಲದೇ ಇರುವವರು ಮತ್ತು ಬೇರೆ ಅಂಗವಿಕಲರಿಗೆ ಕೆಲಸಕ್ಕೆ ಪ್ರಯತ್ನಪಟ್ಟಾಗ ಕೊನೇಪಕ್ಷ ಕನಿಷ್ಟ ವಿದ್ಯಾರ್ಹತೆ ಎಸ್.ಎಸ್.ಎಲ್ ಸಿ. ಆದರೂ ಆಗಿರಬೇಕು ಎಂದು ಹೇಳಿದ್ದಾರೆ ೩ ಪರ್ಸೆಂಟ್ ರಿಸರ್ವೇಷನ್ ಅಂಗವಿಕಲರಿಗೆ ಇದ್ದರೂ ಕೂಡ ಎಸ್ ಎಸ್.ಎಲ್.ಸಿ. ಆಗಿರಬೇಕು ಎಂದು ಹೇಳುತ್ತಾರೆ. ಕಿವುಡರು ಮತ್ತು ಕುರುಡರು ಎಸ್.ಎಸ್.ಎಲ್.ಸಿ. ವರೆಗೆ ಓದುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ, ಆ ತಂದೆ ತಾಯಿಗಳಲ್ಲಿ ಎಷ್ಟು ಜನರಿಗೆ ಓದಿಸುವುದಕ್ಕೆ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ನಾಲ್ಕನೇ ತರಗತಿ, ಐದನೇ ತರಗತಿ ಆದವರನ್ನು ತೆಗೆದುಕೊಂಡು ಅವರಿಗೆ ತರಬೇತಿ ಕೊಟ್ಟರೆ ಅವರು ನಿಜವಾಗಿ ಚೆನ್ನಾಗಿ ಕೆಲಸ ಮಾಡುತ್ತಾರೆ. ರೇಕೋದಲ್ಲಿ, ಬಿ.ಇ.ಎಲ್. ನಲ್ಲಿ, ಐ.ಟಿ.ಐ ನಲ್ಲಿ ಹೆಚ್.ಎಂ.ಟಿ. ಯಲ್ಲಿ ಅನೇಕ ಜನ ಕುರುಡರಿದ್ದಾರೆ. ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆ ರೀತಿ ಕನಿಷ್ಟ ವಿದ್ಯಾರ್ಹತೆ ನಿಗದಿ ಮಾಡಿದರೆ ರಿಸರ್ವೇಷನ್ ಇಟ್ಟರೂ ಏನೂ .ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅಂಕವಿಕಲರು ಯಾರಿದ್ದಾರೆ ಅವರನ್ನು ತೆಗೆದುಕೊಂಡು ಎಸ್.ಎಸ್.ಎಲ್.ಸಿ. ಆಗದಿದ್ದರೂ ಕೂಡ ಅವರನ್ನು ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಕೊಟ್ಟು ಉಪಯೋಗವಾಗುವ ಹಾಗಿದ್ದರೆ ತೆಗೆದುಕೊಳ್ಳಲಿ. ಇಲ್ಲದಿದ್ದರೆ ಕಳುಹಿಸಿಬಿಡಲಿ. ಹೀಗೆ ಮಾಡಿ ಅಂಗವಿಕಲರಿಗೆ ೩ ಪರ್ಸೆಂಟ್ ರಿಸರ್ವೇಷನ್ ಪ್ರಕಾರ ಕೆಲಸ ಸಿಗುವಂತೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ವರ್ಷದ ಕೊನೆಯಲ್ಲಿ ಈ ದಿಸೆಯಲ್ಲಿ ಆದ ಸಾಧನೆ ಏನು ಎಂಬ ಬಗ್ಗೆ ವಿವರಣೆಯನ್ನು ಕೊಡಬೇಕಾಗುತ್ತದೆ. ಅಂಗವಿಕಲರ ವರ್ಷದಲ್ಲಿ ಎಷ್ಟು ಜನ ಅಂಗವಿಕಲರಿಗೆ ತರಬೇತಿ ಕೊಟ್ಟಿರಿ, ಎಷ್ಟು ಜನರಿಗೆ ಕೆಲಸ ಕೊಡಿಸಿದ್ದೀರಿ ಎಂಬ ಬಗ್ಗೆ ವಿವರಣೆಯನ್ನು ಕೊಡಬೇಕಾಗುತ್ತದೆ. ಆ ಕಡೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕಾದುದು ಅವಶ್ಯಕ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಕ್ಫ್ ವಿಚಾರದಲ್ಲಿ ಸರ್ಕಾರದ ನೀತಿಯನ್ನು ಪ್ರಶ್ನೆ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಏನೆಂದರೆ ಮುಸಲ್ಮಾನರಿಗೆ ಸ್ಮಶಾಣಗಳನ್ನು ಒಂದಾನೊಂದು ಕಾಲದಲ್ಲಿ ಹೆಣಗಳನ್ನು ಹೂಳುವುದಕ್ಕೆ ಎಂದು ಕೊಟ್ಟಿದ್ದರು. ಅದರಲ್ಲಿ ಒಂದು ಭಾಗ ಮಾತ್ರ ಅದಕ್ಕೆ ಕೊಟ್ಟು ಇನ್ನೊಂದು ಭಾಗವನ್ನು ಉಪಯೋಗಿಸದೆ ಹಾಗೆಯೇ ಉಳಿಸಿಕೊಂಡರು ಇಂಥ ಉಪಯೋಗವಾಗದ ಮುಸ್ಲಿಂ ಸ್ಮಶಾಣಗಳು ನಮ್ಮಲ್ಲಿ ಬೇಕಾದಷ್ಟಿವೆ. ಅದು ಇನ್ನೂ ಕೂಡ ಸರ್ಕಾರದ ಆಡಳಿತಕ್ಕೆ ಬಂದಿಲ್ಲ. The ownership of that land is not vesting with the Government, whereas it is still vesting with Wakf Board or a single person. ಯಾರೋ ಒಬ್ಬ ಮುತುವಲ್ಲಿ

ಎಂಬುವವನಿದ್ದು ಅವನ ಆಡಳಿತದಲ್ಲಿ ಇದನ್ನು ಇಟ್ಟುಕೊಂಡಿದ್ದಾನೆ. ಸರ್ಕಾರದ ಕಾನೂನು ಪ್ರಕಾರ ಆ ರೀತಿ ಜಮೀನನ್ನು ಒಂದು ಉಪಯೋಗಕ್ಕೆ ಕೊಟ್ಟಾಗ ಅದರ ಮಾಲಿಕತ್ವ ಸರ್ಕಾರಕ್ಕೆ ಇರಬೇಕು. ಕ್ರಿಶ್ಚಿಯನ್ನರದೇ ಆಗಲೀ, ಹಿಂದೂಗಳದ್ದೇ ಆಗಲೀ ಯಾರದ್ದೇ ಆಗಲಿ Government or the Corporation are the owners of that land and not any individual or any organisation. ಆದರೆ ಇದರಲ್ಲಿ ಮಾತ್ರ ಬೇರೆ ರೀತಿಯಲ್ಲಿ ಪಾಲನೆಯಾಗುತ್ತಿದೆ. ಉದಾಹರಣೆಗೆ ಜಯನಗರ ೪ ನೇ ಬ್ಲಾಕಿನಲ್ಲಿ ಒಂದು ಸ್ಮಶಾಣ ಇದೆ. ಅಲ್ಲಿ ಹೆಣಗಳನ್ನು ಹೂಳುವುದಿಲ್ಲ. ಆದರೆ ಖಾಲಿ ಜಾಗವನ್ನು ಇವತ್ತಿಗೂ ಕೂಡ ಕಾರ್ಪೊರೇಷನ್ನಿನವರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿಲ್ಲ. ಅಲ್ಲಿನ ಸ್ಥಳೀಯ ಜನರು ಕೋರ್ಟಿಗೆ ಹೋಗಿ ಕೋರ್ಟಿನಲ್ಲಿ the ownership vests with the Corporation ಎಂದು ಹೇಳಿದ್ದರೂ ಕೂಡ ಪೊಸಿಷನ್ ತೆಗೆದುಕೊಂಡಿಲ್ಲ. ಹೋದ ವರ್ಷ ಒಬ್ಬರು ಆ ಸ್ಥಳದಲ್ಲಿ ಷಾಪಿಂಗ್ ಕಾಂಪ್ಲೆಕ್ಸ್‌ಗೆ ಕಾರ್ಪೊರೇಷನ್ನಿಗೆ ಲೈಸೆನ್ಸಿಗೆ ಅರ್ಜಿ ಹಾಕಿಕೊಂಡಿದ್ದರು. ಅದಕ್ಕೆ ಪರ್ಮಿಷನ್ ಕೊಟ್ಟಿಲ್ಲ. ಆ ಖಾಲಿ ಜಾಗ ಸರ್ಕಾರದ್ದು ಎಂದು ಇರುವಾಗ ಬೇರೆಯವರಿಗ ಏನು ಮಾಡುವುದಕ್ಕೂ ಅವಕಾಶವಿರುವುದಿಲ್ಲ. ಅಲ್ಲಿ ಐದೂವರೆ ಎಕರೆ ಸ್ಥಳವಿದೆ ಅದರಲ್ಲಿ ಒಂದು ಎಕರೆಯನ್ನೂ ಕೂಡ ಹೆಣ ಹೂಳುವುದಕ್ಕೆ ಉಪಯೋಗಿಸಿಲ್ಲ. ಮಿಕ್ಕ ಜಾಗವೆಲ್ಲಾ ಹಾಗೆ ಇದೆ. ಮುಖ್ಯವಾಗಿ ಹೇಳಬೇಕೆಂದರೆ, ಅಲ್ಲೊಂದು ರಸ್ತೆ ಇದೆ. ಅದೇ ಮೂವತ್ತನೇ ಅಡ್ಡ ರಸ್ತೆ. ಅದು Shopping Complex ಎದುರುಗಡೆ ಇರುವುದರ ಜೊತೆಗೆ, ರಸ್ತೆ ಬಹಳ ಚಿಕ್ಕದಾಗಿರುವುದರಿಂದ ಅನೇಕ ಅಪಘಾತಗಳು ಸಂಭವಿಸುತ್ತಿವೆ. ಇದನ್ನು ಅಗಲ ಮಾಡಿದರೆ ಮುಖ್ಯ ರಸ್ತೆಗೆ ನೇರವಾಗಿ ಸಂಪರ್ಕ ಕಲ್ಪಿಸಬಹುದು. ಆದರೆ, ಆ ಕಾರ್ಯವನ್ನೂ ಇವತ್ತಿನವರೆಗೂ ಮಾಡಿಲ್ಲ. ನಗರಸಭೆಯವರು ನ್ಯಾಯಾಲಯದಿಂದ ಅಲ್ಲಿರುವ ಚಿಕ್ಕ ಮನೆಯನ್ನು ಕೆಡುವುದಕ್ಕೆ ಪರವಾನಿಗೆ ತಂದರೂ ಸಾವಿರಾರು ಜನ ಬಂದು ಸೇರಿಬಿಡುತ್ತಾರೆ. ಆಗ ಅಧಿಕಾರಿಗಳು ವಾಪಸ್ಸು ಹೋಗುತ್ತಾರೆ. ಮನೆ ಕೆಡುವುದಕ್ಕೆ ಆದೇಶ ನೀಡುವುದಕ್ಕಿಂತ ಮುಂಚೆಯೇ ಅಲ್ಲಿನ ಜನಕ್ಕೆ ಗೊತ್ತಾಗಿಬಿಡುತ್ತದೆ, ಅಧಿಕಾರಿಗಳು ಅಲ್ಲಿಗೆ ಹೋಗುವುದರೊಳಗೆ ನೂರಾರು ಜನ ಬಂದು ಸೇರಿಬಿಟ್ಟಿರುತ್ತಾರೆ. ಅದೇನೂ ಖಾಸಗಿ ಜಾಗವಲ್ಲ. ಅದು ನಗರಸಭೆಯ ಆಸ್ತಿ ಎಂದು ಸಾಬೀತಾಗಿದೆ. ಆದರೆ ಇದೊಂದು ಮತಕ್ಕೆ ಸಂಬಂಧಪಟ್ಟ ಬಹಳ ಸೂಕ್ಷ್ಮತರವಾದ ವಿಷಯ. ಇದು ಯಾರೊಬ್ಬರ ಆಸ್ತಿಯಲ್ಲ, ಸರ್ಕಾರದ್ದು ಎಂದು ಸಾಬೀತಾಗಿದ್ದರೂ, ಸಾರ್ವಜನಿಕ ಹಿತದೃಷ್ಟಿಯಿಂದ ಅಲ್ಲಿರುವ ಮನೆಯನ್ನು ಕೆಡವಿ ರಸ್ತೆಯನ್ನು ಅಗಲ ಮಾಡುವುದಕ್ಕೆ ಇವತ್ತಿಗೂ ಅನೇಕ ಅಡೆತಡೆಗಳು ಬರುತ್ತಿವೆ. ಅದೇನೂ ನ್ಯಾಯಾಲಯದ ಅಥವಾ ಕಾನೂನಿನ ಅಡೆತಡೆಯಲ್ಲ. ಸಂದರ್ಭ ಮತ್ತು ಪರಿಸ್ಥಿತಿಯ ಅಡೆತಡೆ. ಆದುದರಿಂದ, ಇದನ್ನು ತೀವ್ರವಾಗಿ ಯೋಚನೆ ಮಾಡಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇಂತಹ ವಿಷಯವಿರುವುದು ಜಯನಗರದ್ದೊಂದೇ ಅಲ್ಲ. ಅನೇಕ ಕಡೆ ಇದೇ ರೀತಿ ಇರಬಹುದು. ಅವುಗಳನ್ನೂ ಸಹ ತೀರ್ಮಾನ ಮಾಡಬೇಕು. ಆದುದರಿಂದ, ownership of the dis-used burial ground should vest with the Government and not with a particular person to whom was granted it once upon a time. ಇಷ್ಟು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

SRI V.V. PATTAR.—Sir, I have given my name.

MR. DEPUTY SPEAKER.—After reply you can seek clarification.

SRI V.V. PATTAR.—I have problems in my own constituency.

MR. DEPUTY SPEAKER.—It can be taken up with the hon. Minister.

SRI V.V. PATTAR.—Sir, reply by the hon. Minister may be given tomorrow.

MR. DEPUTY SPEAKER.—Tomorrow there will be non-official business. Now, the Minister will reply.

ಶ್ರೀ ಸಿ.ಎಂ. ಇಬ್ರಾಹಿಂ (ಯೋಜನಾ ಮತ್ತು ವಕ್ಫ್ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಯೋಜನಾ ಇಲಾಖೆ ಹಾಗೂ ವಕ್ಫ್ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಾನ್ಯ ಸದಸ್ಯರುಗಳ ಎದುರಿಗೆ ಇಟ್ಟಾಗ ಬಹುತೇಕವಾಗಿ ಯಾರೂ ಇದರಲ್ಲಿ ಹೆಚ್ಚಿಗೆ ಭಾಗವಹಿಸಿ ಮಾತನಾಡಲಿಲ್ಲ. ಮಾತನಾಡಿರುವ ಇಬ್ಬರು ಸ್ನೇಹಿತ ಸದಸ್ಯರು, ಯೋಜನಾ ಇಲಾಖೆ ಬಗ್ಗೆ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಯಾವುದೇ ರಾಜ್ಯದ ಆರ್ಥಿಕ ಪರಿಸ್ಥಿತಿ ಮತ್ತು ಪ್ರಗತಿ ಉನ್ನತ ಮಟ್ಟಕ್ಕೆ ಬರಬೇಕಾದರೆ ಆ ರಾಜ್ಯ ಹಾಕಿಕೊಂಡ ಯೋಜನೆಗಳ ಮೇಲೆ ಅದು ಆಧಾರವಾಗಿರುತ್ತದೆ. ಪ್ರಸ್ತುತ ನಮ್ಮ ರಾಜ್ಯ ಸರ್ಕಾರವು ಆರನೆ ಪಂಚವಾರ್ಷಿಕ ಯೋಜನೆಗಳಲ್ಲಿ ನೀರಾವರಿ ಮತ್ತು ವಿದ್ಯುತ್ ಉತ್ಪನ್ನಕ್ಕೆ ಶೇಕಡ ೪೦ರಷ್ಟು ಆದ್ಯತೆಯನ್ನು ಕೊಟ್ಟಿದೆ. ಇಡೀ ಭಾರತ ದೇಶದಲ್ಲೇ ಕರ್ನಾಟಕ ರಾಜ್ಯವು ಅತ್ಯಂತ ಉತ್ತಮವಾದ ಯೋಜನಾ ಸಾಮಗ್ರಿಗಳನ್ನು ಹೊಂದಿರುವ ರಾಜ್ಯವಾಗಿದೆ ಎಂದು ಹೆಸರುಗಳಿಸಿದೆ., Policy and Programme Division, Plan Monitoring and Information Division, Employment Thrust in Plan Programme, Project formulation Division, Socio Economic Programme, Distric Planning Process, Research in Planning and Development, Modernisation of Administration, Special studies Division... ಹೀಗೆ ಅನೇಕ ಶಾಖೆಗಳನ್ನು ಯೋಜನಾ ಇಲಾಖೆ ಹೊಂದಿದೆ. ಎಲ್ಲಕ್ಕಿಂತ ಮಹತ್ತರವಾಗಿ, ೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನವನ್ನು ಹೊತ್ತಿರತಕ್ಕ ಈ ಇಲಾಖೆ ವಿಶೇಷವಾಗಿ ಬಡಜನತೆ, ದೀನದಲಿತ, ಪೀಡಿತ ಮತ್ತು ಶೋಷಿತ ವರ್ಗಗಳ ಕಲ್ಯಾಣದ ಬಗ್ಗೆ ಕೆಲಸ ಮಾಡುತ್ತಿದೆ. ಯೋಜನೆಗಳು ಗ್ರಾಮಾಂತರ ಪ್ರದೇಶಗಳ ಮಟ್ಟದಿಂದ ಪ್ರಾರಂಭವಾಗಬೇಕೆಂಬ ದೃಷ್ಟಿಯಿಂದ ೧೭೫ ಘಟಕಗಳನ್ನು ಮಾಡಿ, ತಾಲ್ಲೂಕು ಮತ್ತು ಗ್ರಾಮಾಂತರ ಮಟ್ಟದಲ್ಲಿ ಮಾತ್ರವಲ್ಲದೆ ಒಂದು ಮನೆ ಮತ್ತು ಒಂದು ಕುಟುಂಬವನ್ನು ಆಧಾರವಾಗಿಟ್ಟುಕೊಂಡು ಯೋಜನೆಯನ್ನು ತಯಾರು ಮಾಡಬೇಕೆಂದು ನಮ್ಮ ಇಲಾಖೆ ಉದ್ದೇಶಿಸಿದೆ. ಶೇಕಡ ೬.೫ರಷ್ಟು ಬೆಳವಣಿಗೆ ಇದರಲ್ಲಿ ಆಗಬೇಕಾಗಿದೆ. ಮತ್ತು ತಲಾ ಆದಾಯವನ್ನು ೧೯೭೯-೮೦ರಲ್ಲಿ ೧೧೯೫ ಇದ್ದುದನ್ನು ೧೫೦೦ಕ್ಕೆ ತರಬೇಕೆಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಅದೇ ರೀತಿ ಸಂಪತ್ತೂ ಕೂಡ ಸಮತಾವಾದ ಸಮಾಜದ ತಳಹದಿ ಮೇಲೆ ವಿತರಣೆಯಾಗಬೇಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕ ಸಮಾನತೆಯನ್ನು ವಿಸ್ತರಿಸಬೇಕು ಹಾಗೂ ಸುಮಾರು ಒಂದು ಲಕ್ಷ ಹೆಕ್ಟೇರು ಭೂಮಿಗೆ ನೀರನ್ನೊದಗಿಸಬೇಕೆಂದು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಚಾರ ಇಟ್ಟುಕೊಂಡಿದ್ದೇವೆ. ಸುಮಾರು ೭೫ ಲಕ್ಷ ಟನ್ ಆಹಾರ ಧಾನ್ಯವನ್ನು ಹೆಚ್ಚಿಗೆ ಬೆಳೆಯಬೇಕೆಂದು ಆರನೆ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನೆಯೊಂದನ್ನು ತಯಾರು ಮಾಡಿದ್ದೇವೆ.

ಪಶ್ಚಿಮ ಘಟ್ಟಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಸುಮಾರು ೫೫ ತಾಲ್ಲೂಕುಗಳನ್ನು ಪಶ್ಚಿಮ ಘಟ್ಟದ ವ್ಯಾಪ್ತಿಯೊಳಗೆ ಒಳಪಡಿಸಬೇಕೆಂದು ಹೇಳಿದಾಗ ಕೇಂದ್ರ ಸರ್ಕಾರದವರು ಅದನ್ನು ಒಪ್ಪಿರಲಿಲ್ಲ. ಕೇವಲ ೨೮ ತಾಲ್ಲೂಕುಗಳಿಗೆ ಮಾತ್ರ ಅಂಗೀಕಾರ ಕೊಟ್ಟಿದ್ದರು. ಆದರೆ ನಾವು ಮತ್ತೆ ಅದರ ಬಗ್ಗೆ ಕೇಂದ್ರ ಸರ್ಕಾರದ ಮೊರೆಹೋಗಿ ಸುಮಾರು ೪೦ ತಾಲ್ಲೂಕುಗಳಲ್ಲಿ ಪಶ್ಚಿಮ ಘಟ್ಟದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಮತ್ತು ಇನ್ನುಳಿದ ತಾಲ್ಲೂಕುಗಳಿಗೂ ಅವರ ಅಂಗೀಕಾರ ಸಿಗುತ್ತದೆನ್ನುವ ವಿಶ್ವಾಸ ನಮಗಿದೆ. ಮೊನ್ನೆ ಮುಂಬಯಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಭೆಯಲ್ಲೂ ಕೂಡ ಇದಕ್ಕೆ ಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ನಿಗಮ ಆಗಬೇಕೆಂದು ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾ ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಮುಂದೆ ಸಲಹೆಗಳನ್ನು ಇಟ್ಟಿವೆ. ಇಲ್ಲಿಯವರೆಗೆ ಪಶ್ಚಿಮ ಘಟ್ಟದಲ್ಲಿ ಏನು ಕೆಲಸವಾಗಿದೆ ಅದು ಸಮರ್ಪಕವಾಗಿ ಆಗಿದೆ ಎನ್ನುವ ವಿಶ್ವಾಸ ನಮಗಿದೆ. ಇದಕ್ಕೆ ಕಾರಣ : ಅದಕ್ಕಾಗಿ ಒದಗಿಸಿರತಕ್ಕ ಹಣವನ್ನು ಪೂರ್ಣವಾಗಿ ಖರ್ಚು ಮಾಡಿದ್ದೇವೆ. ಪಶ್ಚಿಮ ಘಟ್ಟ ಯೋಜನೆಯಲ್ಲಿ ಇನ್ನೂ ಬೇರೆ ಬೇರೆ ತಾಲ್ಲೂಕುಗಳನ್ನು ಸೇರಿಸಬೇಕು; ಆರುನೂರು ಮೀಟರು ಎತ್ತರದಲ್ಲಿರುವ ಪ್ರದೇಶಗಳನ್ನೂ ಪಶ್ಚಿಮ ಘಟ್ಟದ ಯೋಜನೆಗೆ ಒಳಪಡಿಸಬೇಕೆಂಬ ವಾದವನ್ನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದೇವೆ. ಅದನ್ನವರು ಅಂಗೀಕರಿಸುವರೆಂದು ನಮಗೆ ವಿಶ್ವಾಸವಿದೆ.

ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಕೊಟ್ಟು ಕೈಗಾರಿಕಾಕರಣ ಜಾಸ್ತಿ ಮಾಡಿರುವಂತೆ ನಮ್ಮ ರಾಜ್ಯದಲ್ಲೂ ಮಾಡಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟರು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲು ನಾನು ಬಹಳ ಸಂತೋಷ ಪಡುತ್ತೇನೆ. Bureau of Economics and Statistics ಅವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿ ಈಗ ಸರ್ಕಾರದ ಪರಿಶೀಲನೆ ಹಂತದಲ್ಲಿದೆ. ಅದೇನಾದರೂ ಪೂರ್ಣವಾಗಿ ಅಂಗೀಕಾರವಾದದ್ದೇ ಆದರೆ ಇಡೀ ಕರ್ನಾಟಕ ರಾಜ್ಯದ ಗ್ರಾಮ ಗ್ರಾಮಗಳಲ್ಲೂ ಕೂಡ ಕೈಗಾರಿಕಾ ನಾಂದಿಯನ್ನು ಹಾಡತಕ್ಕ ಕಾಲ ಭಾರಿ ದೂರವಿಲ್ಲ; ಅತ್ಯಂತ ಸಮೀಪದಲ್ಲೇ ಕಾಣುತ್ತೇವೆ ಎನ್ನುವ ವಿಶ್ವಾಸವಿದೆ. ಈಗ ಪಶ್ಚಿಮ ಘಟ್ಟಗಳ ಯೋಜನೆಗೆ ಸುಮಾರು ಏಳು ಕೋಟಿ ರೂಪಾಯಿಗಳ ಹಣ ಬಂದಿದೆ. ಇದರ ಜೊತೆಗೆ ಇನ್ನೂ ಒಂದು ವಿಚಾರ ನಮಗಿದೆ. ಮುಂದೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ನಿಗಮ ಆದರೆ ಇನ್ನೂ ಹೆಚ್ಚಿನ ಹಣ ಸಿಗುತ್ತದೆನ್ನುವ ವಿಶ್ವಾಸವಿದೆ.

ಇನ್ನು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಉದ್ಯೋಗ ದೃಢೀಕರಣ ಯೋಜನೆ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಈಗಾಗಲೇ ಗ್ರಾಮೀಣ ಅಭಿವೃದ್ಧಿ ಸಚಿವರು ಉತ್ತರ ಕೊಟ್ಟಿರುವುದರಿಂದ ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇಡೀ ರಾಜ್ಯದಲ್ಲಿನ ಎಲ್ಲ ತಾಲ್ಲೂಕುಗಳಿಗೂ ಈ ಯೋಜನೆಯನ್ನು ವಿಸ್ತರಿಸಬೇಕೆಂದು ತೀರ್ಮಾನ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇವೆ.

ಮಾನ್ಯ ತಿಮ್ಮಪ್ಪ ಹೆಗಡೆಯವರು ಮಾತನಾಡುತ್ತಾ ಯೋಜನಾ ಇಲಾಖೆಗೆ ತಾಂತ್ರಿಕ ಜ್ಞಾನ ಮತ್ತು ಅರ್ಹತೆ ಇರುವವರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳಿದರು. ಇದೊಂದು ಒಳ್ಳೆಯ ಸಲಹೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ. ಶ್ರೀಮತಿ ಪ್ರಮಿಳಾ ಅವರು ಮಾತನಾಡುತ್ತಾ, ಶ್ರೀ ನಂಜುಂಡಪ್ಪನವರನ್ನು ಯೋಜನಾ ಇಲಾಖೆಯಿಂದ ವರ್ಗ ಮಾಡಿದಿರೆಂದು ಹೇಳಿದರು. ಅದಕ್ಕೆ ಶ್ರೀ ಆರ್ಮುಗಂ ಅವರು ಭಾಷಣ ಮಾಡುತ್ತಾ ಜವಾಬನ್ನು ಕೊಟ್ಟಿದ್ದಾರೆ. ಶ್ರೀ ನಂಜುಂಡಪ್ಪನವರು ಒಂದು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳಾಗಿ ಹೋಗಿದ್ದಾರೆ. ನಾವು ಅವರನ್ನು ತೆಗೆಯಬೇಕೆಂಬ ದೃಷ್ಟಿಯಿಂದ ತೆಗೆದಿಲ್ಲ. ವೈಯುಕ್ತಿಕ ಹಿತಾಸಕ್ತಿಯಿಂದ ತೆಗೆದಿಲ್ಲ ಅವರು ಒಳ್ಳೆಯ ಜಾಗಕ್ಕೆ ಹೋಗಿದ್ದಾರೆ. ಲಕ್ಷಾಂತರ ಜನ ನಾಗರೀಕರನ್ನು ನಿರ್ಮಾಣ ಮಾಡತಕ್ಕ ಜಾಗಕ್ಕೆ ಅವರು ಹೋಗಿದ್ದಾರೆ. ಅದಕ್ಕಾಗಿ ಅವರು ಸಂತೋಷಪಡುವುದರ ಬದಲು ಅಸಮಾಧಾನವನ್ನು ಏತಕ್ಕೆ ವ್ಯಕ್ತ ಮಾಡಿದರೋ ಗೊತ್ತಿಲ್ಲ.

ಯೋಜನಾ ಇಲಾಖೆ ಬಗ್ಗೆ ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಕೆಲವೇ ತಿಂಗಳುಗಳ ಹಿಂದೆ ಈ ಇಲಾಖೆಯನ್ನು ವಹಿಸಿಕೊಂಡಿದ್ದೇನೆ. ಯೋಜನೆಯನ್ನು ಹಾಕುವುದಷ್ಟೇ ಅಲ್ಲ, ಅದು ಸರಿಯಾಗಿ ಕಾರ್ಯಗತವಾಗಿದೆಯೋ ಅಥವಾ ಇಲ್ಲವೋ ಎಂದು ನೋಡುವ ಅವಕಾಶ ಯೋಜನಾ ಇಲಾಖಾಧಿಕಾರಿಗಳಿರಬೇಕು ಮತ್ತು ಸಂಬಂಧಪಟ್ಟ ಇಲಾಖಾಧಿಕಾರಿಗಳೊಡನೆ ಚರ್ಚೆ ಮಾಡಿ ಅದನ್ನು ತಿಳಿಯತಕ್ಕ ಅವಕಾಶವಿರಬೇಕೆಂದು ಪ್ರತಿಪಾದನೆ ಮಾಡತಕ್ಕವನು ನಾನು. ಯೋಜನೆಯನ್ನು ತಯಾರಿಸುವುದಷ್ಟೇ ಅಲ್ಲ, ಆ ಯೋಜನೆ ಕಾರ್ಯಗತವಾಗಿದ್ದರೆ ಸರಿಯಾಗಿ ಆಗಿದೆಯೆ; ಆಗದಿದ್ದರೆ ಏತಕ್ಕೆ ಆಗಲಿಲ್ಲ ಎನ್ನುವ ಬಗ್ಗೆ ಮಾಹಿತಿ ತರಿಸುವ ಮತ್ತು follow-up action ತೆಗೆದುಕೊಳ್ಳತಕ್ಕ ಕಾರ್ಯಕ್ರಮವನ್ನು ಯೋಜನಾ ಇಲಾಖೆ ಹಾಕಿಕೊಳ್ಳಬೇಕೆಂಬ ಇಚ್ಛೆ ನನಗಿದೆ.

ಯೋಜನಾ ಇಲಾಖೆ ಬಗ್ಗೆ ಇಷ್ಟು ಹೇಳಿ, ಇನ್ನು ವಕ್ಫ್ ಬೋರ್ಡ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ವಕ್ಫ್ ಬೋರ್ಡ್‌ನಷ್ಟು ಜಟಿಲವಾದ ಬೋರ್ಡ್ ಕರ್ನಾಟಕ ರಾಜ್ಯದಲ್ಲಿ ಮತ್ತೊಂದಿಲ್ಲ. ಇದು ಭಾರಿ ಸೂಕ್ಷ್ಮವಾದ ಜಾಗ. ಇವತ್ತು ನ್ಯಾಯಾಲಯಕ್ಕೆ ಹೋಗಿದ್ದಾರೆ. ಕಾರಣ : ನಿಮ್ಮ ಮೇಲೆ ಏನು ಆರೋಪವಿದೆ, ಅದಕ್ಕೆ ಉತ್ತರ ಕೊಡಿ ಎಂದು ಕೇಳಿದ್ದು. ಶ್ರೀ ಖಮರುಲ್ ಇಸ್ಲಾಂ ಅವರು ಹೇಳಿದ ಹಾಗೆ ಇದೇ ಮುಸ್ಲಿಂ ಜನಾಂಗದ ದುರ್ದೈವ. ಇದರಲ್ಲೂ ಕೂಡ ಅನೇಕ ಫ್ಯಾಸಿಸ್ಟ್ ಶಕ್ತಿಗಳಿವೆ. ಇದರಲ್ಲಿರುವವರೆಲ್ಲ ಪವಿತ್ರವಂತರು, ನೇರವಾಗಿ ಇಳಿದು ಬಂದಿರುವವರೆಂದು ಮಾನ್ಯ ಚಂದ್ರಶೇಖರ್ ಅವರೇನೂ ತಿಳಿದುಕೊಳ್ಳುವುದು ಬೇಡ. ಇವತ್ತು ವಕ್ಫ್ ಬೋರ್ಡಿನಲ್ಲಿ ಹಾನಿಯಾಗಿದ್ದರೆ ಅದು ಬೇರೆ ಸಮಾಜದಿಂದಲ್ಲ; ನಮ್ಮ ಸಮಾಜದಿಂದಲೇ ಜಾಸ್ತಿ ಹಾನಿಯಾಗಿದೆ. ಶ್ರೀ ಖಮರುಲ್ ಇಸ್ಲಾಂ ಅವರು ಹೇಳಿದ ಹಾಗೆ ಅಲ್ಲಿದ್ದ ಬೆಳ್ಳಿ, ಬಂಗಾರ, ಜಮೀನು–

ಎಲ್ಲ ಮಾರುವುದರಿಂದ ಹಿಡಿದು ಏನೆಲ್ಲ ಮಾಡಿದ್ದಾರೆ. ಇವತ್ತು ಅದನ್ನು ಒಬ್ಬ ವ್ಯಕ್ತಿ ಕೈಯಿಂದ ತೆಗೆದು ಸಾಮಾನ್ಯ ಬಡ ಮುಸ್ಲಿಂರಿಗೆ ಹಂಚುತ್ತಾರೆ ಎನ್ನುವ ಒಂದೇ ಒಂದು ಭಯ ಮತ್ತು ಆಸ್ತಿ ಅವರ ಕೈಯಿಂದ ಹೋಗುತ್ತದಲ್ಲ ಎನ್ನುವ ವೇದನೆ ಪ್ರಾರಂಭವಾಗಿದೆ. ಆದರೂ ಕೂಡ ಸಾಮಾಜಿಕ/ಪರಿವರ್ತನೆಯನ್ನು ವಕ್ಫ್ ಬೋರ್ಡ್ ಮುಖಾಂತರ ಮುಸ್ಲಿಂ ಜನಾಂಗದಲ್ಲಿ ತರಬೇಕೆಂಬ ಇಚ್ಛೆ ನನಗಿದೆ. ಅವನ್ನು ತರುವುದಕ್ಕೆ ತಯಾರಾಗಿದ್ದಾನೆ. ನಾನೊಬ್ಬನೇ ದೊಡ್ಡವನು, ಇನ್ನುಳಿದವರೆಲ್ಲ ಜೀತದಾಳುಗಳಾಗಿರಬೇಕೆಂಬ ಭಾವನೆಗೆ ಇಸ್ಲಾಂ ಧರ್ಮದಲ್ಲಿ ಅವಕಾಶವಿಲ್ಲ. ಅವರು ಸಜ್ಜನರು, ಮುಟ್ಟಿದರೆ ಸಾಕು ಸ್ವರ್ಗಕ್ಕೆ ಹೋಗುತ್ತೇವೆ ಎಂದು ನಾವೆಲ್ಲ ತಿಳಿದುಕೊಂಡು ಬಿಟ್ಟಿದ್ದೇವೆ. ಅದು ತಪ್ಪು. ನಾವು ಮಾಡಿದ ಪಾಪ ಪುಣ್ಯ ಮತ್ತು ನಮ್ಮ ಹೃದಯ ಚೆನ್ನಾಗಿದ್ದರೆ ನಾವು ಸ್ವರ್ಗಕ್ಕೆ ಹೋಗುತ್ತೇವೆಯೇ ಹೊರತು ನಮ್ಮನ್ನು ಯಾರಾದರೂ ಮುಟ್ಟುವುದರಿಂದಲೇ ಸ್ವರ್ಗಕ್ಕೆ ಕಳುಹಿಸುವ ಹಾಗಿದ್ದರೆ ಅವರು ಒಂದು ಸಗಟು ದುಕಾನನ್ನೇ ಇಟ್ಟುಬಿಟ್ಟು, ಇಷ್ಟು ಕೊಟ್ಟು (ಹಣವನ್ನು) ಚೀಟಿ ತೆಗೆದುಕೊಂಡು ಹೋಗುತ್ತಾ ಇರಿ ಎಂದು ಹೇಳುತ್ತಿದ್ದರು! ಇದರ ವಿರುದ್ಧ ನಾವು ಇಂದು ಹೋರಾಟ ಮಾಡಬೇಕಾಗಿದೆ. ಶ್ರೀ ಖುಮರಲ್ ಇಸ್ಲಾಂ ಅವರು ಹೇಳಿದ ಹಾಗೆ ರಾಜ್ಯದಲ್ಲಿ ಹತ್ತೊಂಬತ್ತು ಸಾವಿರ ವಕ್ಫ್ ಸಂಸ್ಥೆಗಳಿವೆ. ಇಲ್ಲಿ ಶೇಕಡ ೬ ರಷ್ಟು ವಸೂಲಾತಿ ಇಲ್ಲವೇ ಇಲ್ಲ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯವರು ಈಗಾಗಲೇ ಇದರ ಬಗ್ಗೆ ಕಾಮೆಂಟ್ ಮಾಡಿದ್ದಾರೆ. ಆ ಹಣವನ್ನು ವಸೂಲ್ಮಾಡಲು ಸಾಧ್ಯವಾಗಿಲ್ಲ. ಸಂತೋಷದ ಒಂದು ಸಂಗತಿ ಏನೆಂದರೆ. ಈಗ ಹೊಸದಾಗಿ ಒಬ್ಬ ಕಾರ್ಯದರ್ಶಿಯನ್ನು ವಕ್ಫ್ ಬೋರ್ಡಿಗೆ ನೇಮಿಸಿದ್ದೇವೆ. ನಿಮಗೆ ಆಶ್ಚರ್ಯವಾಗಬಹುದು—ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮುಸ್ಲಿಂ ಜಾಗದ ಮೇಲೆ ಅವರು ಕುಳಿತಿದ್ದಾರೆ. ಅದಕ್ಕೆ ಬಾಡಿಗೆ ಎಷ್ಟು ಕೊಡುತ್ತಿದ್ದಾರೆ? ಎರಡು ರೂಪಾಯಿ! ಮೂರು ರೂಪಾಯಿ! They are the richest people in our country. Tney are enjoying properties worth crores of rupees. They have 200 and 400 acres. How much they are giving? Rs. 10 per month. Because they are muslims they are enjoying. Poor muslims won't get a single site. ಇದನ್ನು ನಾವು ಹೇಳುವುದಕ್ಕೆ ಹೋದರೆ ಇಬ್ರಾಹಿಂ ಸಾಹೇಬರು ಮುಸ್ಲಿಂ ಧರ್ಮದ ವಿರುದ್ಧವಾಗಿ ಹೋಗುತ್ತಾರೆಂದು ಹೇಳುತ್ತಾರೆ. ಅದಕ್ಕಾಗಿಯೇ ನಾನೀಗ ಸುರಪುರದ ವಿಚಾರಕ್ಕೆ ಬರುತ್ತಿದ್ದೇನೆ. ಹಿಂದಿನ ಸರ್ಕಾರ ಒಂದು ಆಜ್ಞೆ ಮಾಡಿತ್ತು. ಸುರಪುರದಲ್ಲಿ ಹಿಂದೆ ಮಸೀದಿ ಇದ್ದ ಜಾಗದಲ್ಲಿ ಸರ್‌ದಾರ್ ವಲ್ಲಭಭಾಯಿ ಪಟೇಲರ ಪ್ರತಿಮೆ ಇದೆ. ಐದು ಲಕ್ಷ ರೂಪಾಯಿ ಕೊಡುತ್ತೇವೆ, ಅದನ್ನು ಬೇರೆ ಜಾಗದಲ್ಲಿ ಕಟ್ಟಿರೆಂದು ಹೇಳಿದರು. ಇದನ್ನು ಆ ಕ್ಷೇತ್ರದ ಶಾಸಕರಾದ ಶ್ರೀ ಕುಮಾರ ನಾಯಕ ಅವರು ಬಂದು ಹಿಂದಿನ ಸರ್ಕಾರ ಮಾಡಿರತಕ್ಕದ್ದು ಸರಿಯಲ್ಲ. ಇದನ್ನು ತಾವು ವಿಮರ್ಶೆ ಮಾಡಿ ಬೇರೆ ಜಾಗದಲ್ಲಿ ಮಸೀದಿ ಕಟ್ಟುವುದಕ್ಕೆ ಜಾಗ ಕೊಡಿ, ಸಾಧ್ಯವಾದರೆ ಪ್ರತಿಮೆ ಪಕ್ಕದಲ್ಲಿ ಕೊಡಿ ಎಂದು ಹೇಳಿದರು. ಆಗ ನಾನು ವಿಚಾರಮಾಡಿ ಎಂದು ಕುಮಾರ ನಾಯಕ್ ಅವರಿಗೆ ಹೇಳಿದೆ. ಅವರು ಪತ್ರ ಬರೆದರು, ಮೂರು ಸಲ ಬಂದರು. ನಾನು ತಾಲ್ಲೂಕಿನ ಶಾಸಕನಿದ್ದೇನೆ, ಮಾಡ್ತಿರೋ ಇಲ್ಲವೋ ಎಂದು ಹೇಳಿದರು. ನಂತರ ಈ ವಿಷಯವನ್ನು ಮಂತ್ರಿ ಮಂಡಲದ ಸಭೆಯಲ್ಲಿಟ್ಟು ಒಂದು ತೀರ್ಮಾನ ತೆಗೆದುಕೊಂಡೆ.

೬-೩೦ ಪಿ. ಎಂ.

೧೯೮೧-೮೨ನೇ ಸಾಲಿನಲ್ಲಿ ಇನ್ನೂ ಮೂರು ಜಿಲ್ಲೆಗಳಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ವಿಸ್ತರಿಸಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಬಳ್ಳಾರಿ, ಕೊಡಗು, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ ಮತ್ತು ಬೆಂಗಳೂರು ಈ ಆರು ಜಿಲ್ಲೆಗಳಲ್ಲಿ ಇಂದು ಜಿಲ್ಲಾ ಕೈಗಾರಿಕಾ ಕೇಂದ್ರಗಳಿಲ್ಲ. ಇವುಗಳಲ್ಲಿ ಮೂರು ಜಿಲ್ಲೆಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಮಾಡಲಾಗುವುದು. ಇನ್ನುಳಿದ ಮೂರು ಜಿಲ್ಲೆಗಳಿಗೆ ೧೯೮೨-೮೩ನೇ ಸಾಲಿನಲ್ಲಿ ಈ ಯೋಜನೆಯನ್ನು ವಿಸ್ತರಿಸಬೇಕೆಂದು ಅಂದಾಜಿದೆ. ಇದರ ಬಗ್ಗೆ ಕೆಲವು ಸದಸ್ಯರು ಪ್ರಸ್ತಾಪ ಮಾಡುತ್ತಾರೆಂದು ನಾನು ನಿರೀಕ್ಷಿಸಿದ್ದೆ. In the budget we have provided two schemes to be executed by the District Centres, ಸುಮಾರು ಐದು ಲಕ್ಷ ರೂಪಾಯಿಗಳ Interest subsidy for artisans ಯೋಜನೆಯನ್ನು ಡಿ.ಐ.ಸಿ ಯವರು ಮಾಡಬೇಕು; ಸುಮಾರು ಹತ್ತು ಲಕ್ಷ ರೂಪಾಯಿಗಳ self-employment

ಯೋಜನೆಯನ್ನು ಡಿ.ಐ.ಸಿ. ಮೂಲಕ ಮಾಡಬೇಕು. ಏಕೆಂದರೆ, ಕೇಂದ್ರ ಸರ್ಕಾರದವರು scheme-wise sanction ಕೇವಲ ಐವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಅದು ಸಾಕಾಗುವುದಿಲ್ಲ. ಅದಕ್ಕೆ ಹೆಚ್ಚು ಹಣದ ಪೂರೈಕೆ ಮಾಡಬೇಕೆಂದು ಹೊಸ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ.

ಇನ್ನು, ಕೈಗಾರಿಕಾ ನೀತಿಯಲ್ಲಿ ಒಂದು ರೀತಿಯಾದ ಪ್ರಚೋದನೆ ಮಾಡಬೇಕೆಂದು ಕೆಲವು ಸದಸ್ಯರು ಹೇಳಿದರು. ಮತ್ತು ಹೊಸೂರಿನಲ್ಲಿರುವಂತೆ Industrial complex ಮಾಡಿ, ಎಲ್ಲ ರೀತಿಯ ಸವಲತ್ತುಗಳನ್ನೂ ಕೊಡಬೇಕೆಂದು ಹೇಳಿದರು. ಈಗಾಗಲೇ ದೊಡ್ಡಬಳ್ಳಾಪುರ ಮತ್ತು ರಾಮನಗರದಲ್ಲಿ, ಹೊಸೂರು ಮತ್ತು SHIPCOT ಮಾದರಿಯಲ್ಲಿ KSIDC ಮುಖಾಂತರ Industrial complex ಅನ್ನು ನಿರ್ಮಿಸಲು ಉದ್ದೇಶಿಸಿದೆ. ಜೊತೆಗೆ ಇದನ್ನು ದೊಡ್ಡಬಳ್ಳಾಪುರ ಮತ್ತು ರಾಮನಗರಕ್ಕೆ ಮಾತ್ರ ಸೀಮಿತಗೊಳಿಸದೆ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶಗಳಿಗೂ ವಿಸ್ತರಿಸ ಬೇಕೆಂದು ನಮ್ಮ ಸರ್ಕಾರದ ಅಂದಾಜಿದೆ.

SRI H. D. DEVE GOWDA.—Single window clearance ತರುತ್ತೇವೆ ಎಂದು ತಾವು ಹೇಳಿದರು. Is it in the form of SHIPCOT and on those lines?

SRI M. VEERAPPA MOILY.—Not only on the same line, but also there will be some improvement.

ಶ್ರೀ ಹೆಚ್. ಡಿ. ದೇವೇಗೌಡ.—ದೊಡ್ಡಬಳ್ಳಾಪುರ ಮತ್ತು ರಾಮನಗರದಲ್ಲಿ KSIDC ಮುಖಾಂತರ Industrial complex ಮಾಡಲಾಗುವುದೆಂದು ಹೇಳಿದಿರಿ. SHIPCORT ಏನು ಮಾಡುತ್ತಿದೆಯೋ ಆ ಮಾರ್ಗದಲ್ಲಿ ಇದು ಕೆಲಸ ಮಾಡುತ್ತಿಲ್ಲ. ಇದರ ಕೆಲಸ ಕಾರ್ಯಗಳೇ ಬೇರೆ ಇದೆ. ಆದುದರಿಂದ, ಅದಕ್ಕಿರುವ ಅಧಿಕಾರಿಗಳನ್ನು ಇದಕ್ಕೂ ಕೊಟ್ಟು ಕೆಲಸಕಾರ್ಯಗಳನ್ನು ಮಾಡಿಸುವ ಉದ್ದೇಶ ವಿದೆಯೆ?

SRI M. VEERAPPA MOILY.—That is our idea.

ಇನ್ನು ಮಾನ್ಯ ಸದಸ್ಯರಾದ ಶ್ರೀ ಭಾಸ್ಕರ ನಾಯಿಡು ಅವರು ವಿಜಯನಗರ ಉಕ್ಕಿನ ಕಾರ್ಖಾನೆ ಕುರಿತು ಮಾತನಾಡಿದರು. ಇದು ಕೇಂದ್ರ ಸರ್ಕಾರಕ್ಕೆ ಸೀಮಿತವಾದ ವಿಚಾರವಾಗಿದ್ದರೂ ಕೂಡ ನಾವು ಭಾವನಾತ್ಮಕ ಮತ್ತು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಇದಕ್ಕೆ ಹೆಚ್ಚು ಹೊಂದಿಕೊಂಡಿದ್ದೇವೆ. ಪ್ರತಿ ಆಯವ್ಯಯ ಭಾಷಣದಲ್ಲೂ ನಾವಿದನ್ನು ಪ್ರಸ್ತಾಪ ಮಾಡುತ್ತಾ ಇರುತ್ತೇವೆ. ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಮತ್ತು ನಾವೆಲ್ಲ ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರವನ್ನು ಅಭಿನಂದನೆ ಮಾಡಿದ್ದು ಉಂಟು. ಮತ್ತು ಅದೇ ಹೊತ್ತಿಗೆ ಒಂದು ರೀತಿಯ ಟೀಕೆ ಕೂಡ ಬಂದಿತ್ತು. ಆದರೂ ನಾವು ಈ ವಿಚಾರವನ್ನು ಕೈಬಿಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಸಂದರ್ಭ ಸಿಕ್ಕಿದಾಗಲೆಲ್ಲ ಪ್ರಧಾನ ಮಂತ್ರಿ ಯವರೊಂದಿಗೆ ಮತ್ತು ಕೇಂದ್ರದ ಉಕ್ಕು ಸಚಿವರಾದ ಶ್ರೀ ಪಣಬ್ ಕುಮಾರ್ ಮುಖರ್ಜಿಯವರೊಂದಿಗೆ ಮಾತುಕತೆ ನಡೆಸುತ್ತಾ ಬಂದಿದ್ದರು. ಒಂದು ಸಂತೋಷದ ವಿಚಾರವನ್ನು ನಾನು ಈ ದಿವಸ ಪ್ರಕಟ ಮಾಡಲು ಇಚ್ಛಿಸುತ್ತೇನೆ. The Steel Authority of India Limited, on the basis of the Mecon Report, has approved the Vijayanagar Plant in its last Board Meething. ನಿನ್ನೆ ತಾನೇ ಶ್ರೀ ಪ್ರಣಬ್ ಕುಮಾರ್ ಮುಖರ್ಜಿಯವರು ದೂರವಾಣಿಯಲ್ಲಿ ಸಂಪರ್ಕಿಸಿ ಈ ಸಂತೋಷದ ವಿಚಾರವನ್ನು ಹೇಳಿದ್ದಾರೆ. ನಂತರ ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾ ರಸ್ಸು ಮಾಡಿ ಕಳುಹಿಸಿದ್ದಾರೆ. ಆದುದರಿಂದ, ತಾಂತ್ರಿಕವಾಗಿ ಇದಕ್ಕೆ ಯಾವ ರೀತಿ ಏನೂ ಆಗುವುದಿಲ್ಲ ವೆನ್ನುವ ಮಾತು ನಮ್ಮಲ್ಲಿ ಆಶಾಕಿರಣ ಹುಟ್ಟಿಸಿರುವುದು ಮಾತ್ರವಲ್ಲದೆ ಮುಂದಿನ ಆಯವ್ಯಯ ಭಾಷಣ ಮಾಡುವಾಗ ಕೇಂದ್ರ ಸರ್ಕಾರವನ್ನು ಅಭಿನಂದಿಸತಕ್ಕ ಪ್ರಮೇಯ ಖಂಡಿತ ಬರುವುದರಲ್ಲಿ ಯಾವ ಅನು ಮಾನವೂ ಉಳಿದಿಲ್ಲ. I think Vijayanagar Steel Plant will be a unique plant in South India, with a capacity of 3 million tonnes per annum. It can generate direct employment to 22,000 people and indirect employement to 70,000 to 80,000 people. This will be an integrated

steel plant and a great boon to this country I will rather say, to South India. ಆದುದರಿಂದ, ಇದು ಖಂಡಿತವಾಗಿಯೂ ಮೆಚ್ಚತಕ್ಕ ವಿಚಾರ. ಉಕ್ಕು ಮಂಡಲಿಯಿಂದ ಬಂದಿರುವ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಮನ್ನಣೆ ಮಾಡಿದರೆ ಕನಸಿನ ಗಂಟೆಂದು ಹೇಳುತ್ತಿದ್ದ ವಿಜಯನಗರ ಉಕ್ಕಿನ ಕಾರ್ಖಾನೆ ಇನ್ನು ಕೆಲವೇ ತಿಂಗಳಲ್ಲಿ ನನಸಾಗಿ ಕರ್ನಾಟಕ ರಾಜ್ಯದ ಜನತೆಗೆ ಇದೊಂದು ವರವಾಗಿ ಪರಿಣಮಿಸುತ್ತದೆ ಎನ್ನುವುದರಲ್ಲಿ ನನಗಂತೂ ಅನುಮಾನ ಉಳಿದಿಲ್ಲ. ಮಾನ್ಯ ಸದಸ್ಯರುಗಳಿಗೂ ಕೂಡ ಖಂಡಿತ ಅನುಮಾನವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ತೆಗೆದುಕೊಂಡ ಮೇಲೆ ಜನರ ಭಿನ್ನಾಭಿಪ್ರಾಯ ಅಲ್ಲಿ ಬಂತು. ಅದು ಆದಮೇಲೆ ಮತ್ತೆ ಕೆಲವರು ಇಲ್ಲ ಅದು ಸಾಧ್ಯವಿಲ್ಲ ಅಂತ ಹೇಳಿದಾಗ ಕೂಡಲೇ ನಾವು ಮುಖ್ಯಮಂತ್ರಿಗಳು ಚರ್ಚೆ ಮಾಡಿದೆವು. ಒಂದು ಪ್ರಶ್ನೆಗೆ ಅಲ್ಲಿ ಘರ್ಷಣೆ ಬರತಕ್ಕಂಥಾದ್ದಕ್ಕೆ ಅವಕಾಶ ಕೊಡಬಾರದು ಶಾಶಕರು ಏನು ಹೇಳಿದ್ದಾರೆ ಮತ್ತೆ ಶಾಸಕರಿಗೆ ಸಂಬಂಧಪಡದೇ ಇರತಕ್ಕವರು ಏನು ಹೇಳಿದ್ದಾರೆ ಅದನ್ನು ತಿಳಿದು ನಾವು ಈ ಆರ್ಡರನ್ನು ಸ್ಟೇ ಮಾಡೋಣ. ಸ್ಥಳಕ್ಕೆ ಹೋಗಿ ಎಲ್ಲಾ ಗುಂಪು, ಜಾತಿ, ಜನಾಂಗದವರನ್ನು ಕರೆದು ಈ ಊರಿಗೆ ಯಾವುದು ಹಿತ ಇದೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ ಅದರಲ್ಲಿ ಶಾಸಕರನ್ನು ಕರೆಸಿ, ಸ್ಥಳೀಯ ಮತ್ತು ಲೋಕಲ್ ಮುಸಲ್ಮಾನರು ಏನಿದ್ದಾರೆ, ಹಿಂದೂಗಳು ಏನಿದ್ದಾರೆ, ಬೇರೆ ಗುಂಪಿನವರು ಏನಿದ್ದಾರೆ, ಶಾಸಕರನ್ನು ಕರೆಸೋಣ ಈ ಊರಿಗೆ ಏನು ವಾತವರಣ ಹಿತ ಆಗುತ್ತದೆ ಅದರಂತೆ ನಾವು ನಿರ್ಣಯ ತೆಗೆದುಕೊಳ್ಳೋಣ ಅಂಥ ನಿಲ್ಲಿಸಿದೆವು. ಆದರ ಮೇಲೆ ಈ ಉಭಯೇತರರು ಕೂಡ ಅಲ್ಲಿ ಸಂತೋಷವಾಗಿದ್ದಾರೆ. ನಾವು ಹೇಳಿದ್ದೇವೆ ನಾವೇ ಅಲ್ಲಿಗೆ ಒಂದು ಸಾರಿ ಬರುತ್ತೇವೆ, ಅಲ್ಲಿ ಶಾಸಕರು ಇರುತ್ತಾರೆ, ಮತ್ತು ತಾಲ್ಲೂಕು ಮುಖಂಡರುಗಳು ಇರುತ್ತಾರೆ ಬೇಕಾದರೆ ಆ ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಮುಖಂಡರುಗಳನ್ನು ಕರೆಸೋಣ. ಅಧ್ಯಕ್ಷರೆ ಅಲ್ಲಿ ಒಂದು ಏನಾಗುತ್ತದೆ ಎಂದರೆ, ಹಿಂದೆ ಸರ್ಕಾರ ಮಾಡಿರತಕ್ಕಂತಾದ್ದು ತಪ್ಪು ಎಂದು ಹೇಳಿದರೆ ನಮ್ಮಲ್ಲಿ ಒಂದು ಏನು ಇದೆ ಒಂದು ಮಸೀದಿ ಇದೆ ಅದನ್ನು ಒಡೆದು ಹಾಕಿದರೆ ದೇವರ ಹೆಸರಿನ ಮೇಲೆ ಬಿಟ್ಟುಬಿಡಬಹುದು ಅದನ್ನು. ಆದರೆ ಒಡೆದು ಹೋದಂಥ ಮಸೀದಿಯ ಕಾಂಪನೆಸೇಷನ್ ತೆಗೆದುಕೊಳ್ಳುವ ಹಾಗೆ ಇಲ್ಲ. ಅವರಲ್ಲಿ ಪೂರ್ಣವಾದ ನಿಬಂಧನೆ ಇದೆ. ಮಸೀದಿ ಬೇಡ ಅಂದರೆ ಅದನ್ನು ಬಿಟ್ಟುಬಿಡಬಹುದು. ಆದರೆ ಮಸೀದಿ ಒಡೆದು ಹಾಕಲಾಗಿದೆ ಎಂದು ಅದರ ಕಾಂಪನ್‌ಸೇಷನ್ ತೆಗೆದುಕೊಂಡು ಬೇರೆ ಮಸೀದಿಯನ್ನು ನಾವು ನಿರ್ಮಾಣ ಮಾಡಲಿಕ್ಕೆ ಇಸ್ಲಾಂ ಧರ್ಮದಲ್ಲಿ ಅವಕಾಶ ಇಲ್ಲ. ಅದಕ್ಕೆ ನಾವು ಹೇಳುತ್ತೇವೆ ಬೇಕಾದರೆ ಇದನ್ನು ಬಿಡೋಣ ಅಲ್ಲಿ ಹೊರಗಡೆ ಇರತಕ್ಕಂಥ ಆಲೀಮ್‌ಗಳು ಏನಿದ್ದರು ಅವರ ಹತ್ತಿರ ಪತ್ರ ನಾವು ತರಿಸಿಕೊಂಡೆವು. ಅವರು ಕೂಡ ಒಪಿನಿಯನ್ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಕಮರುಲ್ ಇಸ್ಲಾಮ್ ಕೂಡ ಅದನ್ನೇ ಹೇಳಿದರು. ಈ ಒಂದು ಕೆಲಸ ಮಾಡತಕ್ಕ ಸಂದರ್ಭದಲ್ಲಿ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಮಾನ್ಯ ಸದಸ್ಯರಾದಂಥ ಚಂದ್ರಶೇಖರ್ ಅವರು ಬರೀಯಲ್ ಗ್ರೌಂಡ್ಸ್ ಬಗ್ಗೆ ಹೇಳಿದ್ದಾರೆ. ಅಧ್ಯಕ್ಷರೆ ಅದು ಮಸೀದಿ ಇರಲಿ ದೇವಸ್ಥಾನ ಇರಲಿ, ಚರ್ಚೇ ಇರಲಿ, ಯಾವುದೇ ಒಂದು ಪ್ರಾರ್ಥನಾ ಗೃಹ ಇರಲಿ, ಅದಕ್ಕೆ ನಾವು ಸಮಾನವಾದ ಗೌರವವನ್ನು ಕೊಟ್ಟು ನೋಡತಕ್ಕದ್ದು ಮಾನವನ ಕರ್ತವ್ಯ. ಬಹುತೇಕವಾಗಿ ನನಗೆ ವಕ್ಫ್‌ಗಿಂತಲೂ ಮುಜರಾಯಿ ಖಾತೆ ತೆಗೆದುಕೊಳ್ಳಬೇಕು ಅಂತ ಭಾರಿ ಇಷ್ಟ ಇತ್ತು. ನಾನೇನಾದರೂ ಮುಜರಾಯಿ ತೆಗೆದುಕೊಂಡಿದ್ದರೆ ನಾನು ಫಸ್ಟ್ ಪ್ರಪೋಸಲ್ ಏನು ಕೊಡುತ್ತಿದ್ದೆ ಎಂದರೆ ಅಲ್ಲಿರತಕ್ಕಂಥ ಅರ್ಚಕರ ಸಂಬಳ ಏನಿದೆ ಅದನ್ನು ಸುಧಾರಣೆ ಮಾಡಲಿಕ್ಕೆ ಹೇಳುತ್ತಿದೆ. ಮಾನ್ಯ ಮಂತ್ರಿಗಳಾದ ಸುದೀಂದ್ರರಾವ್ ಕಸಬೆಯವರು ಜಾಸ್ತಿ ಮಾಡಿಸಿದ್ದಾರೆ. ಅಧ್ಯಕ್ಷರೆ, ಇವೊತ್ತು ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ಹಣವನ್ನು ಈ ಧರ್ಮಕ್ಕೆ ಸೇರಿಸತಕ್ಕಂತಾದ್ದನ್ನು ಕೆಲವು ಜನ ಕೂತುಕೊಂಡು ವಶಜಾಮಾಡಿಕೊಂಡು ಅನುಭವಿಸಿಕೊಂಡು ಬಂದಿದ್ದಾರೆ ಅನೇಕ ವರ್ಷಗಳಿಂದ. ನಾವು ಇದಕ್ಕೆ ಕೂಡಲೇ ಕೈ ಹಾಕಲಿಕ್ಕೆ ಹೋದರೆ ಅವರು ಮನಸ್ಸಿಗೆ ನೋವಾಗುತ್ತದೆ. ನಮಗೆ ಬರತಕ್ಕ ಇನ್‌ಕಂ, ಅಸೆಟ್ಸ್, ಎಳೆದು ಕೊಳ್ಳುತ್ತಿದ್ದಾರೆ, ಇದನ್ನು ತೆಗೆದುಕೊಂಡು ಸ್ಕೂಲುಗಳನ್ನು ಮಾಡಿ, ಆಸ್ಪತ್ರೆಗಳನ್ನು ಮಾಡಿ ಅಂತ ಹೇಳುತ್ತಿದ್ದಾರೆ. ಏನಾದರೂ ಮಾಡಿ ಇದನ್ನು ಆಗದೇ ಇರುವ ರೀತಿ ಮಾಡಬೇಕೆಂದು ಪ್ರಯತ್ನಗಳು ಸತತವಾಗಿ ನಡೆಯುತ್ತಿವೆ. ಇನ್ನು ಶ್ರೀಮಾನ್ ಚಂದ್ರಶೇಖರ್ ಅವರು ಹೇಳಿದ ಹಾಗೆ ಅಲ್ಲಿ ಒಂದು ಬರಿಯಲ್ ಗ್ರೌಂಡ್ ಇತ್ತು. ರೋಡಿಗೆ ಜಾಗ ಬೇಕು ಅಂಥ ಹೇಳಿದಾಗ ಅದನ್ನು ಅವರು ವಿರೋಧ ಮಾಡಿದರೆ ತಪ್ಪು. ರೋಡಿಗೆ ಜಾಗ ಬೇಕಾಗಿದ್ದರೆ ಬಹುತೇಕವಾಗಿ ಅದನ್ನು ಆಗಲೇ ವಕ್ಫ್ ಬೋರ್ಡ್ ಸೆಕ್ರೆಟರಿಗೆ ಹೇಳಿದೆ.

ಜಯನಗರದ ಕಾಂಪ್ಲೆಕ್ಸ್‌ನಲ್ಲಿ ಅಲ್ಲಿ ಜಾಗ ಸಣ್ಣದು ಇದೆ ನಿಜ. ೩-೪ ಸಾವಿರ ಜನ ಬಂದು ಅಡ್ಡಿಪಡಿಸು ತ್ತಾರೆ ಅಂತ ಹೇಳಿದರೆ ಕಾನೂನು ಇದೆ, ಲಾ ಅಂಡ್ ಆರ್ಡರ್ ಇದೆ.

ಶ್ರೀ ಎಂ. ಚಂದ್ರಶೇಖರ್.—ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇದು ಸೂಕ್ಷ್ಮವಾದ ಡೆಲಿಕೇಟ್ ಇಷ್ಯು. ಇದು ಏನಾಗುತ್ತದೆ ಸಾವಿರಾರು ಜನ ಬಂದಾಗ ಏನಾಗುತ್ತದೆ ಎಂದರೆ ಅಲ್ಪಸಂಖ್ಯಾತರ ಮೇಲೆ ಏನಾದರೂ ಆಯಿತು ಅಂದರೆ ಆ ವಿಚಾರವೇ ಬೇರೆ ಆಗುತ್ತದೆ. ಅದೇ ಬಹುಸಂಖ್ಯಾತರಿಗೆ ಏನಾದರೂ ತೊಂದರೆ ಆಯಿತು ಅಂದರೆ ಅದೇ ಬೇರೆ ಆಗುತ್ತದೆ. ಅದಕ್ಕೆ ಅಧಿಕಾರಿಗಳು ಭಯ ಬೀಳುತ್ತಾರೆ. ಅದಕ್ಕೆ ಏನಿದ್ದರೂ ಸಪೋರ್ಟ್ ನಿಮ್ಮಿಂದ ಬರಬೇಕು. ಪೊಲಿಟಿಕಲ್‌ನಿಂದಲೂ ಬರಬೇಕು, ಯಾರು ಸಮಾಜದ ಲೀಡರ್ಸ್ ಇರುತ್ತಾರೆ ಅವರಿಂದಲೂ ಸಪೋರ್ಟ್ ಸಿಕ್ಕುತ್ತದೆ ಎಂದರೆ ಆಗ ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುತ್ತಾರೆ.

ಶ್ರೀ ಸಿ. ಎಂ. ಇಬ್ರಾಹಿಂ.—ಅಧ್ಯಕ್ಷರೆ, ಇವೊತ್ತು ಸಾರ್ವಜನಿಕರಿಗೆ ಒಳ್ಳೆಯದಾಗುತ್ತದೆ ಎಂದರೆ ಸಮಾಜ ಕೂಡ ಕೆಲವು ಸಂದರ್ಭಗಳಲ್ಲಿ ತ್ಯಾಗ ಮಾಡಲಿಕ್ಕೆ ಮುಂದೆಬರಬೇಕಾಗುತ್ತದೆ. ರೋಡಿಗೆ ಖಾಲಿ ಜಾಗ ಇದೆ ಅದನ್ನು ಬಿಟ್ಟುಕೊಡಿ ಅನ್ನುವುದರಲ್ಲಿ ಏನೂ ಉದ್ರೇಕವಾಗುವಂಥ ಪ್ರಶ್ನೆ ಇಲ್ಲ ಅದು ಸರ್ಕಾರಕ್ಕೆ ಸೇರಿದ್ದರೆ ಸರ್ಕಾರ ಯಾರದು. ಬಹುತೇಕವಾಗಿ ವಕ್ಫ್‌ಗೆ ಸೇರಿರಲಿ, ಸರ್ಕಾರಕ್ಕೆ ಸೇರಿರಲಿ ವಿ ಹ್ಯಾವ್ ಟು ಕೋ ಅಪರೇಟ್. ಇವೊತ್ತಿನ ದಿವಸ ನಾವು ಪರಸ್ಪರ ಸಹಕಾರ ಮಾಡಿಕೊಂಡು ಮಾಡಬೇಕು. ನಾವು ಸರ್ಕಾರಕ್ಕೆ ಕೊಡುವುದಿಲ್ಲ ಅಂದರೆ ಹೇಗೆ, ಸರ್ಕಾರವೇ ಬೇರೆ, ಜನತೆಯೇ ಬೇರೆ ಅಲ್ಲ. ನಾವು ಅನ್ಯೋನ್ಯತೆ ಭಾವನೆ ಏನು ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ಕೂಡಲೇ ಮೀಟಿಂಗ್ ಕರೆಯುತ್ತೇನೆ, ಚರ್ಚೆ ಮಾಡುತ್ತೇನೆ. ಸೂಕ್ತ ಪರಿಹಾರ ತೆಗೆದುಕೊಳ್ಳುವುದಕ್ಕೆ ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ವಕ್ಫ್‌ಬೋರ್ಡ್‌ಗೆ ಸಂಬಂಧಪಟ್ಟಂತೆ ಲೆಕ್ಕಪತ್ರಗಳನ್ನು ಪೂರ್ತಿ ಆಡಿಟ್ ಮಾಡಿಸಲಿಕ್ಕೆ ಸ್ಟೇಟ್ ಆಡಿಟರ್ಸ್ ನೇಮಕ ಮಾಡಿ ಅದನ್ನು ನೋಡುತ್ತಿದ್ದೇವೆ. ಇನ್ನು ಶ್ರೀಮಾನ್ ಕಮರುಲ್ ಇಸ್ಲಾಂ ಅವರು ೫ ಲಕ್ಷ ರೂಪಾಯಿ ಜುಯಲರೀಸ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾನೇ ಖುದ್ದು ಇನ್ಸ್‌ಪೆಕ್ಷನ್ ಮಾಡಬೇಕೆಂದು ಇಟ್ಟುಕೊಂಡಿದ್ದೇನೆ. ಕಾರಣ ಇದು ಭಾರಿ ಸೂಕ್ಷ್ಮವಾದುದು. ನಾವೇನಾದರೂ ಸ್ವಲ್ಪ ಹೆಚ್ಚುಕಡಿಮೆ ನಿರ್ಣಯ ತೆಗೆದುಕೊಳ್ಳಲಿಕ್ಕೆ ಹೋದರೆ ದೊಡ್ಡ ಕಲ್ಪನೆಗೆ ಆಸ್ಪದವಾಗುತ್ತದೆ. ಆದ್ದರಿಂದ ನಾವು ಪರ್ಸನಲ್ ಆಗಿ ಹೋಗಿ ಪರಿಶೀಲನೆ ಮಾಡಿ ಅದರ ಮೇಲೆ ಒಂದು ನಿರ್ಣಯ ತೆಗೆದುಕೊಂಡು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆಂದು ಹೇಳಿ ಈ ನಮ್ಮ ಬೇಡಿಕೆಯನ್ನು ಅಂಗೀಕರಿಸಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಅಂಬಣ್ಣನಾಯಕ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈಗಾಗಲೇ ತಿಳಿಸಿದ ಪ್ರಕಾರ ಸುರಪುರದಲ್ಲಿ ಈ ಮಸೀದಿಯನ್ನು ಒಡೆದು ಸರ್‌ದಾರ್ ವಲ್ಲಭಾಯಿ ಪಟೇಲರ ಮೂರ್ತಿ ಸ್ಥಾಪಿಸಿದ್ದಾರೆಂದು ಹೇಳಿದ್ದಾರೆ. ಅದರ ಹಿನ್ನೆಲೆಯಲ್ಲಿ ವಾಸ್ತವಾಂಶ ಏನು ಎಂದು ಹೇಳಬಯಸುತ್ತೇನೆ. ಸುರಪುರ ದೊರೆಗಳ ಸಂಬಂಧಿಕನಾದ ನಾನು ಸ್ವತಃ ಸುರಪುರ ಅವರನ್ನು ನೋಡಿದ್ದೇನೆ. ಅಲ್ಲಿ ವಲ್ಲಭಾಯಿ ಪಟೇಲರ ಮೂರ್ತಿ ಇರತಕ್ಕಂತಾದ್ದನ್ನು ನಾನು ನೋಡಿದ್ದೇನೆ. ಅಲ್ಲಿಯ ಪರಿಸ್ಥಿತಿಯನ್ನು ಸಹ ಹೆಚ್ಚು ತಿಳಿದುಕೊಂಡಿದ್ದೇನೆ. ಮೂಲತಃ ವಾಸ್ತವಾಗಿ ರಾಜಾರಾಮಣಪ್ಪ ನಾಯಕ ಇವರ ಕಟ್ಟೆ. ಆ ಕಟ್ಟೆಯಲ್ಲಿ ಆಗಿನ ರಾಜ ಮಹಾಜನತೆಗೆ ತೀರ್ಪು ಕೊಡುವ ಸಲುವಾಗಿ ಆ ಕಟ್ಟೆಯ ಮೇಲೆ ಕುಳಿತು ನ್ಯಾಯದಾನ ನಡೆಯುತ್ತಿತ್ತು. ಅಂತಹ ಪರಿಸ್ಥಿತಿಯಲ್ಲಿ ನಡುವೆ ಕೆಲವೊಂದು ಕುಹಕ ಜನಗಳ ಒಂದು ವಾತಾವರಣದಿಂದ ಅಲ್ಲಿಯ ಆ ಒಂದು ಕಟ್ಟೆಯನ್ನು ತೆಗೆದು ಒಂದು ಮಸೀದಿ ನಿರ್ಮಾಣ ಮಾಡಿದ್ದಾರೆಂಬ ವಿಷಯವನ್ನು ನಾನು ತಿಳಿದುಕೊಂಡಿದ್ದೇನೆ. ಆದರೆ ಅದು ಬಲವಂತದಿಂದ ದೌರ್ಜನ್ಯದಿಂದ ಮಾಡಿದ್ದಾಗಿದೆ. ವಾಸ್ತವಾಂಶವಾಗಿ ಅಲ್ಲಿರತಕ್ಕಂಥ ನ್ಯಾಯದಾನದ ಕಟ್ಟೆ ಒಳ್ಳೆಯ ಪವಿತ್ರವಾದಂಥ ಕಟ್ಟೆ ಅದನ್ನು ೧೯೪೮ರಲ್ಲಿ ಈ ಪೋಲೀಸ್ ಆ್ಯಕ್ಷನ್ ಕಾಲದಲ್ಲಿ, ನಿಜವಾದ ಸ್ಥಿತಿಯಲ್ಲಿ ನ್ಯಾಯವನ್ನು ಬೇಡಲಿಕ್ಕೆ ಜನತೆ ಒತ್ತಾಯ ಮಾಡಿದಾಗ ವಾಸ್ತವಾಂಶ ಕಂಡುಹಿಡಿದ ಅನೇಕ ವಿಚಾರವಂತರು ಸೇರಿ ಅದು ನ್ಯಾಯ ಕಟ್ಟೆ ಅಂತ ತಿಳಿದು ಅಲ್ಲಿ ನಮ್ಮ ನೇತಾರರ, ಸರ್‌ದಾರ್ ವಲ್ಲಭಾಯ್ ಪಟೇಲರ ಮೂರ್ತಿ ಸ್ಥಾಪಿಸಿದ್ದು ನಿಜಕ್ಕೂ ಇತ್ತು. ಲೋಕಸಭೆ ಚುನಾವಣೆ ಕಾಲದಲ್ಲಿ ಈ ಮುಂಚಿನ ಸರ್ಕಾರ ಯಾವ ಒಂದು ದೃಷ್ಟಿಯಿಂದ ತೀರ್ಮಾನ ಮಾಡಿದ್ದಾರೆ ಎಂದರೆ ಅಲ್ಲಿ ಒಂದು ಮಸೀದಿಯನ್ನು ಸ್ಥಾಪಿಸಬೇಕೆಂದು ತೀರ್ಮಾನ ಮಾಡಿದ್ದಾರೆ ಆ ಒಂದು ನಿರ್ಣಯ ಕಾರ್ಯಗತವಾಗಿಲ್ಲ. ಅಲ್ಲಿಯ ಜನತೆಯ ಆಕಾಂಕ್ಷೆಯೇ ಬೇರೆ ಇದೆ.

ಜನತೆಯ ಆಕಾಂಕ್ಷೆಯ ಪ್ರಕಾರ ಆ ಒಂದು ನಿರ್ಣಯವನ್ನು ಪುನಃ ಪರಿಶೀಲನೆ ಮಾಡಬೇಕಾಗಿದೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಆ ಒಂದು ಧರ್ಮದ ಹಿನ್ನೆಲೆಯಲ್ಲಿ, ಹೇಳುತ್ತಿದ್ದೇನೆ. ಸಮಾಜಕ್ಕೆ ವಿರೋಧವಾಗಿ ಹೇಳುತ್ತಿಲ್ಲ. ಧರ್ಮದ ಹಿತದೃಷ್ಟಿಯಿಂದ ಪುನರ್ ಪರಿಶೀಲನೆ ಮಾಡಿ ಅಲ್ಲಿನ ವಾಸ್ತವಾಂಶ, ನಿಜವಾದ ಸಂಗತಿಯನ್ನು ನ್ಯಾಯಕ್ಕೆ ಒಂದು ಬೆಲೆ ಬರತಕ್ಕ ಪರಿಸ್ಥಿತಿಯಲ್ಲಿ ವಾಸ್ತವಾಂಶ ಎತ್ತಿ ಹಿಡಿಯಬೇಕು ಎಂದು ಹೇಳುತ್ತೇನೆ.

ಮೊದಲು ಏನು ಈ ನ್ಯಾಯದ ಕಟ್ಟೆ ಇತ್ತು ಇದರ ಬಗ್ಗೆ ಬಹಳ ಆಳವಾಗಿ ಅಧ್ಯಯನ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ತಪ್ಪು ಗ್ರಹಿಕೆ ಬರುವಂಥ ರೀತಿಯಲ್ಲಿ ಹೇಳುವುದು ಸರಿಯಲ್ಲ. ವಾಸ್ತವಾಂಶವನ್ನು ನೋಡಿ ಕೊಡತಕ್ಕ ತೀರ್ಪನ್ನು ನಿಜವಾದ ತೀರ್ಪು ಎಂದು ನಾನೂ ತಿಳಿದುಕೊಳ್ಳುತ್ತೇನೆ, ಮತ್ತು ಜನತೆಯೂ ತಿಳಿದುಕೊಳ್ಳುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಪುನರ್ ಪರಿಶೀಲನೆ ಮಾಡಿ ಒಂದು ನಿರ್ಣಯವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕೊನೆಯವರೆಗೂ ಸದನದಲ್ಲಿ ಕುಳಿತುಕೊಳ್ಳುವುದಾದರೆ ಪರವಾಗಿಲ್ಲ ; ಒಂದು ವೇಳೆ ಅವರು ಕುಳಿತುಕೊಳ್ಳುವುದಿಲ್ಲ ಎನ್ನುವುದಾದರೆ ಪ್ಲಾನಿಂಗ್ ಬೋರ್ಡ್‌ನ ಬಗ್ಗೆ ಒಂದೇ ಒಂದು ಕ್ಲಾರಿಫಿಕೇಷನ್‌ನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು.—ಅದೇನು ಕೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಸ್ಟೇಟ್ ಪ್ಲಾನಿಂಗ್ ಬೋರ್ಡ್‌ನ್ನು ಮಾಡುವ ಬಗ್ಗೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಚರ್ಚೆಯಾಗಿದೆ, ಅಲ್ಲದೆ ಬೇರೆ ಕಡೆ ಕೂಡ ಇದರ ಬಗ್ಗೆ ಚರ್ಚೆಯಾಗಿದೆ. ಹಿಂದೆ ಸ್ಟೇಟ್ ಪ್ಲಾನಿಂಗ್ ಬೋರ್ಡ್ ಇತ್ತು. ಅದರಲ್ಲಿ ಎಲ್ಲ ಪಕ್ಷಗಳ ಸದಸ್ಯರೂ ಇರುತ್ತಿದ್ದರು. ಮಾನ್ಯ ಶಿವಪ್ಪನವರೂ, ಮಾನ್ಯ ಕೃಷ್ಣರವರೂ ಇನ್ನೂ ಮುಂತಾದವರು ಇದ್ದರು. ಈಗ ಆ ಬೋರ್ಡ್ ಇದೆಯೋ ಇಲ್ಲವೋ ಗೊತ್ತಿಲ್ಲ. ಸ್ಟೇಟ್ ಪ್ಲಾನಿಂಗ್ ಬೋರ್ಡ್‌ನ್ನು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾಡಿ ರಾಜ್ಯಕ್ಕೆ ಸಂಬಂಧಪಟ್ಟಂತಹ ಯೋಜನೆಗಳನ್ನು ಮಾಡುವಾಗ ಎಲ್ಲ ಸದಸ್ಯರ ಅಭಿಪ್ರಾಯಗಳನ್ನೂ ಕ್ರೋಢೀಕರಿಸಿ......

ಶ್ರೀ ಆರ್. ಗುಂಡೂರಾವ್,—ಈ ಬೋರ್ಡ್ ಇಲ್ಲವೆಂದು ನಿಮಗೆ ಯಾರು ಹೇಳಿದ್ದು. ಈ ಬೋರ್ಡ್ ಇದೆ. ಇದಕ್ಕೆ ನಾನೇ ಅಧ್ಯಕ್ಷ. Mr. G. V. K. Rao and others are also there. It has already met once or twice.

ಶ್ರೀ ಎಂ. ಎಂ. ನಡಾಫ್.—ಮಾನ್ಯ ಅಧ್ಯಕ್ಷರೆ, ಭೂನ್ಯಾಯ ಮಂಡಲಿಯಲ್ಲಿ ವಕ್ಫ್‌ಗೆ ಸಂಬಂಧಪಟ್ಟಂತೆ ಅನೇಕ ಕೇಸುಗಳು ಪೆಂಡಿಂಗ್ ಇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾರೂ ಬರುತ್ತಿಲ್ಲ. ಹೀಗಾಗಿ ಅನೇಕ ಅರ್ಜಿಗಳು ಹಾಗೇ ಪೆಂಡಿಂಗ್ ಇವೆ. ಇದಕ್ಕಾಗಿ ಏನಾದರೂ ಒಂದು ವ್ಯವಸ್ಥೆ ಮಾಡುತ್ತಾರೆಯೇ ಎಂದು ಮಾನ್ಯ ವಕ್ಫ್ ಮಂತ್ರಿಗಳನ್ನು ನಾನು ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಭೂ ಸುಧಾರಣೆ ಬಗ್ಗೆ ಒಂದು ತೀರ್ಮಾನವನ್ನು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಕಾಂಪನ್‌ಸೇಷನ್ ಏನಾದರೂ ಕೊಡಬೇಕಾದರೆ ಕೊಟ್ಟ ಅನಂತರ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಬಿ. ಜಕನೂರು (ಮಾನ್ಯ ಕಾರ್ಮಿಕ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ಈ ಕಾರ್ಮಿಕ ಖಾತೆ ಏನಿದೆ ಇದೊಂದು ಬಹಳ ಮಹತ್ವದ ಖಾತೆ. ಬಡ ಜನತೆಯ ಹಿತವನ್ನು ಕಾಪಾಡತಕ್ಕ ಮತ್ತು ಅವರಿಗೆ ಕೆಲವೊಂದು ರಿಯಾಯಿತಿಗಳನ್ನು ಕಲ್ಪಿಸಿಕೊಡತಕ್ಕಂಥ ಖಾತೆ. ಇದರ ಬಗ್ಗೆ ಕೆಲವೊಂದು ಲೋಪದೋಷಗಳನ್ನು ಸನ್ಮಾನ್ಯ ಸದಸ್ಯರುಗಳು ಎತ್ತಿ ತೋರಿಸಿದ್ದಾರೆ. ಇದರಲ್ಲಿ ಮಾತನಾಡಿದ್ದು ಎಂದರೆ ಸಿಬ್ಬಂದಿವರ್ಗ ಹೆಚ್ಚಾಗಿಲ್ಲ ಇದರಿಂದಾಗಿ ಅನೇಕ ಪ್ರಕರಣಗಳು ಬಹಳ ತಡವಾಗುತ್ತಿವೆ ಎಂದು ಹೇಳಿದ್ದಾರೆ. ಇದರ ಸಲುವಾಗಿ ಸರ್ಕಾರದವರು ಕ್ರಮ ತೆಗೆದುಕೊಂಡು ಈಗಾಗಲೇ ೨೦ ಇನ್‌ಸ್ಪೆಕ್ಟರ್ಸ್ ಹುದ್ದೆಗಳನ್ನು ನಿರ್ಮಿಸಿದ್ದಾರೆ. ಇನ್ನೂ ೨೦ ಇನ್‌ಸ್ಪೆಕ್ಟರ್‌ಗಳ ಮತ್ತು ಅದಕ್ಕಿಂತ ಹೆಚ್ಚಿನ ಹುದ್ದೆ

ಗಳನ್ನು ಕೊಡಬೇಕೆಂದು ಡಿಪಾರ್ಟ್‌ಮೆಂಟ್‌ನ ಬೇಡಿಕೆ ಇದೆ. ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಈಗ ಎಷ್ಟೋ ಕನ್ಸಿಲಿಯೇಷನ್ಸ್ ತಡವಾಗಿವೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ನಾನಾದರೂ ಅವರಿಗೆ ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ನಾನು ಈ ಕಾರ್ಮಿಕ ಖಾತೆಯನ್ನು ವಹಿಸಿಕೊಂಡನಂತರ ಯಾವ ಪ್ರಕರಣಗಳೇ ಆಗಲಿ ಹೆಚ್ಚು ಕಾಲ ಉಳಿಯಬಾರದು, ಕನ್ಸಿಲಿಯೇಷನ್ ಪ್ರಾರಂಭ ಮಾಡಿದ ಕೇವಲ ೧೫–೨೦ ದಿವಸಗಳಲ್ಲೇ ಏನಾದರೂ ಮಾಡಿ ಅದನ್ನು ಮುಗಿಸಬೇಕು, ಅಥವಾ ಫೇಲ್ಯೂರ್ ಆದರೆ ಅದರ ರಿಪೋರ್ಟ್‌ನ್ನು ಕೂಡಲೇ ತರಿಸಿಕೊಂಡು ಅದನ್ನು ಅಡ್ಜುಡಿಕೇಷನ್‌ಗೆ ರೆಫರ್ ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಆರುಮುಗಂರವರು ಹೇಳಿದಂತೆ ನಮ್ಮ ಇಲಾಖೆ ಅಧಿಕಾರಿಗಳಿಗೆ ವೆಹಿಕಲ್ಸ್‌ನ ವ್ಯವಸ್ಥೆ ಇಲ್ಲ. ಇದರ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ನನ್ನ ಈ ಖಾತೆಯ ಬೇಡಿಕೆಯ ಮೇಲೆ ಮಾನ್ಯ ಸದಸ್ಯರಾದ ಶ್ರೀ ಮೈಕೇಲ್ ಫರ್ನಾಂಡಿಸ್‌ರವರು ಮತ್ತು......

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಪ್ಲಾಂಟೇಷನ್‌ನಲ್ಲಿರತಕ್ಕ ಇನ್‌ಸ್ಪೆಕ್ಟರ್‌ಗಳಿಗೂ ವೆಹಿಕಲ್ಸ್‌ನ್ನು ಕೊಡಬೇಕು. ಇಲ್ಲದಿದ್ದರೆ ಅವರು ಬಸ್‌ನಲ್ಲಿ ಹೋಗಿ ಇನ್‌ಸ್ಪೆಕ್ಷನ್ ಮಾಡಿಕೊಂಡು ಬರಬೇಕೆಂದರೆ ಒಂದು ದಿವಸಕ್ಕೆ ಒಂದು ಪ್ಲಾಂಟೇಷನ್ ಕೂಡ ನೋಡುವುದಕ್ಕಾಗುವುದಿಲ್ಲ. ಉದಾಹರಣೆಗೆ ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳಲ್ಲಿರತಕ್ಕ ಇನ್‌ಸ್ಪೆಕ್ಟರ್‌ಗಳಿಗೆ ಜೀಪುಗಳನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು.

ಶ್ರೀ ಎ. ಬಿ. ಜಕನೂರು.—ನಾನು ಇದೇ ವಿಷಯದಲ್ಲಿ ಹೇಳಿದ್ದೇನೆ. ಬೇರೆ ಬೇರೆ ಕಡೆಗಳಿಗೆ ನಮ್ಮ ಅಧಿಕಾರಿಗಳು ಬೇಗನೆ ಇನ್‌ಸ್ಪೆಕ್ಷನ್‌ಗೆ ಹೋಗಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಬಸ್‌ನಲ್ಲಿ ಹೋಗಿ ಆ ಸ್ಥಳವನ್ನು ಮುಟ್ಟಲಿಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ವೆಹಿಕಲ್ಸ್ ಕೊಡಬೇಕಾಗುತ್ತದೆ. ಆದರೆ ಈ ವೆಹಿಕಲ್ಸ್‌ನ್ನು ಎಷ್ಟು ಕೊಡಬೇಕು, ಯಾರಿಗೆ ಕೊಡಬೇಕೆಂಬ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳ ಜೊತೆಯಲ್ಲಿ ಈಗಾಗಲೇ ಮಾತನಾಡಿ ಪರಿಶೀಲಿಸುತ್ತಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಮೈಕೇಲ್ ಫರ್ನಾಂಡಿಸ್‌ರವರು ಒಬ್ಬ ಕಾರ್ಮಿಕ ಧುರೀಣರು. ಅವರು ನನ್ನ ಖಾತೆಯ ಮೇಲೆ ಮಾತನಾಡುತ್ತಾ ಬಹಳ ಮಹತ್ವದ ಸಲಹೆಗಳನ್ನು ಕೊಡುತ್ತಾರೆಂದು ನಾನು ತಿಳಿದಿದ್ದೆ. ಆದರೆ ಅವರು ಮಹತ್ವದ ಸಲಹೆಗಳನ್ನು ಕೊಡುವುದಕ್ಕೆ ಬದಲಾಗಿ ಒಂದು ತಾಸಿನವರೆಗೆ ಮಾತನಾಡಿ ಕೇವಲ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಇದ್ದಂಥ ವಿಷಯಗಳನ್ನು ಪ್ರಸ್ತಾಪ ಮಾಡಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಪ್ಪುಗಳನ್ನು ತೋರಿಸುತ್ತಾ, ಪ್ರಧಾನ ಮಂತ್ರಿಗಳ ಬಗ್ಗೆ ಕೆಲವೊಂದು ಮಾತುಗಳನ್ನಾಡುತ್ತಾ ಇನ್ನೂ ಏನೇನೋ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಆದ್ದರಿಂದ ಅದನ್ನೆಲ್ಲಾ ನಾನು ಇಲ್ಲಿ ಹೇಳುವುದು ಅವಶ್ಯವಿಲ್ಲ. ಆದರೆ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಡಿಮ್ಯಾಂಡ್ಸ್ ಕೊಟ್ಟನಂತರ ಕಾರ್ಮಿಕ ಖಾತೆಯವರು ನಮಗೆ ಏನೇನೂ ಮಾಡಿಲ್ಲವೆಂದು ಅವರು ಹೇಳಿದರು. ಅದು ನಿಜವಲ್ಲ. ಕಾರ್ಮಿಕ ಖಾತೆಯವರು ಸುಮಾರು ೧೮–೧೯ ಸಭೆಗಳನ್ನು ನಡೆಸಿದ್ದಾರೆ. ಏನಾದರೂ ಮಾಡಿ ಈ ವಿಷಯವನ್ನು ಮುಗಿಸಬೇಕೆಂದು ಪ್ರಯತ್ನ ಮಾಡಿದ್ದೇವೆ. ಆದರೂ ಇವರಲ್ಲಿ ಮತ್ತು ಮ್ಯಾನೇಜ್‌ಮೆಂಟ್ ಸ್ವಲ್ಪ ವ್ಯತ್ಯಾಸವಿದ್ದುದರಿಂದ ಬಿ. ಹೆಚ್. ಇ ಎಲ್.ನಲ್ಲಿ ಕೊಡತಕ್ಕ ಸೌಲಭ್ಯವನ್ನೇ ಇವರಿಗೂ ಕೊಡಬೇಕೆಂದು ಕಾರ್ಮಿಕ ಧುರೀಣರು ಹೇಳುತ್ತಿದ್ದರು. ಇದು ಆ ರೀತಿ ಆಗುವುದಿಲ್ಲವೆಂದು ಮ್ಯಾನೆಜ್‌ಮೆಂಟ್‌ನವರು ಒಪ್ಪಲಿಲ್ಲಾ ಇದರಿಂದಾಗಿ ಆ ಸೆಟ್ಲ್‌ಮೆಂಟ್ ಆಗಲಿಲ್ಲ. ನಾನು ಕಾರ್ಮಿಕ ಖಾತೆಯನ್ನು ವಹಿಸಿಕೊಂಡನಂತರ ಜೂನ್ ೧೯ನೇ ತಾರೀಖು ಡಿಸೆಂಬರ್ ೨೪, ೨೭ ಹಾಗೂ ೧೯೮೧ನೇ ಜನವರಿ ೧, ೭, ಹಾಗೂ ೮ನೇ ತಾರೀಖಿನಂದು ಎಲ್ಲ ಕಾರ್ಮಿಕ ಧುರೀಣರನ್ನೂ ನನ್ನ ಕಛೇರಿಗೇ ಕರೆಸಿಕೊಂಡು ಈ ಸಮಸ್ಯೆಯನ್ನು ಹೇಗಾದರೂ ಮಾಡಿ ಬಗೆಹರಿಸಬೇಕೆಂದು ಪ್ರಯತ್ನ ಮಾಡಿದೆ. ಜೆ.ಎ.ಎಫ್. ಧುರೀಣರ ಪೈಕಿ ಮಾನ್ಯ ಮೈಕೇಲ್ ಫರ್ನಾಂಡೀಸ್‌ರವರೂ ಒಬ್ಬರು. ಆಗ ನಾನು ಸ್ಪಷ್ಟವಾಗಿ ಹೇಳಿದೆ. ಇದು ಇಂಟರ್‌ಪ್ರಿಟೇಷನ್ ಪ್ರಶ್ನೆಯಾಗಿದೆ. ನೀವು ಹೀಗೆ ಹೇಳುತ್ತೀರಿ, ಅವರು ಹೀಗಾಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಇದನ್ನು ಏತಕ್ಕೆ ಅಡ್ಜುಡಿಕೇಷನ್ ಹಾಕಬಾರದೆಂದು ಕೇಳಿದಾಗ ಅವರು ಹೇಳಿದರು ಇದು ಅಡ್ಜುಡಿಕೇಷನ್‌ಗೆ ಹಾಕುವುದು ಬೇಡ, ಇಷ್ಟು ಅವರು ಕೂಡಲೇ ಬೇಕು. ಅವರು ಕೊಡದಿದ್ದರೆ ನಾವು ಹೇಗೆ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆಗ ನಾನು ಹೇಳಿದ್ದು ಈಗ ನೀವು ಸ್ಟ್ರೈಕ್

ಮಾಡಬೇಡಿ ಇನ್ನೊಂದು ಸಾರಿ ಅವಕಾಶ ಕೊಡಿ ನಾನು ಏನಾದರೂ ಮಾಡಿ ನಾನು ಪರಿಹರಿಸಿಕೊಡುತ್ತೇನೆಂದು ಕಳಕಳಿಯಿಂದ ಕೇಳಿಕೊಂಡರೂ ಸಹಿತ ನಾವು ಸ್ಟ್ರೈಕ್ ಮಾಡಿಯೇ ಮಾಡುತ್ತೇವೆ, ಏನಾದರೂ ಮಾಡಿ ಈ ಸರ್ಕಾರವನ್ನು ಬಗ್ಗಿಸುತ್ತೇನೆ, ಕೇಂದ್ರ ಸರ್ಕಾರವನ್ನೂ ಬಗ್ಗಿಸುತ್ತೇವೆ ಎನ್ನುವ ಒರಟುತನದ ಮಾತುಗಳನ್ನಾಡಿ ಸಭೆಯಿಂದ ಹೊರಟುಹೋದರು.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಡ್ಜುಡಿಕೇಷನ್‌ಗೆ ರೆಫರ್ ಮಾಡಬೇಕಾದರೆ ಅವರು ಒಪ್ಪಿದರೆ ಮಾಡಬೇಕು, ಇಲ್ಲದಿದ್ದರೆ ಮಾಡಬಾರದೆಂದು.....

ಶ್ರೀ ಎ. ಬಿ. ಜಕನೂರು.—ನಾನು ಮಾತನಾಡುವಾಗ ತಾವು ಇರಲಿಲ್ಲವಾದ್ದರಿಂದ ದಯವಿಟ್ಟು ನಾನು ಈಗ ಹೇಳುವುದನ್ನು ಕೇಳಿ. ದೆಹಲಿಯಲ್ಲಿ ಸಭೆ ಏರ್ಪಾಡಾಗಿತ್ತು. ಕೇಂದ್ರ ಸರ್ಕಾರದ ವತಿಯಿಂದ ೪-೫ ಕನ್ಸಿಲಿಯೇಷನ್ ಮೀಟಿಂಗ್‌ಗಳು ಆದುವು. ಇದನ್ನೂ ಕೂಡ ಆರ್ಬಿಟ್ರೇಷನ್‌ಗೆ ಹಾಕಬೇಕೆಂದರು. ಆದರೆ ಅದಕ್ಕೆ ನಾನು ಒಪ್ಪುವುದಿಲ್ಲ ಅಂತ ಅವರು ಹೇಳಿ ಬಂದರು. ಇಷ್ಟೆಲ್ಲಾ ಆದರೂ ಸಹಿತ ಆ ವಿಚಾರ ಈ ಸಭೆಯಲ್ಲಿ ಆಯಿತು. ಆ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ಸದಸ್ಯರನ್ನೂ ಕರೆದು ಮಾತನಾಡುವ ಸಂದರ್ಭದಲ್ಲಿ ನೀವು ನಿಮ್ಮ ಸ್ಟ್ರೈಕನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿದರು. ಅವರ ಆಫರ್‌ನ್ನು ಅವರು ವಾಪಸು ತೆಗೆದುಕೊಂಡಿದ್ದರು. ಕೇಂದ್ರ ಸರ್ಕಾರದವರು ಮಾಡಿದಂಥ ಆಫರ್‌ನ್ನು ಇವರು ವಾಪಸು ತೆಗೆದುಕೊಂಡಿದ್ದರು. ಇಂಥ ಸಂದರ್ಭದಲ್ಲಿ ನಾನೂ ಮತ್ತು ಮಾನ್ಯ ಮುಖ್ಯ ಮಂತ್ರಿಯವರೂ ಮಾತನಾಡಿ ಏನಾದರೂ ಮಾಡಿ ಇವರಿಬ್ಬರನ್ನೂ ಒಂದುಕಡೆ ಕೂಡಿಸಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟೆವು ಅಷ್ಟೇ ಹೊರತು ಇದಕ್ಕಿಂತ ಹೆಚ್ಚಿನ ಭರವಸೆಯನ್ನು ಏನೂ ನಾವು ಕೊಟ್ಟಿಲ್ಲ. ಇದಕ್ಕೆ ಒಪ್ಪಿಕೊಂಡು ಕಾರ್ಮಿಕ ಧುರೀಣರು ಸ್ಟ್ರೈಕ್‌ನ್ನು ಕಾಲಾಫ್ ಮಾಡಿದರು. ಇದಕ್ಕೆ ಮೊದಲು ಇಂಟಕ್‌ನ ಕೆಲವು ಕಾರ್ಮಿಕರು ಕೆಲಸಕ್ಕೆ ಹೋಗುತ್ತಿದ್ದರು. ಸ್ಟ್ರೈಕನ್ನು ಕಾಲಾಫ್ ಮಾಡಿದ ಯೂನಿಯನ್‌ನವರು ಅಲ್ಲಿಗೆ ಹೋಗಿ ನೀವು ಏತಕ್ಕೆ ಹೋದಿರಿ, ನೀವೂ ನಮ್ಮ ಜೊತೆಯಲ್ಲೇ ಇರಬೇಕಾಗಿತ್ತು ಎಂದು ಈ ಕಾರ್ಮಿಕರೂ, ಆ ಕಾರ್ಮಿಕರೂ ಒಬ್ಬರಿಗೊಬ್ಬರು ಹೊಡೆದಾಟ ಬಡಿದಾಟಗಳನ್ನು ಮಾಡಿಕೊಂಡರು. ಅದು ಕೇಸ್ ಕೂಡ ಆಯಿತು. ಆಗ ನಾವು ಅವರಲ್ಲಿ ವಿನಂತಿ ಮಾಡಿಕೊಂಡೆವು.

೬-೩೦ ಪಿ. ಎಂ.

ಅವರಿಗೆ ವಿನಂತಿ ಮಾಡಿಕೊಂಡು ನಾವು ಕೇಂದ್ರ ಸರ್ಕಾರ ಮತ್ತು ನಿಮ್ಮ ಜೊತೆ ಮ್ಯಾನೇಜ್‌ಮೆಂಟ್‌ನವರನ್ನು ಕೂಡಿಸಿ ಮಾತನಾಡಿ ರಾಜಿ ಮಾಡಿ ಮುಗಿಸೋಣ, ಸ್ವಲ್ಪ ದಿವಸ ತಡೆಯಿರಿ ಎಂದರೆ ಅವರಿಗೆ ತಡೆಯಲಿಕ್ಕೆ ಆಗಲಿಲ್ಲ ಎಂಬತ್ತು ದಿವಸಗಳಿಗೆ ಮೇಲ್ಪಟ್ಟು ಸ್ಟ್ರೈಕ್ ಮಾಡಿದ್ದರೂ ಸಹ ಮತ್ತೊಂದು ೧೦-೧೫ ದಿವಸ ತಡಯಲಿಕ್ಕೆ ಬಾರದೆ ಹೋಯಿತು. ಹೀಗೆ ಮಾಡಿ ಏನು ಒಂದು ದೊಡ್ಡ ಹಂಗರ್ ಸ್ಟ್ರೈಕ್ ಮಾಡಿ ಎಷ್ಟೋ ಜನರನ್ನು ಕೂಡಿಸಿ ಪ್ರಧಾನಮಂತ್ರಿಯವರ, ಮುಖ್ಯಮಂತ್ರಿಯವರ ಪ್ರತಿಕೃತಿಗಳನ್ನು ಸುಟ್ಟು ಸಿಕ್ಕಾಬಟ್ಟೆ ಬೈದು, ಬ್ಯಾನ್ ಮಾಡಿದ್ದರೂ ಸಹ ಸರ್ಕಾರವನ್ನು ಲೆಕ್ಕಿಸದೆ ಹೀಗೆಲ್ಲ ಮಾಡಿ ತಮ್ಮ ಹಿತಾಸಕ್ತಿಯನ್ನು ತಾವೇ ಕೆಡಿಸಿಕೊಂಡರು. ಈಗ ಹೇಳುತ್ತಾರೆ ಮುಖ್ಯ ಮಂತ್ರಿಗಳು ನಮಗೆ ವಚನ ಕೊಟ್ಟಿದ್ದರು, ವಚನದಂತೆ ನಡೆದುಕೊಳ್ಳಲಿಲ್ಲ, ಪ್ರಧಾನಮಂತ್ರಿಯವರು ವಚನ ಕೊಟ್ಟಿದ್ದರು, ಅದರಂತೆ ನಡೆದುಕೊಳ್ಳಲಿಲ್ಲ. ಆದ್ದರಿಂದ ನಾವು ಹೀಗೆ ಮಾಡಬೇಕಾಯಿತು ಎಂದು. ಈಗಲೂ ಮಾನ್ಯ ಸದಸ್ಯರಿಗೆ ಹೇಳುತ್ತೇನೆ ನಾವು ಹೇಳಿದ ಹಾಗೆ ಅವರು ಮಾಡಿದ್ದರೆ ಪರಿಸ್ಥಿತಿ ಈ ಮಟ್ಟಕ್ಕೆ ಬರುತ್ತಿರಲಿಲ್ಲ. ಅವರು ಹಾಗೆ ಮಾಡಲಿಲ್ಲ ಬಲಪ್ರದರ್ಶನಮಾಡಿ ಬಸ್‌ಗಳನ್ನು ಸಿಕ್ಕಾಪಟ್ಟೆ ಸುಟ್ಟು, ಮನೆಗಳ ಮೇಲೆ ಕಲ್ಲುಗಳನ್ನು ಹೊಡೆಯುವಂಥ ಪರಿಸ್ಥಿತಿಯನ್ನು ಉದ್ಭವ ಮಾಡಿ ಸರ್ಕಾರವನ್ನುದ್ದೇಶಿಸಿ, ತುಚ್ಛವಾಗಿ ಮಾತನಾಡಿದರು. ಇದು ಯಾವಾಗಲು ಸರಿಯಾದುದಲ್ಲ. ನಾವು ಎಷ್ಟು ಹೇಳಿದರೂ ಸಹ ಯಾವ ನಮ್ಮ ಸರ್ಕಾರ ಬಡವರ ಹಿತಾಸಕ್ತಿಗೆ ವಿರುದ್ಧ ನಡೆದಿಲ್ಲ. ಬಡವರ ವಿರುದ್ಧ ವಿರೋಧಿಸಬೇಕು ಎನ್ನುವ ಭಾವನೆ ಇಲ್ಲ. ಈ ಸದನದ ಒಳಗೂ ಇಲ್ಲ, ಹೊರಗೂ ಇಲ್ಲ. ಬಡವರ ಶೋಷಣೆ ಮಾಡಬೇಕೆಂಬುದು ಈ ಸರ್ಕಾರದ ಇಚ್ಛೆಯಲ್ಲ ನಮ್ಮ ಸರ್ಕಾರ, ಬಡವರಿಂದ ರಚಿತವಾದ ಸರ್ಕಾರ. ಬಡವರ ಸಲುವಾಗಿ ನಾನು ಇಲ್ಲಿ ಕೆಲಸಮಾಡುತ್ತಿದ್ದೇವೆಂದು ಹೇಳಿದರೂ ಸಹಿತ......

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಕೊನೆಯವರೆಗೂ ಅವರನ್ನು ಕಾಯಮ್ ಆಗಿ ಬಡವರಾಗಿಯೇ ಇಡಬೇಕೆಂಬುದು ನಿಮ್ಮ ಇಚ್ಛೆ.

ಶ್ರೀ ಎ. ಬಿ. ಜಕನೂರು.—ಹಾಗೇನು ಇರುವುದಿಲ್ಲ. ನಾನು ಹೇಳುತ್ತಿದ್ದೇನೆ......

ಶ್ರೀ ಐ. ಪಿ. ಡಿ. ಸಾಲಪ್ಪ.—ಸಾವಿರಾರು ರೂಪಾಯಿ ಸಂಬಳವನ್ನು ತೆಗೆದುಕೊಳ್ಳುತ್ತಿರ ತಕ್ಕಂಥವರು ಬಡವರಲ್ಲ. ಅವರು ಮಧ್ಯಮವರ್ಗಕ್ಕಿಂತ ಸ್ವಲ್ಪ ಮೇಲೂ ಆದರೆ ತೀರ ಬಡವರು ಯಾರು ಎಂದರೆ ನಾಲ್ಕುಆಣೆ ಕೂಲಿಮಾಡಿ, ತೀರ ಕೆಳಮಟ್ಟದಲ್ಲಿ ಯಾರು ಇರುತ್ತಾರೋ ಅವರು ಬಡವರು.

ಶ್ರೀ ಎ. ಬಿ. ಜಕನೂರು.—ತಾವು ಎಷ್ಟು ಭಾಷಣ ಮಾಡಿದರೂ ಸಹಿತ ಎಷ್ಟು ಬಡಜನತೆಗೆ ಹೇಳಿದರೂ ಸಹಿತ ಜನತೆ ನಿಮ್ಮನ್ನು ನಂಬುವುದಿಲ್ಲ, ತಮಗೆ ಮತ ಕೊಡುವುದಿಲ್ಲ ನೀವು ಮಾತ್ರ ಯಾವಾಗಲೂ ನಂಬಿಕೊಂಡೆ ಮಾತನಾಡುತ್ತೀರಿ, ಮಾನ್ಯ ಅಧ್ಯಕ್ಷರೇ ಪಬ್ಲಿಕ್ ಅಂಡರ್‌ಟೇಕಿಂಗ್ ಆದಮೇಲೆ ಎರಡು ವಿಷಯಗಳನ್ನು ಹೇಳಿದ್ದಾರೆ, ಸುಧಾ ಅಂಡ್ ಕಂಪೆನಿಯನ್ನು ಸೀಸ್ ಮಾಡಿದಿರಿ, ಇದರಿಂದ ಕಾರ್ಮಿಕರ ಸ್ಥಿತಿಗತಿಗಳು ಬಹಳ ಕೆಟ್ಟಿದೆ ಎಂದು ಹೇಳಿದರು. ಅನಂತರ ಬಿನ್ನಿ ಕಾರ್ಮಿಕರ ಬಗ್ಗೆಯೂ ಮಾನ್ಯ ಸದಸ್ಯರು ಹೇಳಿದರು. ಅವರು ಕ್ಲೋಸ್ ಮಾಡಿದಂಥ ವಿಷಯವನ್ನು ತಿಳಿಸಿದ್ದಾರೆ. ಅದರ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಸುಪ್ರೀಮ್ ಕೋರ್ಟ್ ಡಿಸಿಷನ್ ಇದೆ. ಬಂದ್ ಮಾಡುವುದಕ್ಕೆ ಅಧಿಕಾರವಿದೆ ಎಂದು ಒಂದು ಸುಪ್ರೀಮ್ ಕೋರ್ಟ್ ಡಿಸಿಷನ್‌ಇದೆ. ಕ್ಲೋಸ್ ಮಾಡುವ ಮುಂದೆ ಅವರು ಕೆಲವೊಂದು ಪ್ರೊಸೀಜರ್ ಫಾಲೋ ಮಾಡಬೇಕಾಗುತ್ತದೆ, ಲೇಬರರ್ಸ್‌ಗೆ ಕೊಡಬೇಕಾದ ಬೆನಿಫಿಟ್ ಏನು ಇರುತ್ತದೋ ಅದೆಲ್ಲವನ್ನು ಕೊಡಬೇಕಾಗುತ್ತದೆ. ಅದನ್ನು ಅವರು ಕೊಡುತ್ತಿದ್ದಾರೋ ಇಲ್ಲವೋ ಎನ್ನುವುದನ್ನು ನೋಡತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ. ನಮ್ಮ ಲೇಬರ್ ಡಿಪಾರ್ಟ್‌ಮೆಂಟ್ ಈ ಪ್ರಕಾರವಾಗಿ ನಾವು ನೋಡುತ್ತಾ ಇದ್ದೇವೆ. ಅವರಿಗೆ ನೋಟೀಸ್ ಕೊಟ್ಟಿದ್ದೇವೆ. ಅವರಿಗೆ ನಾವು ಹೇಳುವುದೇನೆಂದರೆ ಕೋಆಪರೇಟೀವ್ ಸೊಸೈಟಿಯನ್ನು ಏತಕ್ಕೆ ರನ್ ಮಾಡಬಾರದು ಎಂದು. ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ ಈವತ್ತು ಅವರನ್ನು ಕಂಡುಬಂದಿದ್ದೇನೆ. ಕೋ ಆಪರೇಟೀವ್ ಸೊಸೈಟಿ ಮಾಡಿ, ಅದನ್ನು ಮಾಡಿದರೆ ನಮಗೆ ಬಹಳ ಆನಂದ, ಸರ್ಕಾರದಿಂದ ಏನೇನು ಸೌಕರ್ಯಗಳು ಕೊಡಬೇಕೋ ಅದೆಲ್ಲವನ್ನು ಕೊಡುವುದಾಗಿ ನಾವು ಮ್ಯಾನೇಜ್‌ಮೆಂಟ್‌ಗೆ ಈಗಾಗಲೇ ಹೇಳಿದ್ದೇವೆ. ಮ್ಯಾನೇಜ್‌ಮೆಂಟಿಗೂ ಕೇಳುತ್ತೇವೆ ಏನಾದರೂ ಮೆಷಿನರಿ ಕೊಡಲಿಕ್ಕೆ ಬರುತ್ತದೆ ಎಂದರೆ ಅವರು ಏನು ಹೇಳುತ್ತಾರೆ ಅದರ ಬಗ್ಗೆ ಮಾತನಾಡಲು ಹೇಳಿದ್ದೇನೆ.

ಶ್ರೀ ಐ. ಪಿ.ಡಿ. ಸಾಲಪ್ಪ —ಸುಧಾ ಅಂಡ್ ಕಂಪೆನಿ ಬಗ್ಗೆ ಏನಾದರೂ ಒಂದು ಆಶ್ವಾಸನೆಯನ್ನು ಕಾರ್ಮಿಕರ ಮಂತ್ರಿಗಳು ಕೊಡುತ್ತೀರಾ ? ಅವರುಗಳು ಶೇರನ್ನು ಕೂಡಿಸಿ ಒಂದು ಸಂಸ್ಥೆಯನ್ನು ಮಾಡುವ ಬದಲು ಒಂದು ಸಣ್ಣ ಫ್ಯಾಕ್ಟರಿಯನ್ನು ಮಾಡಿ ಅವರಿಗೆ ಕೆಲಸ ಒದಗಿಸಿಕೊಟ್ಟರೆ ಕೆಲಸ ಸಿಕ್ಕಿ ಅನ್ ಎಂಪ್ಲಾಯ್‌ಮೆಂಟ್ ಸಮಸ್ಯೆ ಬಗೆಹರಿಯುತ್ತದೆಂದು ನಾನಾದರೂ ಸಲಹೆ ಮಾಡುತ್ತೇನೆ.

ಶ್ರೀ ಎ. ಬಿ. ಜಕ್ಕನೂರು —ಈಗ ಸುಧಾ ಅಂಡ್ ಕಂಪೆನಿಯ ಬಗ್ಗೆ ಹೇಳಲಿಲ್ಲ. ಬಿನ್ನಿ ಕಾರ್ಮಿಕರ ಬಗ್ಗೆ ಹೇಳಿದ್ದೇನೆ. ಇದು ಅಲ್ಲದೆ ಅಧ್ಯಕ್ಷರೆ ಗೌವರ್ನಮೆಂಟ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ, ಕಾರ್ಪೊರೇಷನ್‌ನಲ್ಲಿ ಜನರು ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿರುತ್ತಾರೆ, ಕ್ಯಾಷುಯಲ್ ಲೇಬರರ್ಸ್ ಆಗಿ ಕೆಲಸ ಮಾಡುತ್ತಿರುತ್ತಾರೆ ಅವರಿಗೆ ಸಂಬಳ ಬಹಳ ಕಡಿಮೆ ಇದೆ ಎಂದು ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ ನಾವು ಮಿನಿಮಮ್ ವೇಜಸ್ ಫಿಕ್ಸ್ ಮಾಡುತ್ತಾ ಇದ್ದೇವೆ. ನೋಟೀಫಿಕೇಶನ್ ೨೨-೭-೮೧ರಲ್ಲಿ ಹೊರಡಿಸಿದ್ದೇವೆ. ಮಾನ್ಯ ಅಧ್ಯಕ್ಷರೇ ಇಲ್ಲಿ ಒಂದು ಮಹತ್ವದ ವಿಷಯವನ್ನು ಹೇಳುವುದಕೆ ಇಚ್ಛಿಪಡುತ್ತೇನೆ. ನಮ್ಮ ಸರ್ಕಾರದವರು ಮಿನಿಮಮ್ ವೇಜಸ್‌ಗಳನ್ನು ರಿವೈಸ್ಡ್ ಮಾಡುತ್ತಾ ಇದ್ದೇವೆ. ಅವು ಈರೀತಿ ಇವೆ. ಕೆಲವೊಂದು ಹೊಸ ವೇಜಸ್‌ಗಳನ್ನು ಫಿಕ್ಸ್ ಮಾಡುವ ಬಗ್ಗೆ ಈ ಸಾರಿ ೨೬ ಇಂಡಸ್ಟ್ರಿಯಲ್ಸ್ ಮಿನಿಮಮ್ ವೇಜಸ್ ಫಿಕ್ಸ್ ಮಾಡುವುದಕ್ಕೆ ಸರ್ಕಾರ ಈಗಾಗಲೇ ಕ್ರಮ ಕೈಗೊಂಡು ಪ್ರಿಲಿಮಿನರಿ ನೋಟೀಫಿಕೇಷನ್ ಇಷ್ಯೂ ಮಾಡಲಿಕ್ಕೆ ಹುಕ್ಕುಂ ಕೊಡಲಾಗಿದೆ. ಫ್ಯಾಕ್ಟರಿಯವರು ಅವರಿಗೆ ಕಾಯಿದೆ ಪ್ರಕಾರ ೨ ತಿಂಗಳ ಮುಂಚಿತವಾಗಿ ನೋಟೀಸ್ ಕೊಡಬೇಕಾಗುತ್ತದೆ. ಅವರ ಅಬ್‌ಜಕ್ಷನ್ ಹೀಯರ್‌ಮಾಡಿ ಸ್ಟೇಟ್ ಅಡ್ವೈಸರಿ ಬೋರ್ಡ್ ಮೀಟಿಂಗ್ ಕರೆದು ಅದರಲ್ಲಿ ಇಟ್ಟು ಮುಂದೆ ಫೈನಲ್

ನೋಟಿಫಿಕೇಶನ್ ಕೊಡಲಾಗುವುದು. ಇಷ್ಟೇ ಅಲ್ಲದೆ ಮಾನ್ಯ ಸದಸ್ಯರು ಹೇಳತಕ್ಕಂಥದ್ದು ಅಗ್ರಿಕಲ್ಚರ್ ಲೇಬರರ್ಸ್‌ಗೆ ಏನು ಮಾಡಿದ್ದೀರಿ ಎಂದು ಕೇಳಿದ್ದಾರೆ. ಅನ್ ಆರ್ಗನೈಸ್ ಲೇಬರರ್ಸ್‌ಗೆ ಈವತ್ತು ಹಳ್ಳಿಗಳಲ್ಲಿ ಎರಡು ರೂಪಾಯಿ ಸಿಕ್ಕುತ್ತಿಲ್ಲ. ಅಂಥ ಪರಿಸ್ಥಿತಿಯಲ್ಲಿ ಇದ್ದಾರೆ. ಮಾನ್ಯ ಕಾರ್ಮಿಕ ಧುರೀಣರು ಬೆಂಗಳೂರಿನಲ್ಲಿ ಕುಳಿತು ಫ್ಯಾಕ್ಟರಿ ಕೆಲಸ ಮಾಡುವಾಗ ಕಾರ್ಮಿಕರನ್ನು ಆರ್ಗನೈಸ್ ಮಾಡುವುದನ್ನು ಬಿಟ್ಟು ಹಳ್ಳಿಗಳಿಗೆ ಹೋಗಿ ಹಳ್ಳಿಗಳಲ್ಲಿರತಕ್ಕಂಥ ಜನರಿಗೆ, ಅಗ್ರಿಕಲ್ಚರರ್ ಲೇಬರರ್ಸ್‌ನ್ನು ಆರ್ಗನೈಸ್ ಮಾಡಿ ಅವರಿಗೆ ಅನುಕೂಲ ಮಾಡಿದರೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಇಲ್ಲಿ ಏನು ಮಾಡುತ್ತೀದ್ದೀರಿ ಎಂದರೆ ಯೂನಿಯನ್‌ಗಳಲ್ಲಿ ರಾಜಕೀಯ ಪ್ರವೇಶ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ನಿಮ್ಮ ಪಕ್ಷದಲ್ಲಿಯೇ ಇರತಕ್ಕಂಥ ಅನೇಕ ಜನರನ್ನು ಹೊರಗೆ ಹಾಕಿದಮೇಲೆ ಈ ಕಾರ್ಮಿಕರ ಸಂಘಟನೆ ಮಾಡಿದರು.

ಶ್ರೀ ಎ. ಬಿ. ಜಕನೂರು.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಅಧ್ಯಕ್ಷರೇ ಎ.ಐ.ಸಿ.ಪಿ. ಎಚ್.ಎಂ.ಎಸ್., ಕೆ.ಎಂ.ಎಸ್. ಎಂದು ಏನು ಇರುತ್ತದೆ ಅದರಂತೆ ಇಂಟಕ್ ಕೂಡ ಇದೆ. ಇದು ಒಂದು ಟ್ರೇಡ್ ಯೂನಿಯನ್. ತಾವು ಒಂದು ಟ್ರೇಡ್ ಯೂನಿಯನ್‌ನಲ್ಲಿ ಇದ್ದು ಮತ್ತೊಂದು ಟ್ರೇಡ್ ಯೂನಿಯನ್‌ನಲ್ಲಿ ಇರುವುದಕ್ಕೆ ಕಾರಣವೇನು. ತಾವು ಹೇಗೆ ವರ್ಕರ್ಸ್‌ನ್ನು ಹಿಡಿಯುತ್ತೀರೋ ಮೆಜಾರಿಟಿ ತಮ್ಮ ಕಡೆ ಮಾಡಿಕೊಂಡು ಯೂನಿಯನ್‌ನ್ನು ಕ್ಯಾಪ್ಚರ್ ಮಾಡುವುದಕ್ಕೆ ಪ್ರಯತ್ನ ಹೇಗೆ ಮಾಡುತ್ತಿರೋ ಹಾಗೆ ಅವರು ಮಾಡಬಹುದು. Minimum wages being fixed under Minimum Wages Act.

Subject :—

1. Stone Breaking, Stone Crushing Operations carried in quarries.
2. Stone breaking/stone crushing.
3. Cotton Ginning and Cotton pressing manufactory.
4. Employment in Printing Press.
5. Employment in maintenance of Roads and Bridges
6. Employment in Cardamon Malais and Cardamom Gardens.
7. Coffee curing works.
8. Employment in Khandasari Sugar Factories.
9. Employment in Agriculture Soil Conservation.
10. Employment in Tailoring Industry.
11. Employment in Stoneware and Ceramics.
12. Employment in Rice Flour and Dhal Mills.
13. Minimum wages in Film Industry.
14. Employment in Tanneries and Leather Manufactory.
15. Employment in Agarbathi Industry.
16. Employment in Tile Industry.
17. Employment in Beedi Industries.
18. Employment in Plywood Industry.
19. Employment in residential Hotels and Eating Houses.
20. Employment in Toddy Tapping Industry.
21. Employment in Carpentary and Saw Mills.
22. Public Motor Transport.
23. Agriculture.
24. Cinchona Rubber Tea or Coffee plantations.
25. Carpentary and Saw Mill Industry.
26. Residential Hotels and Eating Houses (other than categories already fixed).

ತಾವು ಮಾಡಿದರೆ ಬಹಳ ಉತ್ತಮ. ಎರಡನೆಯವರು ಮಾಡುವುದಾದರೆ ತಪ್ಪು ಈ ರೀತಿ ತಾವು ದಯ ವಿಟ್ಟು ಅನುಸರಿಸಬಾರದು. ಕಾಯಿದೆ ಗೊತ್ತಿಲ್ಲ, ಟ್ರೇಡ್ ಯೂನಿಯನ್ ಎಂದರೆ ಗೊತ್ತಿಲ್ಲ, ಅಂದರೆ ತಮಗೆ ಏನು ಗೊತ್ತಿದೆ, ತಾವು ಈಗ ಕಲಿತಿದ್ದೀರಿ, ಅವರೂ ಕೂಡ ಕಲಿಯಬಹುದು. ಅದು ಏನು ಮಹಾ ವಿದ್ಯೆಯಲ್ಲ. ತಮಗೆ ಎಲ್ಲ ಗೊತ್ತಿದೆ, ಅವರಿಗೆ ಏನು ಗೊತ್ತಿಲ್ಲವೆಂದು ದೂಶಿಸಬಾರದು. ತಮಗೆ ಮೊದಲು ಏನು ಗೊತ್ತಿತ್ತು.

ಶ್ರೀ ಮೈಕೇಲ್ ಫರ್ನಾಂಡೀಸ್.—ನಾನು ಒಂದೇಸಾರಿ ಪ್ರೆಸಿಡೆಂಟ್ ಆಗಲಿಲ್ಲ. ಡೈರೆಕ್ಟರಾಗಿ, ಕಮಿಟಿಯ ಪ್ರೆಸಿಡೆಂಟ್ ಆಗಿದ್ದೇನೆ. ಈ ರೀತಿಯಾಗಿ ನಾನು ಬೆಳೆದುಬಂದಿದ್ದೇನೆ. ನಾನು ತಂದೆಯಾಗುವ ಮೊದಲೇ ತಾತಾ ಆಗಲಿಲ್ಲ. ಮೊದಲು ತಂದೆಯಾಗಿ ಆನಂತರ ತಾತಾ ಆಗಬೇಕು.

ಶ್ರೀ ಎ.ಬಿ. ಜಕನೂರ್.—ಮಾನ್ಯ ಸದಸ್ಯರು ತಾವೇ ಎಲ್ಲಾ ಬಲ್ಲರು ಎಂದು ತಿಳಿದುಕೊಂಡಿದ್ದಾರೆ. ತಮಗೆ ಎಲ್ಲಾ ಗೊತ್ತಿದೆ ಬೇರೆಯವರಿಗೆ ಏನೂ ಗೊತ್ತಿಲ್ಲಾ ಎಂದ ತಿಳಿದುಕೊಂಡಿದ್ದಾರೆ. ಕೊರವಂಜಿ " ನಾನು ಎಲ್ಲಾ ಬಲ್ಲೆ " ಎಂದು ಹೇಳುತ್ತಾಳೆ. ಆ ಪ್ರಕಾರ ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಅದು ತಪ್ಪು. ಎಲ್ಲರೂ ಇಂದು ನೈಪುಣ್ಯರಿರುವುದಿಲ್ಲ. ತಮ್ಮಂತೆ ಎಲ್ಲರಿಗೂ ಗೊತ್ತಿದೆ ಎಂದು ತಿಳಿಯ ಬೇಕಿಲ್ಲ, ಹಾಗೂ ಯಾರಿಗೂ ಏನೂ ಗೊತ್ತಿಲ್ಲ ಎಂದೂ ಅನ್ನಬಾರದು. ಅವರು ನಾನು ಏನೂ ಹೇಳುವು ದಿಲ್ಲ ಎಂದು ತಿಳಿದುಕೊಂಡು ಟೀಕೆಗಳನ್ನು ಮಾಡಿ, ಮಾಡಿ ಕಟ್ಟಕಡೆಗೆ ಒಂದೆರಡು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವು ಯೋಗ್ಯವಾದ ಸಲಹೆಗಳಿವೆ. ಐ.ಡಿ. ಆಕ್ಟ್ ೨೦–೩೦ ವರ್ಷದ್ದು ಇದೆ, ಅದರಲ್ಲಿ ಏನು ೫೦೦ ರೂಪಾಯಿಗಳು ಎಂದು ವ್ಯಾಲ್ಯೂ ಮಾಡಿದ್ದಾರೆ ಅದು ಈಗಿನ ಸಂಬಳ ಸಾರಿಗೆಗೆ ಹೋಲಿಸಿ ದರೆ ತೀರಾ ಕಡಿಮೆ ಇದೆ. ಈ ದಿನ ಸಣ್ಣ ಸಣ್ಣ ಫ್ಯಾಕ್ಟರಿಯಲ್ಲಿಯೂ ೧,೦೦೦–೧,೨೦೦ ರೂಪಾಯಿ ಪಗಾರವನ್ನು ಪಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಆ ಒಂದು ಮೌಲ್ಯವನ್ನು ೨,೦೦೦ ರೂಪಾಯಿಗಳಿಗೆ ಏರಿಸುವುದು ಯೋಗ್ಯ ಸಲಹೆಯೆಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದವರು ಈಗಾಗಲೇ ಈ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಈ ವಿಷಯದ ಬಗ್ಗೆ ಅವರು ಈಗಾಗಲೇ ತಿದ್ದುಪಡಿಯನ್ನು ತರುವ ವರಿದ್ದಾರೆ. ಯೂನಿಯನ್ ಬಗ್ಗೆ ಹೇಳುತ್ತಾ It has to be suitable amended ಎಂದಿದ್ದಾರೆ. ಒಂದೇ ಯೂನಿಯನ್ ಇರಲಿ ಎಂದು ಏಕೆ ಹೇಳಲಿಲ್ಲವೋ ಗೊತ್ತಿಲ್ಲ. ನನ್ನ ವೈಯುಕ್ತಿಕ ಅಭಿಪ್ರಾಯ ಹೇಳುವುದಾದರೆ, ಹೆಚ್ಚು ಯೂನಿಯನ್ಸ್ ಆದಾಗ ಒಂದು ಯೂನಿಯನ್‌ನವರು ಮೇನೇಜ್‌ಮೆಂಟ್‌ಕಡೆ ಒಲವು ತೋರಿಸಿದರೆ ಮತ್ತೊಂದು ಯೂನಿಯನ್‌ನವರು ಇನ್ನೊಂದುಕಡೆ ಒಲವು ತೋರಿಸುವುದರಿಂದಾಗಿ ಅಲ್ಲಿನ ಕಾರ್ಮಿಕರಿಗೆ ಬಹಳ ತೊಂದರೆಯಾಗುತ್ತದೆ. ಒಂದೇ ಯೂನಿಯನ್ ಇರಬಹುದಾಗಿತ್ತೆಂದು ಮಾನ್ಯ ಸದಸ್ಯರು ಹೇಳಬಹುದಾಗಿತ್ತು, ಏಕೆ ಹೇಳಲಿಲ್ಲ ಎಂಬುದು ನನಗೆ ಗೊತ್ತಿದೆ. ಇದನ್ನೂ ಸಹಾ ಕೇಂದ್ರಸರ್ಕಾರದವರು ವಿಚಾರ ಮಾಡುತ್ತಿದ್ದಾರೆ. Secret Ballet checkup system ಇರ ಬೇಕೆಂದು ಮಾನ್ಯ ಸದಸ್ಯರು ಹೇಳಿದರು, ಇದು ಬಹಳ ಯೋಗ್ಯ ಸಲಹೆ ಇದೆ. ಒಬ್ಬೊಬ್ಬ ಯೂನಿ ಯನ್ ಲೀಡರ್ಸ್ ಒಂದೊಂದು ಯೂನಿಯನ್‌ನ್ನು ಹಿಡಿದುಕೊಂಡಿರುತ್ತಾರೆ. ಅವರು ಬೈ ಲಾ ಪ್ರಕಾರ ೨ ವರ್ಷಕ್ಕೊಮ್ಮೆ ಚುನಾವಣೆ ನಡೆಸುವುದಿಲ್ಲ. ಹಾಗೂ ಮುಂದುವರಿಸಿಕೊಂಡು ಹೋಗುತ್ತಾರೆ. ಮತ್ತೆ ಅಲ್ಲಿಗೆ ಇನ್ನೊಬ್ಬ ಯೂನಿಯನ್‌ನವರು ಬಂದು ಕೈ ಹಾಕಿ ಗಲಾಟೆ ಮಾಡುವುದನ್ನು ತಪ್ಪಿಸುವ ಸಲುವಾಗಿ ಒಂದು ಯೋಗ್ಯ ಸಲಹೆ ಇದೆ. ನಂತರ Laws relating to Gratuity. E S. I. and Provident fund, ವಗೈರೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವೊಂದು ಕಡೆ ಹಾಗೆ ಆಗುವುದು ಕಂಡುಬಂದಿದೆಯೆಂದು ಹಾಗೆ ಹೇಳುತ್ತಿದ್ದಾರೆ. ಇದು ಎಲ್ಲೂ ಹೆಚ್ಚು ಆಗಿಲ್ಲ. ಇದು ಅಲ್ಲಲ್ಲಿ ಆಗಿರಬಹುದು. ಕೆಲವೊಂದು ಕಡೆ ಸ್ಟ್ರೇ ಕೇಸಸ್ ಆಗಿರಬಹುದು. ಇಂತಹವನ್ನೇ ತೆಗೆದುಕೊಂಡು ಕೆಲವರು ವಿರೋಧ ಪಕ್ಷದ ಮಾನ್ಯ ಸದಸ್ಯರ ಬಳಿ ಹೋಗಿ, ಎಲ್ಲಾ ಹೀಗೇ ನಡೆದಿದೆ ಎಂದು ಹೇಳುತ್ತಾರೆ. ಆಗ ಇದನ್ನು ಕೇಳಿದ ಕೂಡಲೇ ಇದು ನಿಜವಿರಬಹುದೆಂದು ತಿಳಿದುಕೊಂಡು ಹೀಗೆ ಮಾತನಾಡಿರಬಹುದು. ಇವು ಬಹಳ ಇಲ್ಲ. ಈ ಬಗ್ಗೆ ಕೆಲವೊಂದು ದೂರುಗಳು ಬಂದಿವೆ ಅವುಗಳನ್ನು ನಾವು ಸರಿಪಡಿಸುತ್ತಿ ದ್ದೇವೆ. ಈ ಬಗ್ಗೆ ನಾವು ತಿದ್ದುಪಡಿಗಳನ್ನು ತರುವಾಗ ಪರಿಶೀಲಿಸಬಹುದು. ಇನ್ನು ಅನೇಕ ಸದಸ್ಯರು ಕ್ಲೋಶರ್ಸ್ ಬಗ್ಗೆ ಹೇಳಿದ್ದಾರೆ. ಕ್ಲೋಸ್ ಮಾಡುವ ಬಗ್ಗೆ ಅಧಿಕಾರ ಇದ್ದರೂ ಸಹಾ ಅವರು ಕ್ಲೋಸ್ ಮಾಡಿದ ನಂತರ ಎಷ್ಟೋ ಜನ ಕೆಲಸಗಾರರು ಕೆಲಸವಿಲ್ಲದೇ ಹೋಗಿಬಿಡುತ್ತಾರೆ. ಮತ್ತೆ ಅವರಿಗೆ

ನೌಕರಿ ಸಿಗುವುದಿಲ್ಲ. ಅವರು ಕ್ಲೋಸ್ ಮಾಡುವುದು ಅವರ ಪ್ರೋರೋಗೇಟಿವ್ ಎಂದು ಸುಪ್ರಿಮ್ ಕೋರ್ಟಿನವರು ತೀರ್ಪು ಕೊಟ್ಟಿದ್ದರೂ ಸಹಾ ನಮ್ಮ ಕಾರ್ಮಿಕ ಇಲಾಖೆ ಮಾನವೀಯತೆಯ ದೃಷ್ಟಿ ಯಿಂದ ಅವರನ್ನು ಕರೆದು ಆ ಬಗ್ಗೆ ಚರ್ಚೆ ಮಾಡುತ್ತಿದೆ. ಕೆಲವೊಂದು ಜನ ತಮ್ಮ ಸಂಸ್ಥೆಯನ್ನು ಮುಚ್ಚಿ ನಂತರ ಮತ್ತೊಂದು ಹೆಸರಿನಿಂದ ಪ್ರಾರಂಭ ಮಾಡುವ ನಿದರ್ಶನಗಳು ಇವೆ. ಆಗ ಹಳೆಯ ಕಾರ್ಮಿಕರನ್ನು ತೆಗೆದುಕೊಳ್ಳುವುದಕ್ಕೆ ಅವರು ಹೋಗುವುದಿಲ್ಲ. ಇಂತಹ ಒಂದೆರಡು ಉದಾಹರಣೆಗಳು ನನ್ನ ಗಮನಕ್ಕೆ ಬಂದಾಗ ನಾನು ಅವರನ್ನು ಕರೆಸಿ ಮಾನವೀಯತೆ ದೃಷ್ಟಿಯಿಂದ ಮತ್ತೆ ಅದೇ ನೌಕರ ರನ್ನು ಕೆಲಸಕ್ಕೆ ತೆಗೆದುಕೊಂಡು ಮುಂದುವರಿಸಬೇಕೆಂದೂ ಸಹಾ ಹೇಳಿದ್ದೇನೆ. ಏನು ನನ್ನ ಇಲಾಖೆಯ ಬಗ್ಗೆ ಮಹತ್ವವಾದ ಸಲಹೆಯನ್ನು ಕೊಟ್ಟಿದ್ದಾರೆ ಅವರ ಬಗ್ಗೆ ನಾನು ಅಭಾರಿಯಾಗಿದ್ದೇನೆ. ಇನ್ನು ಶ್ರೀಮತಿ ಪ್ರಮಿಳಾ ಅವರು ಒಂದೆರಡು ವಿಷಯಗಳನ್ನು ಹೇಳಿದರು. ಮೈಕೋದಲ್ಲಿ ಹೆಣ್ಣುಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ, ಲಗ್ನ ಆದವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಹಾಗೂ ಕೆಲಸಕ್ಕೆ ಸೇರಿದ ಮೇಲೆ ಲಗ್ನ ಆದರೆ ಅವರು ಕೆಲಸವನ್ನು ಬಿಡಬೇಕೆಂದು ಇದೆ ಎಂದು ಹೇಳಿದರು. ಇದು ಏಕೆ ಇದೆಯೋ ಗೊತ್ತಿಲ್ಲ. ಆದರೆ ಮೇನೇಜ್‌ಮೆಂಟ್‌ನವರು ಇಂತಿಂಥಹವರನ್ನು ನೇಮಕ ಮಾಡಿಕೊಳ್ಳಬೇಕೆಂದೇನೋ ಮಾಡಿಕೊಂಡಿರುತ್ತಾರೆಂದು ಕಾಣುತ್ತದೆ ನಾವು ಅದರಲ್ಲಿ ಕೈ ಹಾಕಿ ಹೀಗೆ ಮಾಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದನ್ನು ಮಾಡಬೇಕಾದರೆ then we have to amend Laws. ಇದನ್ನು ಕೇಂದ್ರ ಸರ್ಕಾರದವರು ಮಾಡಬೇಕಾಗುತ್ತದೆ. ಐ.ಡಿ. ಆಕ್ಟ್ ಕೇಂದ್ರ ಸರ್ಕಾರದ ಒಂದು ಆಕ್ಟ್ ಇದೆ. ಅದ ರಲ್ಲಿ ಏನಿದೆಯೋ ಅದನ್ನು ನೋಡೋಣ. ಇನ್ನು ಅವರು ಸುಧಾ ಅಂಡ್ ಕಂಪನಿ ಬಗ್ಗೆ ಹೇಳಿದರು. ಇದು ಸರಬರಾಯಿ ಹರಾಜು ಮಾಡುವುದರಲ್ಲಿ ಭಾಗವಹಿಸುವ ಒಂದು ಕಂಪನಿ ಇದೆ. ಮೊದಲು ಇದು ಒಂದು ಹೆಸರಿನಲ್ಲಿ ನಡೆಯುತ್ತಿದ್ದು ಅದನ್ನು ಮುಚ್ಚಿ ಸುಧಾ ಅಂಡ್ ಕಂಪನಿ ಎಂದು ಮಾಡಿದರು. ಅವರು ಸುಧಾ ಅಂಡ್ ಕಂಪೆನಿ ಎಂದು ಮಾಡಿದಾಗ ಅವರು ಹಿಂದಿನ ವರ್ಕರ್ಸ್‌ನ್ನು ತೆಗೆದುಕೊಂಡಿದ್ದರು. ಈಗ ಅದನ್ನು ಕ್ಲೋಸ್ ಮಾಡಿ ಅದರಲ್ಲಿ ಇದ್ದ ಪಾರ್ಟ್‌ನರ್ಸ್ ಹಾಗೂ ಮತ್ತೆ ಕೆಲವರು ಹೊಸಬರು ಸೇರಿಸಿ ಕೊಂಡು ಮತ್ತೆ ಬೇರೆ ಹೆಸರಿನಲ್ಲಿ ಪ್ರಾರಂಭ ಮಾಡಿದ್ದಾರೆ. ಆ ಕಂಪೆನಿಯಲ್ಲಿ ಹೆಣ್ಣುಮಕ್ಕಳೂ ಸಹಾ ಕೆಲಸಕ್ಕೆ ಇದ್ದರು. ಆ ಒಂದು ಕಂಪೆನಿಯವರನ್ನು ಕರೆಸಿ ಹೀಗೆ ನೀವು ಚೀಟ್ ಮಾಡುವುದು ಸರಿಯಲ್ಲ ಹೀಗೇ ಚೀಟ್ ಮಾಡುತ್ತಾ ಹೊರಟರೆ ಮುಂದಿನ ವರ್ಷ ಅರ್‍ರ್ಯಾಕ್ ಹರಾಜು ಹಿಡಿಯಲಿಕ್ಕೆ ಅನುಕೂಲ ಮಾಡಿಕೊಡುವುದಿಲ್ಲ, ಅಷ್ಟೇ ಅಲ್ಲ ಎಕ್ಸೈಸ್ ಇಲಾಖೆಗೆ ಬರೆದು ನೀವು ಭಾಗವಹಿಸಬಾರದ ಹಾಗೆ ಮಾಡು ತ್ತೇವೆ, ಸರಿಯಾಗಿ ಸಂಬಳ ಕೊಡಿ ಹಾಗೂ ಹಿಂದಿನವರನ್ನು ಕೆಲಸಕ್ಕೆ ತೆಗೆದುಕೊಂಡು ಅವರಿಗೆ ಕೊಡತಕ್ಕ ಸೌಕರ್ಯಗಳನ್ನು ಕೊಡಿ ಎಂದು ಹೇಳಿ ಅದನ್ನು ಈಗಾಗಲೇ ಮುಗಿಸಿದ್ದೇವೆ. ಆದರೆ ಈ ವರ್ಷ ಏನಾಗಿದೆ ಎಂಬುದನ್ನು ನೋಡೋಣ. ಈ ವರ್ಷವೂ ಅವರು ಲೇಬರರ್ಸ್‌ನ್ನು ಹಿಡಿದಿದ್ದರೆ ಅವರನ್ನು ತೆಗೆದು ಕೊಳ್ಳುವ ಬಗ್ಗೆ ನಾವು ಪ್ರಯತ್ನಿಸುತ್ತೇವೆ.

ಇನ್ನು ಮಾನ್ಯ ಆರುಮುಗಂ ಅವರು ಒಂದು ಮಹತ್ವವಾದ ಅಂಶವನ್ನು ಗಮನಕ್ಕೆ ತಂದಿದ್ದಾರೆ. ಈ ದಿನ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಸುಮಾರು ೬ ಲಕ್ಷ ಜನ ಲೈವ್ ರಿಜಿಸ್ಟರ್‌ನಲ್ಲಿ ಇದ್ದಾರೆ. ಇವರ ಹೆಸರುಗಳನ್ನು ಇಲಾಖೆಗಳಿಗೆ ಕಳುಹಿಸಿದರೆ ಅವರಿಗೆ ನೌಕರಿ ಕೊಡುವುದಿಲ್ಲವೆಂದು ಹೇಳಿದ್ದಾರೆ. ಬಿ.ಡಬ್ಲ್ಯು.ಎಸ್.ಎಸ್.ಬಿ.ನಲ್ಲಿ ನೌಕರರನ್ನು ನೇಮಕ ಮಾಡಿಕೊಂಡರು, ಅಡ್ವಕೇಟ್ ಜನರಲ್‌ನಲ್ಲಿ ಕೆಲವು ಕಾರಕೂನರನ್ನು ನೇಮಕ ಮಾಡಿಕೊಂಡರು ಅವರುಗಳು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಬಂದಂತಹವರನ್ನು ಎಷ್ಟು ಸಂಖ್ಯೆಯಲ್ಲಿ ನೇಮಕ ಮಾಡಿಕೊಂಡರೋ ಗೊತ್ತಿಲ್ಲವೆಂದು ಹೇಳಿದ್ದಾರೆ. ಕಂಪಲ್ಸರಿ ನೋಟಿಫಿಕೇಷನ್ ಆಫ್ ವೇಕೆನ್ಸೀಸ್ ಆಕ್ಟ್ ಸರಿಯಾಗಿ ಇಂಪ್ಲಿಮೆಂಟ್ ಮಾಡಿಲ್ಲವೆಂದು ಹೇಳಿ ದರು. ಅದನ್ನು ಮಾಡುತ್ತಿದ್ದೇವೆ. ಆದರೆ ತಾವು ಹೇಳಿದಹಾಗೆ ಇದರಲ್ಲಿ ಸ್ವಲ್ಪ ಸ್ಲ್ಯಾಕ್ ಇದೆ. ಇವಕ್ಕೆ ಕಾರಣ ವೆಹಿಕಲ್ಸ್ ಇಲ್ಲದಿರುವುದು ಹಾಗೂ ಸ್ಟಾಫ್ ಅಭಾವದಿಂದ ಆಗಿರಬಹುದು. ಆದರೂ ಈ ಬಗ್ಗೆ ಚುರುಕುಗೊಳಿಸುತ್ತೇವೆಂದು ಹೇಳುತ್ತೇನೆ. ಈಗಾಗಲೇ ಅಲ್ಲಿನ ಅಧಿಕಾರಿಗಳು ಕೆಲವೊಂದು ಕೇಸ್‌ಗಳನ್ನು ಹಾಕಿದ್ದಾರೆ. ಕಂಪಲ್ಸರಿ ನೋಟಿಫಿಕೇಷನ್ ಆಕ್ಟ್ ಕೆಳಗಡೆ ಎಲ್ಲರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ತಮ್ಮ ವೇಕೆನ್ಸಿ ಪೊಸಿಷನ್ ತಿಳಿಸಬೇಕೆಂದು ಇದೆ. ಇದು ಸರ್ಕಾರಕ್ಕೆ ಅಪ್ಲೈ ಆಗುವುದಿಲ್ಲ. ಈಗ ಕೆಲವು ಕಡೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಹೆಸರುಗಳನ್ನು ತರಿಸಿ ಜೊತೆಗೆ ಹೊರಗಡೆ ಯಿಂದಲೂ ಅರ್ಜಿಗಳನ್ನು ಕರೆದು ಅವರಲ್ಲಿಷ್ಟು ಇವರಲ್ಲಿಷ್ಟು ಜನರನ್ನು ಸೆಲೆಕ್ಟ್ ಮಾಡಿಕೊಳ್ಳುತ್ತಿದ್ದಾರೆ.

ಈಗ ನನ್ನ ಮನಸ್ಸಿಗೆ ಒಂದು ಬಂದಿದೆ, Whether we can bring local amendments ಇದನ್ನು ಮಾಡುವುದಕ್ಕೆ ಬರುತ್ತದೆಯೋ ಅಥವಾ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಏನಾದರೂ ಮಾಡಬೇಕೆಂದು ಮುಂದಿನ ೮ನೇ ಹಾಗೂ ೫ನೇ ತಾರೀಖು ಕಾರ್ಮಿಕ ಮಂತ್ರಿಗಳ ಕಾನ್ಫರೆನ್ಸ್‌ನಲ್ಲಿ ಈ ಸಂಗತಿಯನ್ನು ತಂದು ಪ್ರಸ್ತಾಪಿಸಬೇಕೆಂದಿದ್ದೇನೆ. ಈಗ ಇಲಾಖಾ ನೇಮಕಾತಿ ಸಮಿತಿಯಿಂದ ಎಲ್ಲಾ ಇಲಾಖಾ ಹುದ್ದೆಗಳಿಗೆ ಜನರನ್ನು ಆಯ್ಕೆ ಮಾಡಲಾಗುತ್ತಿದೆ, ಇವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗೆ ಹೇಳುವುದಕ್ಕೆ ಹೋಗುವುದಿಲ್ಲ. ಹೀಗಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಏನಾಗಿದೆಯೆಂದರೆ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಇವರು ಬರೀ ಹೆಸರನ್ನು ನೊಂದಾಯಿಸಿ ವರ್ಷಗಟ್ಟಲೆ ಕಾಯುತ್ತಾರೆ, ಕೆಲಸ ಸಿಕ್ಕಿದರೆ ಸಿಕ್ಕಿತು, ಇಲ್ಲದಿದ್ದರೆ ಇಲ್ಲ. ಹಾಗೂ ಆ ಸಂಸ್ಥೆಯವರಿಗೆ ಕಳುಹಿಸಿದ ಹೆಸರುಗಳಲ್ಲಿ ಎಷ್ಟು ಜನರನ್ನು ಸೆಲೆಕ್ಟ್ ಮಾಡಿಕೊಂಡಿದ್ದೇವೆಂಬುದನ್ನೂ ಅವರು ತಿಳಿಸುವುದಿಲ್ಲ. ಹಾಗೂ ನೌಕರಿ ಸಿಕ್ಕಿದವರೂ ಸಹಾ ಇನ್ನೂ ಹೆಚ್ಚಿನ ಸಂಬಳ ಬರುವ ಕೆಲಸ ಸಿಕ್ಕಿದರೆ ಹೋಗಬಹುದೆಂದು ಇದನ್ನು ತಿಳಿಸುವುದಕ್ಕೆ ಹೋಗುವುದಿಲ್ಲ. ಇದರಿಂದಾಗಿ ಈ ಇಲಾಖೆ ಎಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕೆಂದು ಇರುತ್ತದೋ ಆ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಏನು ಕಾಯ್ದೆ ಕಾನೂನು ಮಾಡಬೇಕೋ ಅದನ್ನು ಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ಎಲ್ಲಾ ಕೈಗಾರಿಕೆಗಳವರೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕವೇ ಹೆಸರುಗಳನ್ನು ತರಿಸಿಕೊಂಡು ತಮಗೆ ಬೇಕಾದವರನ್ನು ಸೆಲೆಕ್ಟ್ ಮಾಡಿಕೊಳ್ಳಲಿ. ಆ ರೀತಿ ಮಾಡಬೇಕೇ ಹೊರತು ಲೋಕಲ್ ಮಾರ್ಕೆಟ್‌ನಿಂದ ಅರ್ಜಿಗಳನ್ನು ಅವರು ಬಂದ್ ಮಾಡಬೇಕೆನ್ನುವುದು ನನ್ನ ವೈಯುಕ್ತಿಕ ಅಭಿಪ್ರಾಯ ಇದೆ. ಇದಕ್ಕೆ ಕಾಯ್ದೆ ಇಲ್ಲ. ಇದನ್ನು ಹೇಗೆ ಮಾಡಬೇಕೆಂಬುದನ್ನು ನಾನು ವಿಚಾರ ಮಾಡುತ್ತಿದ್ದೇನೆ. ಈಗಾಗಲೇ ಕಂಪಲ್ಸರಿ ನೋಟಿಫಿಕೇಷನ್ ಆಕ್ಟ್ ಪ್ರಕಾರ ನಡೆದುಕೊಳ್ಳದವರ ಮೇಲೆ ಶೋಕಾಸ್ ನೋಟೀಸ್‌ಗಳನ್ನು ಜಾರಿ ಮಾಡಿರುತ್ತೇವೆ. ೧೯೭೮–೭೯ರಲ್ಲಿ ಈ ಬಗ್ಗೆ ೨,೬೫೦ ಜನರಿಗೆ, ೧೯೭೯–೮೦ರಲ್ಲಿ ೨,೫೯೧ ಜನರಿಗೆ ಹಾಗೂ ೧೯೮೦–೮೧ರಲ್ಲಿ ೪,೨೧೨ ಜನರಿಗೆ ಷೋಕಾಸ್ ನೋಟೀಸನ್ನು ಕೊಟ್ಟಿರುತ್ತೇವೆ. ಆ ನಂತರ ಸ್ಟ್ರಿಂಜೆಂಟ್ ಲೆಟರ್ಸ್ ಎಂದರೆ ಸೆಕೆಂಡ್ ನೋಟೀಸುಗಳನ್ನು ಸಾವಿರ ಸಂಖ್ಯೆಯಲ್ಲಿ ಕೊಟ್ಟಿರುತ್ತೇವೆ. ಆದರೆ ಪ್ರಾಸಿಕ್ಯೂಷನ್ ಮಾತ್ರ ೧೯೭೮–೭೯ರಲ್ಲಿ ೧೯, ೧೯೭೯–೮೦ರಲ್ಲಿ ೫, ಹಾಗೂ ೧೯೮೦–೮೧ರಲ್ಲಿ ೩ ಮಾಡಿದ್ದೇವೆ. ಇದು ಬಹಳ ಕಡಿಮೆ ಇದೆ.

ಇದು ಬಹಳ ಕಡಿಮೆಯಾಗಿದೆ. ಆದಕ್ಕೆ ಹೆಚ್ಚು ಹೆಚ್ಚಾಗಿ ತರಿಸಿ ಎಲ್ಲಾ ಆಫೀಸರ್‌ಗಳಿಗೂ ತಿಳಿಸಿ ಎಲ್ಲರೂ ಕೂಡ ನೋಟೀಫಿಕೇಷನ್ ಮಾಡುತ್ತಾರೆ, ಆದರೆ ಕಾಯಿದೆ ಕಾನೂನು ಪ್ರಕಾರ ಯಾರೂ ನಡೆದುಕೊಳ್ಳುವುದಿಲ್ಲ. ಅಂತಹವರ ಬಗ್ಗೆ ಕ್ರಮವನ್ನು ನಿರ್ದಯವಾಗಿ ಕೈಗೊಳ್ಳಲು ಆದೇಶವನ್ನು ಕೊಡುತ್ತಿದ್ದೇವೆ. ಮುಂದೆ ಯಾರು ಈ ರೀತಿ ಮಾಡದಂತೆ ಸರಿಯಾಗಿ ಮಾಡುವಂತೆ ನೋಡುತ್ತಿದ್ದೇವೆ. ಮೊನ್ನೆ ಬೆಂಗಳೂರು ಸಿವಿರೇಜ್ ಬೋರ್ಡ್‌ನಲ್ಲಿ ಕೆಲವೊಂದು ಅನಾನುಕೂಲತೆಗಳು ಆಗಿವೆಯೆಂದು ಮಾನ್ಯ ಸದಸ್ಯರು ತಿಳಿಸಿದರು. ೧೯೮೦–೮೧ರಲ್ಲಿ ನೋಟೀಫಿಕೇಷನ್‌ನ್ನು ೧೫೦ ವೇಕೆನ್ಸಿ ಇದೆಯೆಂದು ಮಾಡಿದ್ದರು, ಅದರಲ್ಲಿ ಹರಿಜನರಿಗೆ ೨೪ ಎಂತಲೂ ೯ ಗಿರಿಜನರಿಗೆ ಎಂತಲೂ ನೋಟಿಫಿಕೇಷನ್ ಮಾಡಿದ್ದರು, ಅದರ ಪ್ರಕಾರ ಎಂಪ್ಲಾಯಿಮೆಂಟ್ ಎಕ್ಸೇಂಜ್‌ನಿಂದ ಕೂಡ ಹೆಸರುಗಳನ್ನು ಸ್ಪಾನ್ಸರ್ ಮಾಡಿ ಕಳುಹಿಸಿದ್ದರು, ಅವರು ಕಳುಹಿಸಿದ ನಂತರ ಅವರು ಎಷ್ಟು ಜನರನ್ನು ನೇಮಕ ಮಾಡಿಕೊಂಡಿದ್ದೇವೆ ಅಥವಾ ಇಲ್ಲ ಎಂಬುದನ್ನು ಇದುವರೆಗೂ ತಿಳಿಸಿಲ್ಲ. ಮತ್ತೊಂದು ವಿಚಾರ ಕಾಯಿದೆಯಲ್ಲಿ ಅವರು ತಿಳಿಸಬೇಕೆಂದು ಕಾಯಿದೆ ಇದೆ. ಆದರೂ ಅವರು ತಿಳಿಸುತ್ತಿಲ್ಲಾ ಆದನ್ನು ತರಿಸಿ ನೋಡುತ್ತಿದ್ದೇವೆ. ವೆಹಿಕಲ್ ಬಗ್ಗೆ ಬಹಳ ಉತ್ತಮವಾದ ಸಲಹೆಯನ್ನು ಮಾಡಿದ್ದಾರೆ. ಮಾನ್ಯ ಅರ್ಥಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಇದು ಶಕ್ಯವಾಗುತ್ತದೆ ಅಂದರೆ ಕೆಲವು ವೆಹಿಕಲ್ ಒದಗಿಸುವ ಬಗ್ಗೆ ವೆಹಿಕಲ್ ಅಂದರೆ ಸ್ಟಾಫ್ ವಗೈರೆ ಇರುತ್ತದೆ ಕೂಡಲೇ ನಾನು ಪ್ರಯತ್ನ ಮಾಡುತ್ತೇನೆ. ಕೆಲವು ನೋಟೀಫಿಕೇಷನ್‌ಗಳನ್ನು ಮಾಡುವಾಗ ಅವುಗಳನ್ನು ಸರಿಯಾಗಿ ನೋಡುತ್ತಿಲ್ಲ ಎಂಬುದಾಗಿ ತಿಳಿಸಿದರು, ನಾವು ಇನ್ಸ್‌ಪೆಕ್ಷನ್ ಮಾಡುತ್ತಾ ಹೋಗುತ್ತಿದ್ದೇವೆ. ಆ ಮೇಲೆ ಅಡ್ವಕೇಟ್ ಜನರಲ್ ಆಫೀಸಿನ ಬಗ್ಗೆ ಮಾತನಾಡಿದರೂ ಅದನ್ನು ನೋಡುತ್ತಿದ್ದೇವೆ. ನಮ್ಮ ಮಾನ್ಯ ಸದಸ್ಯರಾದ ಆರ್ಮುಗಂರವರು ಬೀಡಿ ವರ್ಕರ್ಸ್ ಬಗ್ಗೆ ಒಂದು ಮಾತು ಹೇಳಿದರು. ಮೊದಲು ೧೦ ರೂಪಾಯಿ ೮೦ ಪೈಸೆ ಒಪ್ಪಿಗೆಯಾಗಿತ್ತು, ಅದನ್ನು ೮–೧೦ ಪೈಸೆಗೆ ಇಳಿಸಿದ್ದಾರೆ ಎನ್ನುವ ಒಂದು ಮಾತನ್ನು ಹೇಳಿದ್ದಾರೆ. ಕನ್‌ಸಿಲೇಷನ್ ನಡೆಸಿದ್ದಾರೆ ಆ ವೇಳೆಯಲ್ಲಿ ಡಿಮ್ಯಾಂಡ್ಸ್‌ನಲ್ಲಿ ಕನ್‌ಸಿಲೇಷನ್ ತೆಗೆದುಕೊಂಡಾಗ ಟೆಂಪರರಿ ವೇಜಸ್

ಅಂದರೆ ಮಿನಿಮಮ್ ವೇಜಸ್ ಫಿಕ್ಸ್ ಮಾಡುವ ತನಕ ಏನಾದರೂ ಹೆಚ್ಚು ಕೊಡಿ ಎಂದು ಹೇಳುತ್ತಿದ್ದರು. ಅವರು ಹೆಚ್ಚು ಬೇಡಿದರು ಅದಕ್ಕೆ ಅವರು ಕೊಡಲಿಕ್ಕೆ ಆಗುವುದಿಲ್ಲವೆಂದರು. ನಾವು ಮಧ್ಯದಲ್ಲಿ ಹೋದಾಗ ಅವರೂ ಒಲ್ಲೆ ಎಂದರು, ಇವರೂ ಒಲ್ಲೆ ಅಂದರು. ಇಮಿಡಿಯೇಟಾಗಿ ಬೇಗನೆ ವೇಜಸ್‌ನ್ನು ಫಿಕ್ಸ್ ಮಾಡುವ ದೃಷ್ಟಿಯಿಂದ ಮಿನಿಮಮ್ ಪ್ರಿಲಿಮಿನೆರಿ ವೇಜಸ್ ನೋಟೀಫಿಕೇಶನ್‌ನ್ನು ಪುಟ್ ಅಪ್ ಮಾಡಿದ್ದೇವೆ. ಕ್ಲರಿಕಲ್ ಮಿಸ್ಟೇಕ್ ಆಗಿದೆ, ಫೈಲು ಬಂತು ನಾನು ಕೂಡ ಕ್ಲಿಯರ್ ಮಾಡಿದ್ದೇನೆ. ಅದರಲ್ಲಿ ೮.೧೦ ಇದ್ದದ್ದು ೧೦ ರೂಪಾಯಿ ೮೦ ಪೈಸೆ ಆಗಿದೆ. ಇದು ಮಾತಬೇಕಾದರೆ ಸಮ್ ಸೈಂಟಿಫಿಕ್ ಬೇಸಿಕ್‌ನಲ್ಲಿಒಬ್ಬ ಮನುಷ್ಯ ೨೬ ದಿವಸ ಕೆಲಸ ಮಾಡಿದರೆ ೨೬ ದಿವಸಗಳಿಗೆ ಎಷ್ಟು?ಆ ಮೇಲೆ ೩೦ದಿವಸಗಳಿಗೆ ಎಷ್ಟಾಗುತ್ತದೆ ? ಸ್ಯಾಲರಿಯನ್ನು ಎಷ್ಟು ಕೊಡಬೇಕು ಇವನ್ನೆಲ್ಲಾ ನೋಡಬೇಕಾಗುತ್ತದೆ. ಒಂದು ಕುಟುಂಬದಲ್ಲಿ ೨ ಮಕ್ಕಳು ಹೆಂಡತಿ ಇದ್ದರೆ ಎಷ್ಟು ಖರ್ಚು ಬರುತ್ತದೆ ಈಗಿನ ಬೆಲೆ ನೋಡಿಕೊಂಡು ಪ್ರಿಲಿಮಿನರಿ ನೋಟೀಫಿಕೇಶನ್ ಮಾಡಿ ಮುಂದೆ ಏನು ಮಾಡಬೇಕೆಂಬುದನ್ನು ನೋಡಿಕೊಂಡು ಫಿ ಕ್ಸ್ ಮಾಡುವುದರಿಂದ ಕ್ಯಾನ್ಸಲೇಷನ್ ಮಾಡುವುದರಿಂದ ೮ ರೂಪಾಯಿ ೧೦ ಪೈಸೆ ಇದ್ದದ್ದು ೧೦ರೂಪಾಯಿ ೮೦ ಪೈಸೆ ಆಗಿದೆ. ಇದು ತಕ್ಷಣ ಗೊತ್ತಾದ ಕೂಡಲೇ ಸರಿಪಡಿಸಿ ಮತ್ತೊಂದು ನೋಟೀಫಿಕೇಶನ್‌ನ್ನು ಮಾಡಿದ್ದೇವೆ On some scientific basis, we are doing it. ಈ ಅಬ್‌ಜಕ್ಷನನ್ನು ಲೇಬರ್ ಸೈಡಿನಿಂದ ಕೊಡುತ್ತಾರೆ, ಟ್ರೇಡ್ ಯೂನಿಯನ್ ಲೀಡರ್ ಕೊಡುತ್ತಾರೆ, ಮಾನೇಜ್‌ಮೆಂಟ್ ಸೈಡಿನಿಂದ ಅವರೂ ಇದಕ್ಕೆ ಅಬ್‌ಜಕ್ಷನ್ ಕೊಡುತ್ತಾರೆ. There is a State Advisory Board in which labour as well as management representatives are there. The matter will come before the Board. ಬೋರ್ಡ್‌ನವರು ಏನೊಂದು ನಿರ್ಣಯ ತೆಗೆದುಕೊಂಡರೂ ಇಷ್ಟು ಆಗಬೇಕೆಂದು ಕೊಡುತ್ತಾರೆ. The Government will consider the advice of the Board and after giving due consideration to the objections, the notification will be issued ಪ್ರಿಲಿಮಿನರಿ ನೋಟೀಫಿಕೇಶನ್ ಏನು ಇದೆ ಅದನ್ನು ತಾವು ದಯವಿಟ್ಟು ೧೦ರೂಪಾಯಿ ೮೦ ಪೈಸೆಯನ್ನು ಒಮ್ಮೆಲೆ ನಾವು ಕಡಿಮೆಮಾಡಿದ್ದೇವೆಂದು ಅಥವಾ ಯಾರೋ ಹೇಳಿದರು ಎಂದು ಕಡಿಮೆ ಮಾಡಿದ್ದೇವೆಂದು ಯಾರ ಒಂದು ದೊಡ್ಡತನಕ್ಕೂ ಕೂಡ ಒಳಗಾಗಿ ಕಡಿಮೆ ಮಾಡಿದ್ದಾರೆಂದು ತಾವು ತಿಳಿದುಕೊಳ್ಳಬಾರದು. ನಾನಂತೂ ಆ ರೀತಿ ಮಾಡುವುದಿಲ್ಲ ನಮ್ಮ ಡಾ॥ ತಿಮ್ಮೇಗೌಡರು ಮಾತನಾಡುತ್ತಾ ಐ.ಟಿ.ಐ. ಇನ್ಸಿಟ್ಯೂಟ್ ಬಗ್ಗೆ ಹೇಳಿದರು. ಐ.ಟಿ.ಐ. ಇನ್ಸಿಟ್ಯೂಟ್ ಎಲ್ಲಾ ಕಡೆಗೂ ಇದ್ದಿದಿಲ್ಲ. ಚಿಕ್ಕಮಗಳೂರು ಮತ್ತು ಮಂಡ್ಯಾ ಬಿಟ್ಟು ಎಲ್ಲಾ ಕಡೆಗೂ ಇದ್ದವು ಹೊರತು, ನಾವು ಈ ವರ್ಷದಿಂದ ನಮ್ಮ ಅರ್ಥಮಂತ್ರಿಗಳ ಜೊತೆಗೂಡಿ ಜಿಲ್ಲಾಕ್ಕೊಂದಾದರು ಮಾಡಿಸೋಣವೆಂದು ತಿಳಿದು ಚಿಕ್ಕಮಗಳೂರು ಮತ್ತು ಮಂಡ್ಯಕ್ಕೆ ಕೊಟ್ಟಿದ್ದೇವೆ. ಪ್ರೈವೇಟ್‌ನವರು ನಡೆಸುತ್ತಿದ್ದಾರೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ನಾನು ಸಲಹೆ ಮಾಡಿದ್ದು ತಾಲೂಕಿಗೊಂದು ಮಾಡಿ ಎಂದು.

ಶ್ರೀ ಎ. ಬಿ. ಜಕನೂರ್.—ತಾಲೂಕಿಗೊಂದು ಮಾಡಬೇಕಾದರೆ, ೧೭೫ ತಾಲೂಕುಗಳಿವೆ. What will be the burden on the State Exchequer ? We have to consider all these things. ಬಹಳ ಕಷ್ಟವಾಗುತ್ತದೆ. ಎಷ್ಟೋ ಮೆಷಿನರಿ, ಟೀಚಿಂಗ್ ಸ್ಟಾಫ್, ಬಿಲ್ಡಿಂಗ್ ಅದಕ್ಕೆ ಬೇಕಾದ ಸಿಬ್ಬಂದಿ ಎಲ್ಲವನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಮೊದಲು ಜಿಲ್ಲಾಕ್ಕೊಂದು ಇರಲಿ ಎಂದು ಮಾಡಿದ್ದೇವೆ. ಇನ್ನು ಮುಂದೆ ಎಲ್ಲೆಲ್ಲಿ ಅವಶ್ಯ ಕಾಣಿಸುತ್ತದೆ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಎಲ್ಲೆಲ್ಲಿ ಲಭ್ಯವಾಗುತ್ತದೆ. ಆ ರೀತಿ ಒಂದೆರಡು, ನಾಕೈದು ಈ ರೀತಿ ಮಾಡಿಕೊಂಡು ಹೋಗುತ್ತೇವೆಯೋ ವಿನಹ ತಾಲೂಕಿಗೊಂದು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ ಪ್ರೈವೇಟ್‌ನವರು ಐ.ಟಿ.ಐ. ಇನ್‌ಸ್ಟಿಟ್ಯೂಟ್ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಈಗಾಗಲೇ ಅಪ್ಲಿಕೇಷನ್ ಕೊಟ್ಟಿದ್ದಾರೆ ನಾಲ್ಕಾರು ಅರ್ಜಿಗಳು ಬಂದಿವೆ. ಆರೇಳು ಜನಪ್ರೈವೇಟ್ ನವರು ಈಗಾಗಲೇ ಮಾಡುತ್ತಿದ್ದಾರೆ. ಪ್ರೈವೇಟ್‌ನವರಿಗೆ ಕೊಟ್ಟಿದ್ದೇವೆ ಅವರಿಗೆ ರೆಕಗ್‌ನೈಸ್ ಕೊಡಿಸಬಹುದು.

ಶ್ರೀ ಎಚ್. ಎಲ್, ತಿಮ್ಮೇಗೌಡ.—ಅವರಿಗೆ ಗ್ರಾಂಟ್ ಕೊಡುತ್ತೀರಾ ?

ಶ್ರೀ ಎ. ಬಿ. ಜಕನೂರ್.—ಗ್ರ್ಯಾಂಟ್ ಕೊಡಬೇಕಾದರೆ ಸರ್ಕಾರಕ್ಕೆ ಹಣ ಖರ್ಚಾಗುತ್ತದೆ. ಗ್ರ್ಯಾಂಟ್ ಕೊಡುವುದಾದರೆ ನಾವೇ ಮಾಡಲಿಕ್ಕೆ ಬರುತ್ತದೆ.

ಶ್ರೀ ಡಿ. ಟಿ. ಮಾಯಣ್ಣ.—ರೇಷ್ಮೆ ಇಲಾಖೆ ಫಾರಂನಲ್ಲಿ ಕ್ಯಾಸುಯಲ್ ಲೇಬರ್‌ಗಳಾಗಿ ಐದಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಈ ಜನರಿಗೆ ಖಾಯಂ ಮಾಡುವ ವಿಚಾರದ ಬಗ್ಗೆ ಹೇಳಬೇಕು.

ಶ್ರೀ ಎ. ಬಿ. ಜಕನೂರ್.—ರೇಷ್ಮೆ ಇಲಾಖೆ ಒಂದೇ ಅಲ್ಲ ವ್ಯವಸಾಯ ಇಲಾಖೆಯಲ್ಲೂ ಕೂಡ ಅದೇ ರೀತಿ ಫಿಲ್‌ಅಪ್ ಮಾಡುತ್ತಿದ್ದಾರೆ. ಕೆಲವೊಂದು ಕಡೆ ಹಾಗೆ ಇದೆ ಎಲ್ಲವನ್ನೂ ಒಮ್ಮೆಲೆ ಸ್ಟಾಪ್ ಮಾಡುವುದಕ್ಕೆ ಆಗುವುದಿಲ್ಲ. ಫ್ಯಾಕ್ಟರಿಗಳಲ್ಲೂ ಕೂಡ ಕ್ಯಾಸುಯಲ್ ಲೇಬರ್ ತೆಗೆದುಕೊಳ್ಳುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಡೈಲಿವೇಜಸ್ ಆಗಿ ತೆಗೆದುಕೊಳ್ಳುತ್ತಿದ್ದಾರೆ. ರೈಲ್ವೆಯಲ್ಲೂ ಕೂಡ ಅದೇ ರೀತಿ ತೆಗೆದುಕೊಳ್ಳುತ್ತಿದ್ದಾರೆ ಅದನ್ನು ನಾವು ನೋಡುತ್ತಿದ್ದೇವೆ. ಇದನ್ನು ಹಂತಹಂತವಾಗಿ ಯಾವ ರೀತಿಯಾಗಿ ಸ್ಟಾಪ್ ಮಾಡಬೇಕು ಎನ್ನುವ ವಿಚಾರವನ್ನು ಸರ್ಕಾರ ಮಾಡುತ್ತಿದೆ. ಇದನ್ನು ಸಾಧ್ಯವಾದ ಮಟ್ಟಿಗೂ ಬೇಗನೆ ತಪಿ ಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಸೋನರಿ ಟ್ರೇಡ್‌ನ್ನು ಐ.ಟಿ.ಐ.ನಲ್ಲಿ ಶುರುಮಾಡಬೇಕೆಂದು ಒಂದು ಯೋಗ್ಯ ಸಲಹೆಯನ್ನು ಕೊಟ್ಟರು, ಅದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದನ್ನು ಎಕ್ಸಾಮಿನ್ ಮಾಡಿ ನೋಡುತ್ತೇನೆ. ನಮ್ಮ ಸಯನಕ್‌ರವರು ಮಾತನಾಡುತ್ತಾ......

ಶ್ರೀ ಎಚ್. ಎಲ್. ತಿಮ್ಮೇಗೌಡ.—ಲೇಬರ್ ಆಕ್ಟ್‌ನ್ನು ತಿದ್ದುಪಡಿ ಮಾಡುವ ಬಗ್ಗೆ ಹೇಳಲಿಲ್ಲ.

ಶ್ರೀ ಎ. ಬಿ. ಜಕನೂರ್.—ಕೇಂದ್ರ ಸರ್ಕಾರದವರು ಈ ಆಕ್ಟ್‌ನ್ನು ತಿದ್ದುಪಡಿ ಮಾಡಬೇಕೆಂದು ಇದ್ದಾರೆ. ಅವರು ಮಾಡಲಿಲ್ಲ ಅಂದರೆ ನಾನೇ ಲೋಕಲ್ ಅಮೆಂಡ್‌ಮೆಂಟ್ ತರಹ ತರಬೇಕೆಂದು ಮಾಡಿದ್ದೇನೆ. In the meantime, there is a move from the Central Government itself. ಅದಕ್ಕೆ ಒಂದು ಕಾನ್ಫರೆನ್ಸ್ ಕರೆದಿದ್ದಾರೆ, ಅದರಲ್ಲಿ ಈ ಆಕ್ಟ್ ವಿಚಾರ ಬರುತ್ತದೆ. ಮಾನ್ಯ ಸಯನಕ್‌ರವರು ಮಾತನಾಡುತ್ತಾ ನಿಪ್ಪಾಣಿ ಬೀಡಿ ವರ್ಕರ್ಸ್ ಬಗ್ಗೆ ಮಾತ ನಾಡಿದರು. ಬೀಡಿ ವರ್ಕರ್ಸ್ ವಿಚಾರದಲ್ಲಿ ಈಗಾಗಲೇ ನಮ್ಮ ಅಧಿಕಾರಿಗಳು ಹೋಗಿ ಮಾತುಕತೆ ನಡೆಸಿ ಬಂದಿದ್ದಾರೆ. A candidate who has registered his name in the employment exchange just before 2 months gets an interview. but a man who has registered his name 4 years back cannot get an interview. ಹಾಗೆಯೇ ಎಂಪ್ಲಾಯಿಮೆಂಟ್ ವಿಚಾರದಲ್ಲಿ ಹೇಳಿದರು. ನಾವು ಈಗಾಗಲೇ ಎಲ್ಲರಿಗೂ ಸೂಚನೆ ಕೊಟ್ಟಿದ್ದೇವೆ. ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಇರತಕ್ಕ, ಸೀನಿಯಾರಿಟಿಯನ್ನು ಹಿಂದುಮುಂದು ಮಾಡತಕ್ಕವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ. ಹಾಗೆ ಏನಾದರೂ ಮಾಡಿದರೆ ಉಗ್ರ ಕ್ರಮ ಕೈಗೊಳ್ಳುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ. ಹಾಗೇನಾದರೂ ಮಾಡುತ್ತಿರುವುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಮತ್ತೊಂದು ವಿಚಾರ ನನ್ನ ಮೇಲೆ ಆರೋಪಣೆ ಮಾಡಿದರು. ನಮ್ಮಲ್ಲಿ Manickbag Industries ಇದೆ, ಅವರೂ ಬೇರೆ ಬೇರೆ ಹೆಸರುಗಳಲ್ಲಿ ೬ ಯೂನಿಟ್‌ಗಳನ್ನು ಅವರು ಹೊಂದಿದ್ದಾರೆ. ಷಹಾ ಅಂದ ಕೂಡಲೇ ಅವರೂ ಕೂಡ ಜೈನರು ಎಂದು ತಿಳಿದು ಆ ಮಾತನ್ನು ಹೇಳಿದರು. ನನಗೆ ಎಲ್ಲರೂ ಒಂದೇ.

ಅಧ್ಯಕ್ಷರು.—ಅವರು ಜೈನರಲ್ಲ, ಅವರು ಗುಜ್ಜರ್.

ಶ್ರೀ ಎ. ಬಿ. ಜಕನೂರ್.—ಅವರು ಜೈನರೆಂದು ತಿಳಿದುಕೊಂಡು, ಅವರು ಒಂದೇ ಕಮ್ಯೂನಿಟಿ ಎಂದು ಹೇಳಿದರು. ಆ ರೀತಿ ನೋಡುವುದಕ್ಕೆ ನಾನು ಹೋಗುವುದಿಲ್ಲ. ನಿನ್ನೆ ಬೆಳಗಾಂಗೆ ಹೋಗಿದ್ದಾಗ ಲೇಬರ್ ಲೀಡರ್‌ಗಳನ್ನು ಕರೆಸಿ ಅವರ ಬೇಡಿಕೆಗಳನ್ನು ಮುಗಿಸಿ ಬಂದಿದ್ದೇನೆ. ನಂತರ ಏನು ತೊಂದರೆ ಯಾಯಿತೋ ಏಕ್‌ದಮ್ ಆಗಿ ಸ್ಟ್ರೈಕ್ ನಡೆಸಿದ್ದಾರೆ ನಮ್ಮ ಆಫೀಸರ್‌ಗಳು ಕೂಡ ಇದನ್ನು ತೀರ್ಮಾನ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೂ ಕೇಳಲಿಲ್ಲ. The Government has already taken a decision to ban the strike and refer it to execution.

೭ ಪಿ.ಎಂ.

ಅದಕ್ಕೆ ನಾನು ಏನೂ ಮಾರಕವಾಗಿ ನಡೆದುಕೊಂಡಿಲ್ಲಾ. ಮಾನ್ಯ ಮಿತ್ರರು ನನ್ನ ಮೇಲೆ ಏನಾದರೂ ವೈಯುಕ್ತಿಕವಾಗಿ ಹೇಳಿದ್ದರೆ ನಾನು ಹೇಳುತ್ತಿದ್ದೆ. ಅವರು ಆ ರೀತಿಯಾಗಿ ಭಾವನೆ ಇಟ್ಟು ಕೊಂಡು ಹೇಳಲಿಲ್ಲಾ ಎಂದು ನಾನು ಅಂದುಕೊಂಡಿದ್ದೇನೆ.

MR. SPEAKER.—He is not married.

SRI A. B. JAKANUR.—That may be a draw-back. As a Trade Union Leader, he has done his job.

ಮಾನ್ಯ ಸದಸ್ಯರುಗಳಾದ ಶ್ರೀ ಮಾಯಣ್ಣನವರು ಮತ್ತು ಶ್ರೀ ಚಂದ್ರಶೇಖರ್‌ರವರು ತಿಮ್ಮೇಗೌಡರು ಇನ್ನೂ ಅನೇಕ ಸದಸ್ಯರುಗಳು ನನ್ನ ಬೇಡಿಕೆಯ ಮೇಲೆ ಉತ್ತಮವಾದ ಸಲಹೆಗಳನ್ನು, ಕೊಟ್ಟಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಸದ್ಯ ಟೀಕೆ ಮಾಡಿದ್ದಾರೆ ಅಂತ ಹೇಳಲಿಲ್ಲವಲ್ಲಾ.

ಶ್ರೀ ಎ.ಬಿ. ಜಕನೂರ್.—ಯಾವುದನ್ನು ಟೀಕೆ ಮಾಡಬೇಕಾದರೂ ಸಹ ಒಂದು ಮಿತಿ ಬೇಕು. ಆ ಮೀತಿ ಮೀರಿ ಟೀಕೆ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಅನೇಕ ಮಾನ್ಯ ಸದಸ್ಯರುಗಳನ್ನು ನನ್ನ ಬೇಡಿಕೆ ಮೇಲೆ ಏನು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ನಾನು ಕೂಲಂಕಷವಾಗಿ ಪರಿಶೀಲಿಸಿ ಅದರಲ್ಲಿ ಯಾವ್ಯಾವುದನ್ನು ಯೋಗ್ಯ ಇದೆ. ಅದರಲ್ಲಿ ಯಾವ್ಯಾವುದನ್ನು ಅಮಲ್‌ನಲ್ಲಿ ತರುವುದಕ್ಕೆ ಸಾಧ್ಯ ಅನ್ನುವುದನ್ನು ನೋಡಿ ಸಾಧ್ಯವಾದುದನ್ನು ಅಮಲ್‌ನಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ, ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರಿಂದ ಹೆಚ್ಚು ವೇಳೆ ತೆಗೆದುಕೊಂಡಿದ್ದಕ್ಕಾಗಿ ಅವರನ್ನು ವಂದಿಸಿ ಹಾಗೂ ಈ ಸಭೆಯು ನನ್ನ ಬೇಡಿಕೆಗೆ ಬೆಂಬಲವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮೈಕಲ್ ಫರ್ನಾಂಡಿಸ್.—ಅಧ್ಯಕ್ಷರೇ, ನಾನು ಒಂದೆರಡು ಕ್ಲಾರಿಫಿಕೇಷನ್ ಅನ್ನು ಕೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಹೇಳುವುದೇನೆಂದರೆ ಮಾನ್ಯ ಮಂತ್ರಿಗಳು ಮಿನಿಮಮ್ ವೇಜಸ್ ಬಗ್ಗೆ ಒಂದು ದೊಡ್ಡ ಪಟ್ಟಿಯನ್ನು ಓದಿದರು, ಆದರೆ ಅದರಲ್ಲಿ ಮಿನಿಮಮ್ ವೇಜಸ್‌ಗೆ ರೆಕಮೆಂಡೇಷನ್ ಮಾಡಿದ್ದೇವೆ ಅಂತ ಏನೂ ಹೇಳಲಿಲ್ಲಾ. ಅವರು ಒಂದು ಸೈಂಟಿಫಿಕ್ ಆಗಿ ಏನು ಫಿಕ್ಸ್ ಮಾಡಿದ್ದಾರೋ, ಆ ಬಗ್ಗೆ ಏನು ತಯಾರು ಮಾಡಿದ್ದಾರೋ ಅದು ಅಷ್ಟು ಸಮಾಧಾನಕರವಾಗಿಲ್ಲಾ, ಅದು ಅಷ್ಟು ಉಪಯೋಗವಾಗುವುದಿಲ್ಲಾ. ಈ ಒಂದು ಓನ್ನೆಲೆಯಲ್ಲಿ ಹೇಳಬೇಕಾದರೆ ನೀವು ಕೊಡತಕ್ಕಂಥಾ ಆ ವೇಜಸ್‌ನಿಂದ ಅವರು ತಮ್ಮ ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ ಮಿನಿಮಮ್ ವೇಜಸ್ ಅನ್ನು ಹೀಗೆ ಮಾಡಿಕೊಂಡು ಹೋಗುತ್ತಾ ಇದ್ದರೆ ೪-೫ ವರ್ಷವಾದ ಮೇಲೆ ಮತ್ತೆ ಅದನ್ನು ಛೇಂಜ್ ಮಾಡಬೇಕಾಗಿ ಬರುತ್ತದೆ. ಆವಾಗ ಅದರ ಹಿಂದಿನ ಡ್ಯೂಸ್ ಕೊಡಬೇಕಾಗಿ ಬರುತ್ತದೆ. ಕಾರಣ ಈ ಕನ್ ಸ್ಯೂಮರ್ಸ್ ಪ್ರೈಸ್ ಇಂಡೆಕ್ಸ್ ಏನು ಇರುತ್ತದೋ ಅದು ಇದರ ಡಬ್ಬಲ್ ಆಗುತ್ತದೆ. ಹಿಂದೆ ೫ ಪಾಯಿಂಟ್ಸ್ ಇದ್ದುದು ಆವಾಗ ೬೦ ಪಾಯಿಂಟ್ಸ್‌ಗೆ ಬರುತ್ತದೆ, ಜಾಸ್ತಿಯಾಗುತ್ತದೆ. ಆದುದರಿಂದ your minimum wages will be of no consequence at the end of the year. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಈ ಮಿನಿಮಮ್ ವೇಜಸ್ ಜೊತೆಯಲ್ಲೇ ಕನ್‌ಸಾಲಿಡೇಷನ್ ವೇಜಸ್ ಅನ್ನೂ ಲಿಂಕ್ ಮಾಡಿ ಅದಕ್ಕೊಂದು ನ್ಯೂಟ್ರಲೈಸೇಷನ್ ರೇಟ್ ಅನ್ನು ಸೇರಿಸಿ ಮಾಡಿದರೆ ಮುಂದೆ ಎಸ್ಕಲೇಷನ್‌ಗೆ ಅವಕಾಶವಾಗುವುದಿಲ್ಲ. ಹಾಗೆ ಇದರಲ್ಲಿ ಪ್ರೊವೈಡ್ ಮಾಡಿದರೆ ಅನುಕೂಲವಾಗುತ್ತದೆ ಇಲ್ಲದೇ ಹೋದರೆ ಆ ಕಾರ್ಮಿಕರಿಗೆ ವಂಚನೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

ಎರಡನೆಯದಾಗಿ ಪ್ರಿಂಟಿಂಗ್ ಪ್ರೆಸ್ ವಿಚಾರ. ಈ ಪ್ರಿಂಟಿಂಗ್ ಪ್ರೆಸ್‌ನಲ್ಲಿ ೨೫೦ ಜನ ಕಾರ್ಮಿಕರು ಕಡಿಮೆ ವೇತನ ಏನು ಪಡೆಯುತ್ತಿದ್ದಾರೆ ಅದರಲ್ಲಿ ಬಹುತೇಕ ಜನರನ್ನು ಇನ್ನೂ ಪರ್ಮನೆಂಟ್ ಮಾಡಿಲ್ಲಾ. ಅಲ್ಲಿ ವೇಕೆನ್ಸೀಸ್ ಇದೆ, ತಾವು ಇಲ್ಲ ಎಂದು ಹೇಳಬಹುದು. ತಮಗೆ ಹೇಳಬೇಕಾದರೆ

ಅವರುಗಳೆಲ್ಲಾ ಅಲ್ಲಿ ೧೭ ವರ್ಷದಿಂದಲೂ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಇನ್ನು ೧೧ ವರ್ಷ ಹೀಗೆಯೇ ಅಲ್ಲಿ ಕೆಲಸ ಮಾಡಿದರೆ ಅವರ ಸರ್ವಿಸಸ್ ಎಲ್ಲಾ ಆಗಿಬಿಡುತ್ತದೆ. ಆ ಮೇಲೂ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಅವರಿಗೆಲ್ಲಾ ಪರ್ಮನೆಂಟ್ ಕೆಲಸ ಕೊಡುವಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಅಲ್ಲಲ್ಲಿ ಕೆಲವರು ಕ್ಯಾಷುಯಲ್ ಲೇಬರರ್ಸ್ ಇದ್ದಾರೆ. ಅವರಿಗೆ ಕೊಡುವ ವೇತನ ಒಂದು ದಿವಸಕ್ಕೆ ೭–೮ ರೂಪಾಯಿ ಮಾತ್ರ. ಇಷ್ಟು ಕಡಿಮೆ ವೇತನ ಕೊಡುವುದು ಸರಿಯಲ್ಲ. ಖಾಯಂ ದಾರರು ಏನು ಕೆಲಸ ಮಾಡುತ್ತಾರೋ, ಯಾವರೀತಿ ಕೆಲಸ ಮಾಡುತ್ತಾರೋ ಅದೇ ರೀತಿ ಇವರೂ ಕೆಲಸ ಮಾಡುತ್ತಾರೆ, ಅವರಿಗೆಲ್ಲಾ ಪರ್ಮನೆಂಟ್ ದಾರರಿಗೆ ಯಾವ ವಿಧವಾದ ವೇತನವನ್ನು ಕೊಡು ತ್ತಾರೋ ಅದೇ ರೀತಿ ವೇತನ ಇವರಿಗೂ ಕೊಡಬೇಕೆಂದು ಹೇಳುತ್ತೇನೆ. ಕ್ಯಾಷಯಲ್ ಲೇಬರರ್ಸ್ ಅಂತ ಒಂದು ತಿಂಗಳಿಗೋ, ಎರಡು ತಿಂಗಳಿಗೋ ಅಥವಾ ಆರು ತಿಂಗಳಿಗೋ, ತೆಗೆದುಕೊಂಡು ಕೆಲಸ ಮಾಡಿಸಿದ್ದರೆ ಅದು ಬೇರೆ ವಿಚಾರ. ಇದು ಹಾಗಿಲ್ಲ. ಆದುದರಿಂದ ಅಂಥವರಿಗೆ ಪರ್ಮನೆಂಟ್ ಕೆಲಸ ಮಾಡುವವರಿಗೆ ಯಾವರೀತಿ ವೇತನ ಕೊಡುತ್ತೀರೋ ಅದೇ ತರಹ ವೇತನವನ್ನು ಇವರಿಗೆ ಕೊಡಿಸು ತ್ತೀರೋ ಇಲ್ಲವೋ ಹೇಳಿ.

ಮೂರನೆಯದಾಗಿ ಪಬ್ಲಿಕ್ ಸೆಕ್ಟಾರ್ ಬಗ್ಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ನಾನು ಹೇಳಿದ ವಿಚಾರಗಳ ಬಗ್ಗೆ ಅದಕ್ಕೆ ಪ್ರತ್ಯುತ್ತರವಾಗಿ ಕೆಲವು ವಿಚಾರಗಳನ್ನು ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ ನಾನು ಹೇಳಿದ್ದು ಸತ್ಯ. ತಾವೂ ಹೇಳಿದಿರಿ, ೧೧ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳನ್ನು ನೋಡಿದಾಗ ಅವರೂ ಸಹ ಭರವಸೆ ಕೊಟ್ಟಿದ್ದರು. ನಾವು ಲಿಖಿತ ಮೂಲಕ ಕೊಟ್ಟಿ ದ್ದೇವೆ. ಅವರು ಹೇಳಿದ ಪ್ರಕಾರ ನಾವು ೧೨ನೇ ತಾರೀಖು ಸ್ಟ್ರೈಕ್ ಅನ್ನು ಕಾಲ್ ಆಫ್ ಮಾಡಿ ಆಯಿತು. ನಾವು ಬರಹ ಮೂಲಕ ಕೊಟ್ಟಿರುವುದಕ್ಕೆ ಅವರಿಂದ ನಾವು ಅಕ್ನಾಲ್‌ಡ್ಜೆಮೆಂಟನ್ನೂ ತೆಗೆದುಕೊಂಡಿದ್ದೇವೆ. ತಾವು ಏನು ಭರವಸೆ ಕೊಟ್ಟಿದ್ದೀರಿ, ಪ್ರಧಾನ ಮಂತ್ರಿಯವರು ಏನು ಹೇಳಿದರು, ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದರು ಎಲ್ಲಾ ಗೊತ್ತಿದೆ. ಆದುದರಿಂದ ಸುಮ್ಮ ಸುಮ್ಮನೆ ಹೀಗೆ ಹೇಳಿ ಈ ಸದನವನ್ನು ಮಿಸ್‌ಲೀಡ್ ಮಾಡುವುದಕ್ಕೆ ಹೋಗಬೇಡಿ. ೭–೮ ದಿವಸದೊಳಗೆ ಈ ಕಾರ್ಖಾನೆಗಳು ಪ್ರಾರಂಭವಾಗಬಹುದು ಎಂದು ನಾವು ಕಾದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಇನ್ನು ಒಂದೆರಡು ವಾರದಲ್ಲಿ ಸೆಟಲ್‌ಮೆಂಟ್ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರು. ನಾವು ಒಂದೆರಡು ತಿಂಗಳು ಮುಂಚೆ ನೋಟೀಸ್ ಕೊಟ್ಟಿದೇವೆ ನಂತರ ಹಂಗರ್ ಸ್ಟ್ರೈಕ್ ಮಾಡಿದ್ದೇವೆ. ನಾವು ಪ್ರತಿಯೊಂದಕ್ಕೂ ಕಾನೂನು ಪ್ರಕಾರವೇ ನಡೆದಿದ್ದೇವೆ, ನಾವು ಕ್ರಮಬದ್ಧವಾಗಿ ನಡೆದರೂ ಸಹಿತ ತಾವು ನನ್ನ ಮೇಲೆ ಅಪಾದನೆ ಮಾಡುವುದು ಸರಿಯೋ? ಆದುದರಿಂದ ಏನಾದರೂ ಆಪಾದನೆ ಇದ್ದರೆ ನಿಮ್ಮ ಮೇಲೆ ಇರುತ್ತದೇ ವಿನಾ ನಮ್ಮ ಮೇಲೆ ಬರುವುದಿಲ್ಲ. ನಾವು ಕ್ರಮಬದ್ಧವಾಗಿ ನಡೆದುಕೊಂಡು ಹೋಗಿರು ವುದರಿಂದ ಅಡ್ಜುಡಿಕೇಷನ್‌ಗೆ ನಾವೇನೂ ಬರಬೇಕಾಗಿಲ್ಲಾ, ನೀವೇ ನೋಡಿ ಅಡ್ಜುಡಿಕೇಷನ್‌ಗೆ ರೆಫರ್ ಮಾಡಬಹುದಾಗಿತ್ತಲ್ಲಾ, ನಾವು ಏತಕ್ಕಾಗಿ ಹಂಗರ್ ಸ್ಟ್ರೈಕ್ ಮಾಡಿದೆವು ಅದರ ಬಗ್ಗೆ ಡಿಸ್‌ಪ್ಯೂಟ್ ಏನು ಇದೆ ಅದನ್ನು ಇನ್ನೂ ಓಪನ್ ಆಗಿಯೇ ಇಟ್ಟಿದ್ದೇವೆ. The Government said that they do not want to refer it to adjudication.

Mr. Stephen said it and they have pre determined it. It is not his right. It is your right to decide it for adjudication or not.

SRI A.B. JAKANUR.—This is after all a Preliminary Notification ಮಾನ್ಯ ಸದಸ್ಯರು ಕಮಿಟಿಯಲ್ಲಿ ಇದ್ದಾರೆ. ಅವರು ಸ್ಟೇಟ್ ಅಡ್ವೈಸರ್ ಬೋರ್ಡ್‌ನಲ್ಲಿ ಇದ್ದಾರೆ. ಅದರಲ್ಲಿ ಹೇಳಲಿ.

SRI MICHAEL B. FERNANDEZ.—Why do you make such a proposal ? How do you allow it ?

SRI A. B. JAKANUR,--This is not the final notification. Why do you make haste of it ? I do not understand. It is 15 paise per day. You must note down that point.

ಶ್ರೀ ಮೈಕಲ್ ಫರ್ನಾಂಡಿಸ್.—೧೯೬೦ರ ಇಂಡೆಕ್ಸ್ ವೈಟೇಜ್ ಅನ್ನು ತಿಳಿದುಕೊಳ್ಳದೇ ಇದನ್ನು ಮಾಡಿದ್ದೀರಿ. ತಮ್ಮ ಮುಂದೆಯೇ ಬರುತ್ತದೆ. ಈ ಸ್ಟ್ರೈಕ್ ವೇಜಸ್ ಬಗ್ಗೆ ಮತ್ತು ಲಾಕ್‌ಔಟ್ ಬಗ್ಗೆ ವಿಚಾರ ಮುಂದೆ ತಮ್ಮ ಮುಂದೆಯೇ ಬರುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರದವರ ಧೋರಣೆ ಏನು ಇದೆ ತಿಳಿದುಕೊಂಡು ಕ್ಲಾರಿಫೈ ಮಾಡಿ ಈ ಡಿಸ್‌ಪ್ಯೂಟ್ ಅನ್ನು ಅಡ್ಜುಡಿಕೇಷನ್‌ಗೆ ರೆಫರ್ ಮಾಡುತ್ತೀರೋ ಇಲ್ಲವೋ ಹೇಳಬೇಕು.

ಶ್ರೀ ಎ.ಬಿ. ಜಕನೂರ್.—ಕನ್‌ಸ್ಯೂಮರ್ ಪ್ರೈಸ್ ಇಂಡೆಕ್ಸ್ ಹೆಚ್ಚಾದಾಗಲೆಲ್ಲಾ ಮಿನಿಮಮ್ ವೇಜಸ್ ಅನ್ನು ಫಿಕ್ಸ್ ಮಾಡಿದ್ದೇವೆ. ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಈ ನೋಟಿಫಿಕೇಷನ್ ಅನ್ನು ಸರಿಯಾಗಿ ನೋಡಲಿಲ್ಲಾ ಅಂತ ಕಾಣುತ್ತದೆ. ಈ ನೋಟಿಫಿಕೇಷನ್‌ನಲ್ಲಿ ಏನು ಇದೆ ಅನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ.—

"Further the Government fixes the cost of living allowance, payable with effect from 1-4-1981 in addition to the basic rates of wages to the employees employed in the Scheduled employment at the rate of Rs. 0-15 for every five points increase in fhe State average "Consumer Price Index" in the series of 1960-100 base over and above 460 points, per slab of every 8,10 base wage for all categories of workers."

SRI MICHAEL B. FERNADES.—Fifteen paise for every five points. It is an insult to the D.A. scheme. Do not do that. What is the scientific brain behind it? It means that only a rise of Rs 5 for Rs. 100 Who decided it? That brain must be examined and sent to the Mental hospital.

ಶ್ರೀ ಎ.ಬಿ. ಜಕನೂರ್.—ಇದು ಬರೇ ಪ್ರಿಲಿಮಿನರಿ ನೋಟಿಫಿಕೇಷನ್ ಮಾತ್ರ. ನೀವು ಅಲ್ಲಿಯು ಲೇಬರ್ ಲೀಡರ್ ಆಗಿ ಇದ್ದೀರಿ. ಮ್ಯಾನೇಜ್‌ಮೆಂಟ್‌ನಲ್ಲೂ ಇದ್ದೀರಿ. ಸ್ಟೇಟ್ ಅಡ್ವೈಸರಿ ಬೋರ್ಡ್‌ನಲ್ಲಿ ಹೆಚ್ಚು ಮಾಡಿ ಎಂದು ಹೇಳಬಹುದಲ್ಲಾ, ಸ್ಟೇಟ್ ಅಡ್ವೈಸರಿ ಬೋರ್ಡ್‌ನವರು ಬೇಕಾದರೆ ಮಾಡಬಹುದು. This isnot a final Notification. The Government will consider the advice of the Board, the Trade Union leaders and after considering these suggestions, the Government will consider it. ತಾವು ಒಮ್ಮೆಲೇ ಕೋಪಮಾಡಿಕೊಳ್ಳಬೇಡಿ. ನೀವು ಹೇಳಿದ್ದನ್ನು ಸೇರಿಸುವುದಕ್ಕೆ ಈ ನೋಟಿಫಿಕೇಷನ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ. ಮುಂದೆ ಅದರಂತೆ ಫಿಕ್ಸ್ ಮಾಡುತ್ತೇವೆ. ಇನ್ನು ಕೆಲವು ಮಾನ್ಯ ಸದಸ್ಯರುಗಳು ಈ ಕ್ಯಾಷುಯಲ್ ಲೇಬರರ್ಸ್ ಬಗ್ಗೆ ಮುಂತಾದ ವಿಷಯಗಳ ಬಗ್ಗೆ ಏನೇನು ಹೇಳಿದ್ದಾರೋ ಅದನ್ನೆಲ್ಲಾ ಗಮನಿಸಿ ಅದನ್ನು ಯಾವರೀತಿ ಮಾಡಬೇಕು ಅನ್ನುವುದನ್ನು ಎಕ್ಸಾಮಿನ್ ಮಾಡಬೇಕಾಗುತ್ತದೆ. ಅದರಲ್ಲಿ ಯಾವ್ಯಾವುದು ಅಮಲ್‌ನಲ್ಲಿ ಬರುವುದಕ್ಕೆ ಸಾಧ್ಯವೋ ಎನ್ನುವುದನ್ನು ಪರಿಶೀಲಿಸುತ್ತೇನೆ.

MR. SPEAKER.—The question is ;

"That the respective sums not exceeding the amounts mentioned in the list of Demands inclusive of the sum

granted 'on account' be granted to the Government to defray the charges which will come in course of payment during the financial year for the period ending 31st March 1982 in respect of Demand Nos. 42, 53 and 60."

The Motion was adopted and the respective sums were granted

As ordered by the Chair the Motion of Demands for grants adopted by the House are reproduced below :

DEMAND NO. 42

"That a sum not exceeding Rs. 11,57,96,000 on Revenue Account and Rs. 1,10,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March,1982 in respectof "Area Development and other items of Planning department."

DEMAND NO. 53

"That a sum not exceeding Rs.34,00,,000 on Revenue Account inclusive o the sum granted 'on account' be granted to the Government to defray the charges which will come in course of payment during the financial year ending 31st day of March, 1982 in respect of "Wakfs".

DEMAND NO. 60

"That a sum not exceeding Rs. 14,23,87,000 on Revenue Account and Rs. 4,00,000 on Capital Account inclusive of the sum granted 'on account'be granted to the Government to defray thecharges which will come in course of payment during the financial year ending 31st day of March 1982 in respect of "Labour and Employment."

ANNOUNCEMENT

MR. SPEAKER.—The Business Adisory Committee which met today have recommended that the present sittin.s of the House may be adjourned on the 31st July, 1981.

The Committee have recommended the following programme of work :

Monday, the 27th and Tuesday, the 28th July, 1981.	Discussion and voting of demands for grants relating to Chief Minister
Wednesday, the 29th July, 1981	Morning Session—Reply by Chief Minister